ಶ್ರೀ ವಸಂತ ವಿ. ಸಾಲಿಯಾನ : (ಮೀನುಗಾರಿಕೆ ಮತ್ತು ಬಂದರುಗಳ ರಾಜ್ಯ ಸಚಿವರು ಸನ್ಮಾನ್ಯ ಅಧ್ಯಕ್ಷರೆ, 1993ರ ಕರ್ನಾಟಕ ಮೀನುಗಾರಿಕೆ ಬಂದರು ಸರಹದ್ದು ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ಛೇರ್ಮನ್ : ಪ್ರಸ್ತಾವ ಏನೆಂದರೆ ''1993ರ ಕರ್ನಾಟಕ ಮೀನುಗಾರಿಕೆ ಬಂದರು ಸರಹದ್ದು ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ವಸಂತ ವಿ. ಸಾಲಿಯಾನ (ಮೀನುಗಾರಿಕೆ ಮತ್ತು ಬಂದರುಗಳ ರಾಜ್ಯ ಸಚಿವರು) ಸನ್ಮಾನ್ಯ ಅಧ್ಯಕ್ಷರೆ '' 1993ರ ಕರ್ನಾಟಕ ಮೀನುಗಾರಿಕೆ ಬಂದರು ಸರಹದ್ದು ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.''

ಛೇರ್ಮನ್ : ವಿಧೇಯಕವನ್ನು ಮಂಡಿಸಲಾಗಿದೆ.

ಅಧ್ಯಕ್ಷರು : ಮಾನ್ಯ ವೈ. ಕೆ. ರಾಮಯ್ಯನವರು ನಿನ್ನೆಯ ದಿನ ಆಯವ್ಯಯದ ಮೇಲೆ ಮಾತನಾಡುತ್ತಿದ್ದರು, ಅದನ್ನು ಇಂದು ಮುಂದುವರೆಸಬಹುದು.

ಶ್ರೀ ಆರ್. ವಿ. ದೇಶಪಾಂಡೆ : ಅಧ್ಯಕ್ಷರೆ, ಇವತ್ತು ಮುಂಜಾನೆ ರೈತರಿಗೆ ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ಮನ್ನಾ ಮಾಡಬೇಕೆಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೆವು. ಅದರ ಬಗ್ಗೆ ಮಾನ್ಯ ಅಧ್ಯಕ್ಷರು ವಿರೋಧ ಪಕ್ಷದ ನಾಯಕರನ್ನು ಅವರ ಕೊಠಡಿಗೆ ಕರೆದು ಮಾತನಾಡುತ್ತೇನೆಂದು ಹೇಳಿದರು, ಅದರ ಪ್ರಕಾರ ಅವರು ನಮ್ಮನ್ನು ಕರೆದು ಮಾತನಾಡಿದ್ದಾರೆ. ಅವರು ಬಂದು ಆ ನಿಲುವಳಿ ಸೂಚನೆಯ ಬಗ್ಗೆ ಅಭಿಪ್ರಾಯವನ್ನು ಕೊಟ್ಟರೆ ಒಳ್ಳೆಯದು. ಏಕೆಂದರೆ ನಮ್ಮ ಕೆಲವು ಸದಸ್ಯರುಗಳು ಈಗ ಹೊರಗೆ ಇದ್ದಾರೆ.

ಛೇರ್ಮನ್ : ಅಧ್ಯಕ್ಷರು ಇಲ್ಲ, ಅವರು ಬಂದು ಹೇಳುತ್ತಾರೆ. 1993-94ರ ಆಯವ್ಯಯದ ಮೇಲೆ ಸಾಮಾನ್ಯ ಚರ್ಚೆ (ಮುಂದುವರೆದಿದೆ).

* ಶ್ರೀ ವೈ. ಕೆ. ರಾಮಯ್ಯ : ಸನ್ಮಾನ್ಯ ಅಧ್ಯಕ್ಷರೆ, 1993-94ರ ಆಯವ್ಯಯದ ಮೇಲೆ ಚರ್ಚೆ ಮಾಡುತ್ತಿದ್ದೇವೆ. ನಾನು ಈಗಾಗಲೆ ತಿಳಿಸಿದಂತೆ 8ನೇ ಪಂಚವಾರ್ಷಿಕ ಯೋಜನೆಯ ಮೂರನೇ ವರ್ಷದಲ್ಲಿದ್ದೇವೆ. ನಿನ್ನೆ ಯೋಜನಾ ಮಂತ್ರಿಗಳು 18 ಸಾವಿರ ಕೋಟಿ ಎಂದು ಹೇಳಿದರು. ಆಮೇಲೆ ಅವರೇ ಬಂದು ಅದು 12,300 ಕೋಟಿ ಎಂದು ಹೇಳಿದರು. 8ನೇ ಪಂಚವಾರ್ಷಿಕ ಯೋಜನೆಯಲ್ಲಿ ನಮಗೆ ಲಭ್ಯವಿರುವ 12,300 ಕೋಟಿಯಲ್ಲಿ ಮೊದಲನೆಯ ವರ್ಷ 1,915 ಕೋಟಿ, ಈ ವರ್ಷ 3000 ಕೋಟಿ ಖರ್ಚು ಮಾಡುವಂಥ ಒಂದು ಪ್ರಸ್ತಾವನೆಯನ್ನು ನಾವು ಮುಂದಿಟ್ಟಿದ್ದೇವೆ. ನಾನು ಈ ಆಯವ್ಯಯವನ್ನು ವಿಶ್ಲೇಷಣೆ ಮಾಡುವಾಗ ಇದು ಸಂಪೂರ್ಣವಾಗಿ ಕೆಲಸಕ್ಕೆ ಬಾರದೇ ಇರತಕ್ಕ, ಏನೂ ಇಲ್ಲದೇ ಇರತಕ್ಕ

ಅಥವಾ ಅನಾವಶ್ಯಕವಾಗಿದೆ ಎನ್ನತಕ್ಕ ಶಬ್ದವನ್ನು ಉಪಯೋಗಿಸಿ ಸಾರಾಸಗಟಾಗಿ ಇದನ್ನು ತಳ್ಳಿಹಾಕುವುದಕ್ಕೆ ಸಿದ್ಧನಿಲ್ಲ.

ಈ ಆಯವ್ಯಯದಲ್ಲಿ ಆರ್ಥಿಕ ಮಂತ್ರಿಗಳಾದ ಮಾನ್ಯ ಮೊಯಿಲಿಯವರು ಮಾಡಿರತಕ್ಕ ಕಸರತ್ತನ್ನು ನೋಡಿದರೆ ಅಯ್ಯೋ ಅನ್ನಿಸುತ್ತದೆ. ಅತ್ಯಂತ ಸಂಧಿಗ್ಧ ಪರಿಸ್ಥಿತಿಯಲ್ಲಿ ಈ ಆಯವ್ಯಯ ಇರುವುದನ್ನು ನಾವು ಕಾಣಬಹುದು. ಒಂದು ಕಡೆ ಆಯವ್ಯಯದ ದರದ ಹೆಚ್ಚಳಕ್ಕಾಗಿ ಅವರು ಪಟ್ಟಿರುವ ಪಾಡನ್ನು ಯಾರಾದರೂ ಗಮನಿಸಬಹುದು. ಅದೇ ರೀತಿ ಅಭಿವೃದ್ಧಿ ಕಾರ್ಯಗಳಿಗೆ ಹಣವನ್ನು ಉಳಿಸಿಕೊಳ್ಳುವುದಕ್ಕೆ ಅವರು ಮಾಡಿರತಕ್ಕ ಪ್ರಯತ್ನ ಎಷ್ಟೇ ದೊಡ್ಡದಾದರೂ ಆ ಪ್ರಯತ್ನ ವಿಫಲತೆಯನ್ನು ನೋಡಬಹುದು. ಈ ಆಯವ್ಯಯ ನನ್ನ ದೃಷ್ಟಿಯಿಂದ ಹೇಳುವುದಾದರೆ ಇದು ಕನ್ನಡಿಯೊಳಗಿನ ಗಂಟು ಆಗಬಾರದು. ಇದನ್ನು ನಾವು ನೋಡಬಹುದೇ ಹೊರತು ಉಪಯೋಗಮಾಡಿ ಕೊಳ್ಳುವುದಕ್ಕಾಗುವುದಿಲ್ಲ. ಆಯವ್ಯಯ ಸಹಜವಾಗಿರಬೇಕು, ಎಲ್ಲದಕ್ಕಿಂತ ಮಿಗಿಲಾಗಿ ಯಾವುದೇ ಒಂದು ಉತ್ತಮವಾದ ಆಯವ್ಯಯ ಪುಸ್ತಕದಲ್ಲಿ ನಾವು ತೋರಿಸಿದ ವ್ಯಯಕ್ಕೂ ಮತ್ತು ನಿಜವಾಗಿ ನಾವು ಮಾಡಿದಂಥ ವ್ಯಯಕ್ಕೂ ಅಂತರ ಹೆಚ್ಚು ಇರುತ್ತದೆ.

(ಶ್ರೀಮತಿ ದಮಯಂತಿ ಬೋರೇಗೌಡ ಅಧ್ಯಕ್ಷಪೀಠಕ್ಕೆ ಬಂದರು)

ಆದರೆ ಈ ಆಯವ್ಯಯವನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ಈ ಆಯವ್ಯಯ ರಾಜ್ಯದ ಜನಸಾಮಾನ್ಯರನ್ನು ದಾರಿ ತಪ್ಪಿಸುವ ಆಯವ್ಯಯ ಎಂದು ವಿಧಿ ಇಲ್ಲದೆ ಹೇಳಬೇಕಾಗುತ್ತದೆ. ಇದು ನಿಜವಾದುದು ಆಗಿಲ್ಲ. ಇದು ದಾರಿ ತಪ್ಪಿಸುವ ಆಯವ್ಯಯವೆಂದು ಏತಕ್ಕೆ ಕರೆಯ ಬೇಕೆಂದರೆ ಇದು ಅವರ ಪ್ರಕಾರವೇ ದಾರಿ ತಪ್ಪಿಸುವ ಆಯವ್ಯಯ . ಏಕೆಂದರೆ 16ನೇ ಪ್ಯಾರಾದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಬಹಳ ಮುಕ್ತವಾಗಿ ತಮ್ಮ ಸತ್ಯವನ್ನು ಒಪ್ಪಿಕೊಂಡಿದ್ದಾರೆ. ವೇತನ, ನಿವೃತ್ತಿ ವೇತನ, ಸಾಲದ ಮರುಪಾವತಿ, ಬಡ್ಡಿ ಸಂದಾಯ ಈ ಮೂರನ್ನು ಸೇರಿಸಿದರೆ 53.30. ಒಟ್ಟಾರೆ ಇವರಿಗೆ ಲಭ್ಯವಿರತಕ್ಕ ಮೂರು ಸಾವಿರದಲ್ಲಿ ಇವರು ಖರ್ಚುಮಾಡಬೇಕಾದುದು ಈ 3 ಬಾಬುಗಳಿಗೆ 53.30ರಷ್ಟು ಇನ್ನೂ ಒಂದು ಹೆಜ್ಜೆ ಇವರು ಮುಂದೆ ಹೋಗಿ ಏನು ಹೇಳುತ್ತಿದ್ದಾರೆಂದರೆ ಒಟ್ಟು ವೆಚ್ಚದಲ್ಲಿ ಶೇ 53.30ರಷ್ಟನ್ನು ಈ ಬಾಬುಗಳಿಗೇ ವೆಚ್ಚ ಮಾಡುತ್ತಿರುವುದನ್ನು ಕಾಣಬಹುದು. ಉಳಿದ ಶೇ 46.70ರಷ್ಟರಲ್ಲಿ ಸಾಮಾನ್ಯ ನಿರ್ವಹಣೆ ಮತ್ತು ಅಭಿವೃದ್ಧಿಯೇತರ ವೆಚ್ಚಗಳಿಗೆ ಹಣ ಒದಗಿಸಿದ ನಂತರ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಮತ್ತು ತೀರಾ ಅಗತ್ಯವಾದ ಬಂಡವಾಳ ಹೂಡಿಕೆಗೆ ಉಳಿಯುವ ಹಣ ತುಂಬಾ ಕಡಿಮೆ. I must congratulate the Chief Minister. He has at least admitted that the amount remained for the developmental work is negligible. ಇದು ಗೌಣ. ಆದುದರಿಂದಲೇ ಈ ಆಯವ್ಯಯ ಕನ್ನಡಿಯೊಳಗಿನ ಗಂಟು ಎಂದು ನಾನು ಹೇಳಿದ್ದುದು. ಈ ಆಯವ್ಯಯ ಸೂಚಿಸುವ ಹಣಕ್ಕೂ ಮತ್ತು ಖರ್ಚು ಮಾಡಿರುವ ಹಣಕ್ಕೂ ಇರತಕ್ಕ ಅಂತರ ಬಹಳ ದೊಡ್ಡದು ಎಂದು. 46 ಭಾಗದಲ್ಲಿ ಸಾಮಾನ್ಯ ನಿರ್ವಹಣೆ ಮತ್ತು ಅಭಿವೃದ್ಧಿಯೇತರ ವೆಚ್ಚ ಪ್ರತಿವರ್ಷ ಎಷ್ಟು ಎನ್ನತಕ್ಕ ಲೆಕ್ಕ ನಮಗೆ ಸಿಕ್ಕುತ್ತಿಲ್ಲ. ಆದರೆ ಕಳೆದ ವರ್ಷದ ಲೆಕ್ಕ ನನ್ನ ಹತ್ತಿರ ಇದೆ. ಅದರ ಆಧಾರದ ಮೇಲೆ ಹೇಳುವುದಾದರೆ ಕಳೆದ ವರ್ಷ ಆಯವ್ಯಯದಲ್ಲಿ

ನಾನ್ ಪ್ಲಾನ್‌ನಲ್ಲಿ ಖರ್ಚು ಮಾಡಿರತಕ್ಕದ್ದು 65.2 ಪರ್ಸೆಂಟ್. ಇದನ್ನು ಆಧಾರವಾಗಿಟ್ಟುಕೊಂಡು ಈ ವರ್ಷದ ಸಾಮಾನ್ಯ ನಿರ್ವಹಣೆ ಮತ್ತು ಅಭಿವೃದ್ಧಿಯೇತರ ವೆಚ್ಚಗಳನ್ನು ಲೆಕ್ಕ ಹಾಕಿದರೆ ಸ್ವಲ್ಪ ಹೆಚ್ಚು ಕಡಿಮೆ 20 ಕೋಟಿ ರೂ. ಬರುತ್ತದೆ. ಐವತ್ತುಮೂರು ಕೋಟಿ ಮತ್ತೆ ಇಪ್ಪತ್ತು ಕೋಟಿ 73 ಕೋಟಿ ರೂಪಾಯಿಗಳು ಆಯಿತು. ಶೇಕಡ 73 ಭಾಗ ಆಯಿತು. ಮೂರು ಸಾವಿರ ಹಣದಲ್ಲಿ ಶೇಕಡಾ 73 ಭಾಗ ನಾನ್ ಪ್ಲಾನ್ ಅಥವಾ ಯೋಜನೇತರ ವೆಚ್ಚಗಳಿಗೆ ಹೋದರೆ ಇವರಿಗೆ ಉಳಿದದ್ದು ಏನು? ಒಂದು ಸಾವಿರ ಕೋಟಿ ರೂಪಾಯಿ. ಅತ್ಯಂತ ವ್ಯಥೆಯಿಂದ ಈ ಮಾತನ್ನು ಹೇಳುತ್ತಿದ್ದೇನೆ. ಎಲ್ಲಾ ಪಕ್ಷದ ಎಲ್ಲಾ ಸರ್ಕಾರಗಳು ಸಾವಿರ ಕೋಟಿ ರೂಪಾಯಿಗಳ ಆಯವ್ಯಯವನ್ನು ಸದನದ ಮುಂದಿಟ್ಟು ಇದರ ಮುಖಾಂತರ ಜನರಿಗೆ ಹೇಳುತ್ತಿದ್ದೇವೆ. ಇಷ್ಟು ಸಾವಿರ ಕೋಟಿ ರೂಪಾಯಿಗಳನ್ನು ನಿಮಗೆ ವೆಚ್ಚ ಮಾಡುತ್ತಿದ್ದೇವೆ. ನಿಮ್ಮ ಅಭ್ಯುದಯಕ್ಕೋಸ್ಕರವಾಗಿ ಇಷ್ಟು ಸಾವಿರ ಕೋಟಿ ರೂಪಾಯಿಗಳನ್ನು ಖರ್ಚುಮಾಡುತ್ತಿದ್ದೇವೆ. ಎಲ್ಲಿದೆ? ಯಾವುದಕ್ಕೆ ಇದೆ; ಇವರು ಈ ಲೆಕ್ಕದ ಜೊತೆಗೆ ಲೆಕ್ಕವಿಲ್ಲದ ಕೆಲವು ಬಾಬುಗಳಿಗೆ ನಮಗೆ ಲೆಕ್ಕವನ್ನು ಕೊಟ್ಟಿಲ್ಲ. ಅವು ಯಾವು ಯಾವುವೆಂದರೆ ಅನಿರೀಕ್ಷಿತವಾದಂಥ ವೆಚ್ಚಗಳು. ಮುಂದಿನ ವರ್ಷಕ್ಕೆ ಯಾವುದು ಗಲಾಟೆ ಬರುತ್ತದೆಯೋ, ಯಾವುದಕ್ಕೆ ಕಾಂಪನ್‌ಸೇಷನ್ ಕೊಡಬೇಕಾಗುತ್ತದೆ ನಮಗೆ ಗೊತ್ತಿಲ್ಲ. ಮುಂದಿನ ವರ್ಷಕ್ಕೆ ಯಾವ ಸ್ವಾಮಿಗಳಿಗೆ ನಾವು ಕಾಣಿಕೆ ಕೊಡಬೇಕಾಗುತ್ತದೆಯೋ. ಹೋದವರ್ಷ 50 ಲಕ್ಷ ರೂಪಾಯಿಗಳನ್ನು ಸ್ವಾಮಿಗಳಿಗೆ ಕಾಣಿಕೆ ಕೊಟ್ಟಿದ್ದಾರೆ. ಮುಂದಿನ ವರ್ಷಕ್ಕೆ ಯಾವ ಬಾಬಾ ಅವರಿಗೆ ಕಾಣಿಕೆಯನ್ನು ತೆಗೆದುಕೊಂಡು ಹೋಗಿ ಕೊಡಬೇಕಾಗುತ್ತದೆಯೋ ಅದರ ಲೆಕ್ಕವನ್ನು ಕೊಟ್ಟಿಲ್ಲ. ಮುಂದಿನ ವರ್ಷಕ್ಕೆ ಒಂದು ವರ್ಷ ಪೂರ್ತಿಯಾದ ಮೇಲೆ ಮಾನ್ಯ ವೀರಪ್ಪ ಮೊಯಲಿಯವರು ಏನಾದರೂ ಸಾಧನೆ ಸಮಾವೇಶ ಮಾಡಿದ್ದಕ್ಕೆ ಅದಕ್ಕೆ ಎಷ್ಟು ಕೋಟಿ ಖರ್ಚು ಮಾಡಬೇಕಾಗುತ್ತದೆಯೋ ಅದರ ಲೆಕ್ಕ ನಮಗೆ ಇಲ್ಲಿ ಕೊಟ್ಟಿಲ್ಲ. ಒಂದನೇ ವರ್ಷದ ಸಾಧನೆ ಸಮಾವೇಶ ಇವರೇನಾದರೂ ಮಾಡಿದರೆ ಅದಕ್ಕೆ ಎಷ್ಟು ಖರ್ಚು ಮಾಡಬೇಕಾಗುತ್ತದೆಯೋ ಅದರ ಲೆಕ್ಕ ಇದರಲ್ಲಿ ಹಿಡಿದಿಲ್ಲ. ಇದರ ಜೊತೆಗೆ 40 ಜನ ಮಂತ್ರಿಗಳ ನಿರ್ವಹಣಾ ವೆಚ್ಚ ಇದರಲ್ಲಿ ಕೊಟ್ಟಿಲ್ಲ. ನಮ್ಮ ಸಂಬಳ ಇದರಲ್ಲಿ ಸೇರಿಸೋಣ. ಮಾನ್ಯ ಅಧ್ಯಕ್ಷಿಣಿಯವರೇ, ನಮ್ಮ ಸಂಬಳವೂ ಇದರಲ್ಲಿ ಸೇರಿಕೊಂಡಿದೆ. ಶಾಸಕರ ಸಾರಿಗೆ ಸವಲತ್ತು ಸಂಬಳ, ಸಚಿವರುಗಳ ಸಾರಿಗೆ ಸವಲತ್ತು ಸಂಬಳ ಮತ್ತೆ ಈ ಒಂದು ಸಾವಿರ ಕೋಟಿಯಲ್ಲಿ ಕಳೆಯಬೇಕಾಗುತ್ತದೆ. ಹೆಲಿಕ್ಯಾಪ್ಟರ್ ಎಂದು ನಮ್ಮ ಬೈರೇಗೌಡರು ಹೇಳುತ್ತಿದ್ದಾರೆ, ಅದೂ ಕೂಡ ಮಂತ್ರಿಗಳದ್ದರಲ್ಲಿಯೇ ಸೇರಿಕೊಂಡು ಬಿಡುತ್ತದೆ. ಇದರ ಜೊತೆಗೆ ಈ ವರ್ಷ ಯಾವ ಅಭಿವೃದ್ಧಿ ಕೆಲಸಗಳನ್ನು ನಾವು ಕೈಗೆ ಎತ್ತಿಕೊಂಡಿದ್ದೇವೆಯೋ ಆ ಅಭಿವೃದ್ಧಿ ಕೆಲಸಗಳಿಗಾಗಿ ಖರ್ಚುಮಾಡಿರುವ ಹಣವನ್ನು ಸಂಪೂರ್ಣವಾಗಿ ಬಿಲ್‌ಗಳನ್ನು ನೀವು ಚುಕ್ತಾ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ಯಾವ ಸರ್ಕಾರಕ್ಕೂ ಸಾಧ್ಯವಾಗುವುದಿಲ್ಲ ನನ್ನ ಲೆಕ್ಕಾಚಾರ ಸರಿಯೊ ತಪ್ಪೋ ಅಲ್ಲಿ ಯಾರಿದ್ದಾರೆ, ಯಾರಾದರೂ ಗೊತ್ತಿರುವವರು ಇದ್ದರೆ ತಾನೆ, ಯಾರಿಗೆ ಬಡಿದುಕೊಳ್ಳಬೇಕೋ ನನಗೆ ಗೊತ್ತಾಗುತ್ತಿಲ್ಲ. ಈ ವರ್ಷ ಮಾಡುವಂಥ ಕೆಲಸಗಳ ಎಲ್.ಓ.ಸಿ.ನ ಸುಮಾರು 100 ಕೋಟಿಯಿಂದ 200 ಕೋಟಿ ರೂಪಾಯಿಗಳವರೆಗೆ ಕೊಡಬೇಕಾಗುತ್ತದೆ ಮುಂದಕ್ಕೆ. ಈ ತಿಂಗಳಲ್ಲಿಯೇ ಕೊಡಬೇಕಾಗುತ್ತದೆ; ಮಾರ್ಚ್ ತಿಂಗಳ ಕೊನೆಗೆ. ಇದು 100-200 ಕೋಟಿ ರೂಪಾಯಿಗಳನ್ನು ಸಾವಿರದಲ್ಲಿ ಕಳೆಯಿರಿ. ಅಲ್ಲಿಗೆ ನಿಲ್ಲಲಿಲ್ಲ, ಮಿತವ್ಯಯವನ್ನು ಹೇರುತ್ತೇವೆಂದು ಹೇಳಿರುತ್ತಾರೆ. ಅದೇ ಗಳಿಗೆಯಲ್ಲಿ ಮತ್ತೊಂದು ಮಾತನ್ನು ಹೇಳುತ್ತಾರೆ. 13 ಸಾವಿರ ಜನ ಉಪಾಧ್ಯಾಯರ ಕೊರತೆಯಿದೆ ಎಂದು. ಈ 13 ಸಾವಿರ ಜನ

ಉಪಾಧ್ಯಾಯರ ಕೊರತೆಯನ್ನು ಬರಿಸಲು ಮುಂದಿನ ವರ್ಷ ನೇಮಕ ಮಾಡುತ್ತಾರೆ. ಆ 13 ಸಾವಿರ ಉಪಾಧ್ಯಾಯರ ಸಂಬಳ ಸವಲತ್ತುಗಳ ಖರ್ಚನ್ನು ಇದರಲ್ಲಿ ಸೇರಿಸಿಲ್ಲ. ಅದನ್ನೂ ಕೂಡಿ ಕಳೆಯಬೇಕಾಗುತ್ತದೆ. ಇನ್ನು ವೈದ್ಯಾಧಿಕಾರಿಗಳನ್ನು ನೇಮಿಸಿಕೊಳ್ಳುತ್ತೇವೆಂದು ಹೇಳಿದ್ದಾರೆ. ದನಗಳ ಆಸ್ಪತ್ರೆಗಳ ಡಾಕ್ಟರುಗಳನ್ನು ನೇಮಿಸಿಕೊಳ್ಳುತ್ತೇವೆಂದು ಹೇಳಿದ್ದಾರೆ. ಸಮಾಜಕಲ್ಯಾಣ ಇಲಾಖೆಯಲ್ಲಿ ನೇಮಿಸಿಕೊಳ್ಳುತ್ತೇವೆಂದು ಹೇಳಿದ್ದಾರೆ. ಇದು ಯಾವುದಕ್ಕೂ ಮಿತಿಯನ್ನು ಹೇರಿಲ್ಲವೆಂದು ಹೇಳುತ್ತಾರೆ. ಈ ಎಲ್ಲಾ ಡಿಡಕ್ಷನ್ ಆದ ಮೇಲೆ ಅಭಿವೃದ್ಧಿ ಕೆಲಸಗಳಿಗಾಗಿ ಉಳಿಯುವಂಥ ಹಣ ಎಷ್ಟು ಎನ್ನುವ ಬಗ್ಗೆ ಒಂದು ನಿಖರವಾದಂಥ ಲೆಕ್ಕವನ್ನು ದಯವಿಟ್ಟು ಮಾನ್ಯ ಮುಖ್ಯಮಂತ್ರಿಗಳು ಕೊಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

3.45 ಪಿ.ಎಂ.

ಮುಖ್ಯಮಂತ್ರಿಗಳು ತಂದಿರುವಂಥ ಈ ಆಯವ್ಯಯ ನಾನು ಆಗಲೇ ಹೇಳಿದಂತೆ ಇದೊಂದು ಜನರನ್ನು ಅಡ್ಡದಾರಿಗೆ ಎಳೆಯುವಂಥ ಆಯವ್ಯಯ. ಒಂದು ವಿಧದಲ್ಲಿ ಜನರನ್ನು ಮೋಸ ಮಾಡುವ ಆಯವ್ಯಯವೆಂದರೆ ತಪ್ಪಾಗಲಾರದೆಂದು ನನ್ನ ಭಾವನೆ. ಏಕೆಂದರೆ ಆಯವ್ಯಯ ಹಣ ನಮೂದಿಸುವುದರ ಮೂಲಕ ಅಭ್ಯುದಯವನ್ನು ಸಾಧಿಸುವುದಕ್ಕೆ ಸಾಧ್ಯವಿಲ್ಲ. ಒಂದೆರಡು ಉದಾಹರಣೆಗಳನ್ನು ತಮ್ಮ ಗಮನಕ್ಕೆ ತಂದರೆ ನನ್ನ ಮಾತನ್ನು ನಾನು ಸಮರ್ಥಿಸಿಕೊಂಡಂತಾಗುತ್ತದೆಂದು ಭಾವಿಸಿಕೊಳ್ಳುತ್ತೇನೆ. ಕೋಟ್ಯಾಂತರ ರೂಪಾಯಿಗಳ ವೆಚ್ಚವನ್ನು ಆಯವ್ಯಯದಲ್ಲಿ ತೋರಿಸಿ ಹಣವನ್ನು ಆ ಪ್ರಕಾರ ಖರ್ಚು ಮಾಡದ ಮೋಸದ ಪ್ರವೃತ್ತಿ ಎಲ್ಲ ಕಾಲದಲ್ಲಿ ಕಂಡು ಬರುತ್ತಿದೆ. ಅದಕ್ಕೆ ಒಂದು ಉದಾಹರಣೆ ಕೊಡಬಯಸುತ್ತೇನೆ. ಹೇಮಾವತಿ ಯೋಜನೆಯಲ್ಲಿ ಕಾರ್ಯಾಚರಣೆ ಆಗತಕ್ಕ ತುಮಕೂರು ವೃತ್ತದ ಇಂಜಿನಿಯರ್ ಅವರಿಗೆ ಕೊಡಬೇಕಾಗಿದ್ದ ಹಣ ಎಷ್ಟು ? ಕೊಟ್ಟಿರುವಂಥ ಹಣ ಎಷ್ಟು ? ಖರ್ಚಾಗಿರುವ ಹಣ ಎಷ್ಟು ಎಂಬ ಅಂಕಿ ಸಂಖ್ಯೆಗಳನ್ನು ತಮ್ಮ ಮುಂದೆ ಇಟ್ಟರೆ ಎಷ್ಟು ಮೋಸದ ನಡವಳಿಕೆ ಎಂಬುದು ಗೊತ್ತಾಗುತ್ತದೆ. ಸೆಪ್ಟೆಂಬರ್ 1992ರಲ್ಲಿ ನಮೂದಿಸಿದ ಹಣ 505 ಲಕ್ಷ ರೂಪಾಯಿಗಳು. ಅಕ್ಟೋಬರ್ 1992ರಲ್ಲಿ ಖರ್ಚು ಮಾಡುವುದಕ್ಕೆ ನಮೂದಿಸಿದ ಹಣ 544.55 ಲಕ್ಷ ರೂಪಾಯಿಗಳು. tax issued. Can you expect Rs.2,48,000/- ಏಕೆ? ರಾಜ್ಯದ ಜನರಿಗೆ ದ್ರೋಹ ಮೋಸ, ಏಕೆ? ಖರ್ಚು ಮಾಡಲಿಕ್ಕೆ ಬಡ್ಜೆಟ್ಟಿನಲ್ಲಿ ತೋರಿಸಿರುವ ಹಣ 544 ಲಕ್ಷ ರೂಪಾಯಿ. ಸರ್ಕಾರ ಬಿಡುಗಡೆ ಮಾಡಿರುವುದು 2 ಲಕ್ಷದ 45 ಸಾವಿರ ರೂಪಾಯಿಗಳು. ಇನ್ನು ಏನೆಂದು ಕರೆಯಬೇಕು ಈ ಆಯವ್ಯಯವನ್ನು ಜನವರಿ ಕೊನೆಯವರೆಗೆ ನಮೂದಿಸಿದ ಹಣ 4089 ಲಕ್ಷ ರೂಪಾಯಿಗಳಾದರೆ ಬಿಡುಗಡೆ ಮಾಡಿರುವುದು ಕೇವಲ 3894 ರೂಪಾಯಿಗಳು. ಅದಕ್ಕಾಗಿ ನಾನು ಹೇಳಿದ್ದುದು, ಪುಸ್ತಕದಲ್ಲಿರುವ ಬದನೆಕಾಯಿಯಲ್ಲಿ ಸಾರು ಮಾಡುವುದಕ್ಕಾಗುವುದಿಲ್ಲ. ಕನ್ನಡಿಯ ಗಂಟು ಖರ್ಚು ಮಾಡುವುದಕ್ಕಾಗುವುದಿಲ್ಲ. ಅಷ್ಟೇ ಅಲ್ಲ, ಈ ಸರ್ಕಾರ ಅತ್ಯಂತ ಉತ್ಸುಕತೆಯಿಂದ ಕಾರ್ಯರೂಪಕ್ಕೆ ತರಲು ಪ್ರಯತ್ನ ಮಾಡಿದ ಯೋಜನೆ, ಆಶ್ರಯ ಯೋಜನೆ. ಕಳೆದ ವರ್ಷ ಇವರ ಗುರಿ ಆಶ್ರಯ ಯೋಜನೆಯಲ್ಲಿ, ಮನೆ ಕಟ್ಟಬೇಕಾದ ಗುರಿ 2 ಲಕ್ಷದ 41 ಸಾವಿರ. ಸಾಧನೆ ಎಷ್ಟು? ಈಗ ಇಲ್ಲಿ ಪ್ಲಾನಿಂಗ್ ಮಂತ್ರಿಗಳು ಇಲ್ಲ, ಸಂಬಂಧಪಟ್ಟ ಮಂತ್ರಿಗಳು ಇಲ್ಲ, ಯಾರನ್ನು ಕೇಳಬೇಕು? 2 ಲಕ್ಷದ 45 ಸಾವಿರ ಮನೆಗಳನ್ನು ಕಟ್ಟಲು ಗುರಿ ಇಟ್ಟಿದ್ದು, ಕಟ್ಟಿರುವುದು 645 ಮಾತ್ರ. ನಿಮ್ಮ ಸರ್ಕಾರವನ್ನು ಪ್ರತಿನಿಧಿಸುವ ಮಂತ್ರಿಗಳು ಹೇಳಿದ್ದಾರೆ ಈ ಮಾತನ್ನು. ಎರಡು ಲಕ್ಷದ 41 ಸಾವಿರ ಮನೆಗಳನ್ನು ಕಟ್ಟುವುದಾಗಿ ಆಶ್ವಾಸನೆ

ಕೊಟ್ಟಿದ್ದು, ಕಟ್ಟಿರತಕ್ಕದ್ದು ಕೇವಲ 645 ಮನೆ ಅಂದರೆ ಅದು ಮೋಸದ ನಡವಳಿಕೆಯಲ್ಲವೆ? ರಾಜ್ಯದ ಜನರಿಗೆ ಬೊಕ್ಕಸದ ದುಡ್ಡನ್ನು ರಕ್ಷಿಸಬೇಕಾದ ನಾವು ಮಾಡಿದ ದ್ರೋಹ ಅಲ್ಲವೆ? ಸಾಮಾನ್ಯವಾಗಿ ನಾವು ಯಾವಾಗಲೂ ಡಾ॥ ಅಂಬೇಡ್ಕರ್ ಅವರ ಹೆಸರನ್ನು ಉಪಯೋಗಿಸು-ತ್ತಿರುತ್ತೇವೆ. ಅವರ ಹೆಸರಿನ ಯೋಜನೆಯಡಿಯಲ್ಲಿ ಇಟ್ಟುಕೊಂಡಿರುವ ಗುರಿ 29 ಸಾವಿರ ಮನೆಗಳು. ಸಾಧಿಸಿದ ಗುರಿ ಕೇವಲ 10 ಮನೆಗಳು. ಈ ಸದನದಲ್ಲಿ ಕೊಟ್ಟಿರತಕ್ಕ ಅಂಕಿ ಅಂಶಗಳು ಇವು. ಸನ್ಮಾನ್ಯ ಅಧ್ಯಕ್ಷಿಣಿಯವರೇ, ಆದುದರಿಂದ ಈ ಆಯವ್ಯಯದಲ್ಲಿ ಮತ್ತೊಂದು ಉದಾಹರಣೆಯನ್ನು ನಾನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಆಯವ್ಯಯದ 44ನೇ ಪ್ಯಾರಾದಲ್ಲಿ ಕೆರೆ ಕಲ್ಯಾಣ. ಕೆರೆ ಕಲ್ಯಾಣಕ್ಕಾಗಿ ಕಳೆದ ವರ್ಷ ಇವರು ನಿಗದಿ ಮಾಡಿದ ಹಣ 5 ಕೋಟಿ ರೂಪಾಯಿಗಳು. ಸಾಕಷ್ಟು ಪ್ರಗತಿಯನ್ನು ಸಾಧಿಸಲಿಲ್ಲ. ಪ್ರಗತಿಯೇ ಇಲ್ಲ. ಒಂದು ರೂಪಾಯಿ ಕೂಡಾ ಈ ಸರ್ಕಾರದಲ್ಲಿ ಖರ್ಚು ಆಗಿಲ್ಲ. 5 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ನಿಮ್ಮ ಕೆರೆಗಳಲ್ಲೆಲ್ಲಾ ಹೂಳನ್ನು ತೆಗೆಸುತ್ತೇವೆಂದು ಹೇಳಿದ ಸರ್ಕಾರ ಒಂದೇ ಒಂದು ಕೆರೆಯ ಹೂಳನ್ನು ಒಂದು ರೂಪಾಯಿಯನ್ನು ಖರ್ಚು ಮಾಡಿ ಎತ್ತಿಸಿಲ್ಲ. ಕಳೆದ ವರ್ಷ ನೀತಿ ಹಾಗಾದರೆ ಈ ವರ್ಷದ್ದು, ಈ ಯೋಜನೆಗೆ ಒದಗಿಸುವ ಹಣವನ್ನು 5 ಕೋಟಿ ರೂಪಾಯಿಗಳಿಂದ 11 ಕೋಟಿ ರೂಪಾಯಿಗಳಿಗೆ ಏರಿಸುವುದರೊಂದಿಗೆ ಇದನ್ನು 1993-94ರಲ್ಲೂ ಮುಂದುವರಿಸಲಾಗುವುದು. Perpetuating the same mistake. ಮೋಸವನ್ನು ಮುಂದುವರಿಸಿಕೊಂಡು ಹೋಗುವುದು. ಕಳೆದ ವರ್ಷ 5 ಕೋಟಿ ರೂಪಾಯಿ ಖರ್ಚು ಮಾಡುತ್ತೇವೆಂದು 1 ರೂಪಾಯಿಯನ್ನೂ ಈ ಯೋಜನೆಗಾಗಿ ವೆಚ್ಚ ಮಾಡಲಿಲ್ಲ. ಅಂತಹ ಒಂದು ಯೋಜನೆಗೆ ಮತ್ತೆ ಕನ್ನಡಿಯೊಳಗಿನ ಗಂಟು ಇಟ್ಟು 11 ಕೋಟಿ ರೂಪಾಯಿ ಖರ್ಚು ಮಾಡುತ್ತೇವೆಂದು ಹೇಳುತ್ತಿದ್ದಾರೆ. ಬಹುಶಃ ಸಮಯದ ಅಭಾವ ಇರುವುದರಿಂದ, ಈ ಮೂರು ಉದಾಹರಣೆಗಳನ್ನು ನೋಡಿದರೆ ಆಯವ್ಯಯದಲ್ಲಿ ಹಣವನ್ನು ಒದಗಿಸುವುದು ಅಷ್ಟೊಂದು ಪ್ರಾಮುಖ್ಯ ಇಲ್ಲ. ಒದಗಿಸಿದ ಹಣವನ್ನು ಖರ್ಚು ಮಾಡುವುದು ಬಹಳ ಮುಖ್ಯ. ಆ ಪ್ರಮುಖ ಕೆಲಸವನ್ನು ಮಾಡದೇ ಸರ್ಕಾರ ಜನರನ್ನು ಅಡ್ಡದಾರಿಗೆ ಎಳೆಯುತ್ತಿದೆ, ಮೋಸ ಮಾಡುತ್ತಿದ್ದಾರೆ ಎನ್ನುವ ಮಾತನ್ನು ವಿಧಿ ಇಲ್ಲದೇ ಹೇಳಬೇಕಾಗುತ್ತದೆ. ಸನ್ಮಾನ್ಯ ಅಧ್ಯಕ್ಷಿಣಿಯವರೇ, ಇನ್ನು ಸಾಮಾನ್ಯ ನಿರ್ವಹಣೆ ಮತ್ತು ಅಭಿವೃದ್ಧಿಗಳ ವೆಚ್ಚ. ಬಹುಶಃ ಈ ರಾಜ್ಯದಲ್ಲಿ ಇರುವಷ್ಟು ಸರ್ಕಾರಿ ವಾಹನಗಳು ಬೇರೆ ಯಾವ ರಾಜ್ಯಗಳಲ್ಲೂ ನಾವು ನೋಡಿಲ್ಲ. ಶ್ರೀರಂಗಪಟ್ಟಣದಿಂದ ಹೊರಟು ತಾವು ಸಾಯಂಕಾಲ ಮನೆ ತಲುಪುವಷ್ಟು ಹೊತ್ತಿಗೆ ದಯಮಾಡಿ ತಾವು ಪ್ರಯತ್ನ ನೋಡಿ. ಎಷ್ಟು ಸರ್ಕಾರಿ ಕಾರುಗಳು ನಿಮ್ಮ ಎದುರಿಗೆ ಬರುತ್ತವೆಂದು ಲೆಕ್ಕ ಹಾಕಿ. ಅವುಗಳಿಗೆ ತಗಲುವ ವೆಚ್ಚವನ್ನು ಇದರಲ್ಲಿ ಸೇರಿಸಿಲ್ಲ. ಅದನ್ನು ಇದರಲ್ಲಿ ಕಳೆಯಬೇಕು. ದೂರವಾಣಿ ವೆಚ್ಚವನ್ನು ಇದರಲ್ಲಿ ಸೇರಿಸಿಲ್ಲ. ವಿದ್ಯುಚ್ಛಕ್ತಿ ವೆಚ್ಚವನ್ನು ಸೇರಿಸಿಲ್ಲ., ಏನು ನಡೆಯುತ್ತಿದೆ ಈ ಸದನದಲ್ಲಿ. ಇದರ ವೆಚ್ಚ ಏನಿದೆ ಅದನ್ನು ಇದರಲ್ಲಿ ಕಳೆಯಬೇಕು. ನಾರ್ಮಲ್ ವೆಚ್ಚದ ಬಗ್ಗೆ ನಾನು ಹೇಳುತ್ತಿದ್ದೇನೆ. ಮಾನ್ಯ ಮುಖ್ಯ ಮಂತ್ರಿಗಳು 162ನೇ ಪ್ಯಾರಾದಲ್ಲಿ ಈ ವರ್ಷದ ಅಂದಾಜನ್ನು ಪ್ರಸ್ತಾಪ ಮಾಡಿದ್ದಾರೆ. ನಾನು ಆಗಲೇ ಹೇಳಿದ ಹಾಗೆ ಈ ವರ್ಷ ಶೇಕಡಾ 57 ಹೆಚ್ಚು ಮಾಡಿ ಮೂರು ಸಾವಿರಕ್ಕಿಂತಲೂ ಮಿಗಿಲಾಗಿ ಹಣ ಖರ್ಚು ಮಾಡುವ ಮಹತ್ವಪೂರ್ಣ ಆಯವ್ಯಯವನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಇದರಲ್ಲಿ ಒಟ್ಟಾರೆ ಕೊರತೆ 139 ಕೋಟಿ. ಈ 139 ಕೋಟಿ ಕೊರತೆಯನ್ನು ತುಂಬಿಸಲು ಸುಮಾರು 43 ಕೋಟಿ ರೂಪಾಯಿಗಳನ್ನು ವಿವಿಧ ಮೂಲಗಳಿಂದ ಸಂಗ್ರಹಿಸುವ ಮುಖಾಂತರ ಒಟ್ಟಾರೆ ಕೊರತೆಯನ್ನು 93 ಕೋಟಿ ರೂಪಾಯಿಗೆ

ಇಳಿಸುವ ಪ್ರಯತ್ನವನ್ನು ಮಾಡಿದ್ದಾರೆ. ನಾನು ಮುಖ್ಯ ಮಂತ್ರಿಗಳಿಗೆ ಇದು ಸಾಧ್ಯವಾಗುವುದಿಲ್ಲವೆಂದು ಅನನ್ಯವಾಗಿ ಹೇಳುತ್ತಿದ್ದೇನೆ.

(ಮಾನ್ಯ ಅಧ್ಯಕ್ಷರು ಅಧ್ಯಕ್ಷಪೀಠವನ್ನಲಂಕರಿಸಿದರು)

ಶ್ರೀ ಆರ್. ವಿ. ದೇಶ್‌ಪಾಂಡೆ : ಮಾನ್ಯ ಅಧ್ಯಕ್ಷರೇ, ಈ ಅಧಿವೇಶನದಲ್ಲಿ ನಾವು ಏನೊಂದು ನಿಲುವಳಿ ಸೂಚನೆಯನ್ನು ಕೊಟ್ಟಾಗ ಅದನ್ನು ತಾವು ರಿಜೆಕ್ಟ್ ಮಾಡಿದಿರಿ. ಅದು ಮಹತ್ವದ ವಿಷಯ ಇದೆ ಎಂದು ಹೇಳಿದಾಗ, ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ವಿರೋಧಪಕ್ಷದ ಸದಸ್ಯರು ವಿನಂತಿ ಮಾಡಿದಾಗ ತಾವು ಕರೆಯಿಸಿ ಮಾತನಾಡುತ್ತೇವೆ ಎಂದು ಹೇಳಿದಿರಿ. ಆ ನಂತರ ಕರೆಯಿಸಿ ಮಾತನಾಡಿದ ಮೇಲೆ ತಾವೂ ಒಂದು ಅಭಿಪ್ರಾಯಕ್ಕೆ ಬಂದಿದ್ದೀರಿ. ಅದು ಬಹಳ ಸಂತೋಷದ ವಿಚಾರ. ತಮಗೆ ಆ ಬಗ್ಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ. ತಾವೂ ಕೂಡ ಹೇಳಿದ್ದೀರಿ, ಇಲ್ಲಿ ಮಾನ್ಯ ಮುಖ್ಯಮಂತ್ರಿಗಳೂ ಬಂದಿದ್ದಾರೆ. ಈಗ ಚರ್ಚೆಗೆ ಅವಕಾಶ ಕೊಟ್ಟರೆ ಒಳ್ಳೆಯದಾಗುತ್ತದೆ ಎಂದು ಹೇಳುತ್ತೇನೆ.

ಅಧ್ಯಕ್ಷರು : ಮಾನ್ಯ ವಿರೋಧಪಕ್ಷದ ನಾಯಕರು ಮತ್ತು ವಿವಿಧ ಪಕ್ಷಗಳ ನಾಯಕರು ನನ್ನ ಕೊಠಡಿಯಲ್ಲಿ ಸಲ್ಲಿಸಿದ ನಿಲುವಳಿ ಸೂಚನೆಯ ಮಹತ್ವವನ್ನು ತಿಳಿಸಿದ ಹಿನ್ನೆಲೆಯಲ್ಲಿ ಮತ್ತು ರಾಜ್ಯದ ರೈತರ ಹಿತದೃಷ್ಟಿಯಿಂದ ನಿಯಮ 68ರ ಅಡಿಯಲ್ಲಿ ಚರ್ಚೆಗೆ ಅವಕಾಶ ಮಾಡಿ ಕೊಡಲು ತೀರ್ಮಾನಿಸಲಾಯಿತು. ಸೋಮವಾರ ಇದನ್ನು ತೆಗೆದುಕೊಳ್ಳೋಣ.

ಶ್ರೀ ವೈ. ಕೆ. ರಾಮಯ್ಯ : ಮಾನ್ಯ ಅಧ್ಯಕ್ಷರೇ, 43 ಕೋಟಿ ರೂಪಾಯಿಗಳನ್ನು ವಿವಿಧ ಮೂಲಗಳಿಂದ ಸಂಗ್ರಹಿಸಿ ಕೊರತೆ ತುಂಬುವಂತಹ 139 ಕೋಟಿಯಲ್ಲಿ 96 ಕೋಟಿ ಕೊರತೆಯನ್ನು ತೋರಿಸಿ 43 ಕೋಟಿ ರೂಪಾಯಿಗಳನ್ನು ವಿವಿಧ ಮೂಲಗಳಿಂದ ಸಂಗ್ರಹ ಮಾಡಬೇಕೆಂದು ನಮ್ಮ ಮುಖ್ಯ ಮಂತ್ರಿಗಳು ಆಸೆಯನ್ನು ಇಟ್ಟುಕೊಂಡಿದ್ದಾರೆ. ಅದು ಸಾಧ್ಯವಿಲ್ಲ. ಯಾವ್ಯಾವುದರಿಂದ ಎಷ್ಟೆಷ್ಟು ಬರುತ್ತದೆಂದು ಅವರೇ ಹೇಳಿದ್ದಾರೆ. ಮಾರಾಟ ತೆರಿಗೆಯಿಂದ ಅದು ಸಾಧ್ಯವಾಗುತ್ತದೆ. ವೃತ್ತಿ ತೆರಿಗೆಯಿಂದ ಅದು ಸಾಧ್ಯವಾಗುತ್ತದೆ. ಮನರಂಜನಾ ತೆರಿಗೆಯಿಂದ ಅದು ಸಾಧ್ಯವಾಗುತ್ತದೆ. ಮೋಟಾರು ವಾಹನ ತೆರಿಗೆಯಿಂದ ಅದು ಸಾಧ್ಯವಾಗುತ್ತದೆ. ಆದರೆ 7ನೇಯದು ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವ ಮುಖಾಂತರ 20 ಕೋಟಿ ರೂಪಾಯಿ ಸಂಗ್ರಹ ಮಾಡುವಂತಹಒಂದು ಯೋಜನೆಯನ್ನು ಅವರು ಇಟ್ಟುಕೊಂಡಿದ್ದಾರೆ. ಇದು ಖಂಡಿತಾ ಸಾಧ್ಯವಿಲ್ಲ. ಕಾರಣ ಏನೆಂದರೆ, ನಮ್ಮ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಅನಧಿಕೃತ ಯಾವುದು ಅಧಿಕೃತ ಯಾವುದು ಎಂದು ತಿಳಿಯುವುದಕ್ಕೆ ನಿಮಗೆ ಒಂದು ವರ್ಷ ಬೇಕಾಗುತ್ತದೆ. ಬಿಡಿಎನಲ್ಲಿ ಒತ್ತುವರಿ ಮಾಡಿರುವ ಜಾಗಗಳ ಮುಖಾಂತರ 20 ಕೋಟಿ ರೂಪಾಯಿಗಳನ್ನು ಸಂಗ್ರಹಿಸಿ ಕೊರತೆಯನ್ನು ತುಂಬುವಂತಹ ಪ್ರಯತ್ನವನ್ನು ನೀವು ಮಾಡಿದ್ದೀರಿ ಅದು ಸಾಧ್ಯವಾಗುವುದಿಲ್ಲ. ಬಿಡಿಎನಲ್ಲಿ ಅಕ್ರಮವಾದದ್ದು ಯಾವುದು ಸಕ್ರಮವಾದದ್ದು ಯಾವುದು ಎಂದು ಗೊತ್ತಾಗುವುದಿಲ್ಲ. ಒಬ್ಬ ವ್ಯಕ್ತಿಗೆ ನಿವೇಶನ ಹಂಚಿರುವುದನ್ನು ಡೀನೋಟೀಫೀಕೇಶನ್ ಮಾಡಿದ್ದಾರೆ. ಡೀನೋಟೀಫೀಕೇಶನ್ ಮಾಡಿರುವ ಜಾಗದಲ್ಲಿ ಚೌಡರೆಡ್ಡಿಯವರಂತಹ ಮಂತ್ರಿಗಳಿಗೆ ನಿವೇಶನ ಕೊಟ್ಟಿದ್ದಾರೆ. ಬಿಡಿಎನಲ್ಲಿ ಯಾವ ಸರ್ವೆ ನಂಬರಿನಲ್ಲಿ ಯಾವ ಸೈಟು ಇದೆಯೆಂದು ಅವರಿಗೇ ಗೊತ್ತಿಲ್ಲ.

ಶ್ರೀ ಚೌಡರೆಡ್ಡಿ : ನಾನು ಯಾವುದೂ ತೆಗೆದುಕೊಂಡಿಲ್ಲ.

ಶ್ರೀ ವೈ. ಕೆ. ರಾಮಯ್ಯ : ನೀವು ಅಂದರೆ ನಿಮ್ಮಂತಹ ಮಂತ್ರಿಗಳು ಎಂದು ಉದಾಹರಣೆಗೆ ಹೇಳಿದೆ. ಬಿಡಿಎನಲ್ಲಿ ಯಾವ ಸರ್ವೆ ನಂಬರಿನಲ್ಲಿ ಯಾವ ನಿವೇಶನ ಇದೆಯೆನ್ನುವುದು ಯಾರಿಗೂ ಗೊತ್ತಿಲ್ಲ.

ಶ್ರೀ ಎ. ಕೆ. ಅನಂತಕೃಷ್ಣ : ಉದಾಹರಣೆಗೆ ಅಂದರೆ ಅದು ನಿಜ, ಸ್ಥಿತಿಯೇ?

ಶ್ರೀ ವೈ. ಕೆ. ರಾಮಯ್ಯ : ಅದು ಉದಾಹರಣೆ,

ಶ್ರೀ ಎ. ಕೆ. ಅನಂತಕೃಷ್ಣ : ಉದಾಹರಣೆ ಅಂದರೆ ನಿಜವನ್ನು ನೀವು ಕೋಟ್ ಮಾಡಬೇಕು ಸುಳ್ಳು ಕೋಟ್ ಮಾಡುವುದಕ್ಕಾಗುತ್ತದೆಯೇ?

ಶ್ರೀ ವೈ. ಕೆ. ರಾಮಯ್ಯ : ಇದರ ಜೊತೆಗೆ ನಾನು ಮುಖ್ಯಮಂತ್ರಿಗಳಲ್ಲಿ ತಮ್ಮ ಮೂಲಕ ಪಾರ್ಥನೆ ಮಾಡಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ ಬೊಕ್ಕಸ ತುಂಬಿಸಲಿಕ್ಕೆ ಹಣದ ಅವಶ್ಯಕತೆಯಿದೆ. ಆದರೆ ಈ ಮೂಲಕ ಬೊಕ್ಕಸಕ್ಕೆ ಹಣವನ್ನು ತುಂಬುವಂತಹ ಪ್ರಯತ್ನ ಬೇಡವೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಕಾರಣ ಇಷ್ಟೇ, ಇದನ್ನು ಅನುಸರಿಸುವುದರಿಂದ ಬಹುಶಃ ಬೆಂಗಳೂರು ವಿವಿಧ ಭಾಗದ ಬೆಳವಣಿಗೆಗೆ ಕೆಟ್ಟದ್ದು ಆಗುತ್ತದೆ. ಸ್ಲಮ್‌ಗಳು ಬರುತ್ತದೆ ಬಹಳ ಹೆಜಾರ್ಡ್ಸ್ ಡೆವಲಪ್‌ಮೆಂಟ್ ಆಗುತ್ತದೆ. ಆದ್ದರಿಂದ ಅನಧಿಕೃತ ಕಟ್ಟಡಗಳನ್ನು ಮತ್ತು ನಿವೇಶನಗಳನ್ನು ಹರಾಜು ಮಾಡುವ ಮುಖಾಂತರ 20 ಕೋಟಿ ರೂಪಾಯಿ ವೆಚ್ಚವನ್ನು ತುಂಬಲಿಕ್ಕೆ ಮಾಡಿರುವಂತಹ ಪ್ರಯತ್ನ ಸಾಧ್ಯವಾಗುವುದಿಲ್ಲ. ಇದು ಸಾಧ್ಯವೂ ಇಲ್ಲ. ಅಭಿವೃದ್ಧಿ ದೃಷ್ಟಿಯಿಂದ ಒಳ್ಳೆಯದಲ್ಲವೆಂದು ನಾನು ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ಕ್ರೋಢೀಕರಣ ಸಾಧ್ಯವಿಲ್ಲವೆನ್ನುವಂತಹ ಮಾತನ್ನು ನಾನು ಹೇಳಿದ್ದೇನೆ. ಇನ್ನು ಸಾರ್ವಜನಿಕ ಉದ್ಯಮಗಳ ಬಗ್ಗೆ ನಾನು ಮುಖ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಈ ಬಿಳಿ ಆನೆಗಳನ್ನು ಸರ್ಕಾರಿ ಲಾಯದಿಂದ ಆಚೆಗೆ ಅಟ್ಟಿ. ಈ ಸರ್ಕಾರಿ ಸಾರ್ವಜನಿಕ ಉದ್ದಿಮೆಗಳು ಎನ್ನುವಂತಹ ಬಿಳಿ ಆನೆಗಳು ಏನಿವೆ, ಆ ಬಿಳಿ ಆನೆಗಳನ್ನು ಸರ್ಕಾರದ ಲಾಯದಿಂದ ಹೊರಗಡೆ ಅಟ್ಟಿಬಿಡಿ. ಇವುಗಳನ್ನು ಸಾಕುವುದರಿಂದ ಯಾರಿಗೂ ಪ್ರಯೋಜನವಿಲ್ಲ. ಈ ಬಿಳಿ ಆನೆಗಳನ್ನು ಸಾಕುವ ಮುಖಾಂತರ ಈ ರಾಜ್ಯದ ಜನಸಾಮಾನ್ಯರ ಅಭ್ಯುದಯಕ್ಕೆ ಬೇಕಾದ ಹಣದ ಕೊರತೆ ಉಂಟಾಗುತ್ತಿದೆ. ಈ ಆಯವ್ಯಯ ಭಾಷಣದಲ್ಲಿ ನಾನು ಮುಖ್ಯಮಂತ್ರಿಗಳ ಆಲೋಚನೆಯನ್ನು ಮತ್ತು ಚಿಂತನಾಲಹರಿಯನ್ನು ಅರ್ಥಮಾಡಿ ಕೊಳ್ಳುವ ಪ್ರಯತ್ನ ಪಟ್ಟೆ. ಈ ಮೂರು ಕಡೆಯಲ್ಲೂ ಬಹುಶಃ ಅದೃಷ್ಟವಶಾತ್ ಈ ಸಾರಿ ಸಿಪಿಐ ಮತ್ತು ಸಿಪಿಎಂನವರು ಯಾರೂ ಗೆದ್ದು ಬಂದಿಲ್ಲ. ಖಾಸಿಗೀಕರಣದ ಬಗ್ಗೆ ಅವರ ಒಲವು ಇದರೊಳಗೆ ಇದೆಯೇ? ಅಂತಹದ್ದು ಇದ್ದರೆ ನಾನಂತೂ ಮೆಚ್ಚಿಕೊಳ್ಳುತ್ತೇನೆ. There is no alternative in view of the performance of the public sector undertakings.

ಈ ವಿಷಯದಲ್ಲಿ ಅವರು ಮುಕ್ತವಾಗಿ ನಮ್ಮ ಮುಂದೆ ವಿಷಯವನ್ನು ಪ್ರಸಾಪ ಮಾಡಿದ್ದಾರೆ. ಖಾಸಗಿ ಉತ್ಪಾದಕ ಸಾಮರ್ಥ್ಯದಲ್ಲಿರುವ ಬೆಳವಣಿಗೆಯತ್ತ ವಾಲುತ್ತಿರುವುದನ್ನು ಸ್ಪಷ್ಟವಾಗಿ ಸೂಚಿಸುತ್ತದೆ. ಆದ್ದರಿಂದ, ಖಾಸಗಿ ವಲಯಕ್ಕೆ ಸಂಪೂರ್ಣ ಬೆಂಬಲ ನೀಡುವಂಥ ಪುರೋಗಾಮಿ ಕೈಗಾರಿಕಾ ನೀತಿಯನ್ನು ಅಳವಡಿಸಿಕೊಂಡಿದ್ದಾರೆ. ಎಲ್ಲಾ ಕಡೆಯೂ ಮುಖ್ಯ ಮಂತ್ರಿಗಳ ಚಿಂತನೆಯನ್ನು, ಅವರ ಆಲೋಚನೆಯನ್ನು ನಾನು ಸರಿಯಾಗಿ ಅರ್ಥಮಾಡಿಕೊಂಡಿದ್ದೇನೆ ಎನ್ನುವುದಾದರೆ, ಬಹುಶಃ ಸಾರ್ವಜನಿಕ ಉದ್ದಿಮೆಗಳು ಎನ್ನುವಂಥ ಬಿಳಿ ಆನೆಗಳೇನಿವೆ, ಈ ಬಿಳಿ ಆನೆಗಳನ್ನು ಸರ್ಕಾರಿ ಲಾಯದಿಂದ ಹೊರಗೆ ಅಟ್ಟಬೇಕು ಎನ್ನುವಂಥ ನನ್ನ ಪ್ರಾರ್ಥನೆಗೆ ಅವರು ಓಗೊಡುತ್ತಾರೆಂದು ನಾನು ಭಾವಿಸಿಕೊಂಡಿದ್ದೇನೆ. ಈ ಸಾರ್ವಜನಿಕ ಉದ್ದಿಮೆಗಳಿಂದಲೂ ಕೂಡ ಅಡಿಷನಲ್ ರಿಸೋರ್ಸಸ್ ಮೊಬಲೈಸ್ ಮಾಡಬಹುದು, ಸಂಪನ್ಮೂಲದ ಕ್ರೋಢೀಕರಣವನ್ನು ಮಾಡಿಕೊಳ್ಳಬಹುದೆಂದು ಮುಖ್ಯ ಮಂತ್ರಿಗಳು ತಿಳಿದುಕೊಂಡಿದ್ದರೆ, ಅದರಿಂದಲೂ ಕೂಡ ಇದು ಸಾಧ್ಯವಾಗಲಾರದೆಂದು ನನ್ನ ಭಾವನೆ. ಈ ಮೊಬಲೈಸ್ ರಿಸೋರ್ಸಸ್ ಅಥವಾ ಸಂಪನ್ಮೂಲ ಕ್ರೋಢೀಕರಣ ಸಾಧ್ಯವಾಗುವುದಿಲ್ಲವೆಂದರೆ, ಇನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಮಿತವ್ಯಯವನ್ನು ತರುವುದಕ್ಕೆ ಸಾಧ್ಯವಾಗುತ್ತದೆಯೇ? ನನ್ನ ದೃಷ್ಟಿಯಿಂದ, ಮಿತವ್ಯಯವನ್ನು ಕೂಡ ತರುವುದಕ್ಕೆ ಸಾಧ್ಯವಾಗುವುದಿಲ್ಲ. ಇವರು ಮುಖ್ಯ ಮಂತ್ರಿಗಳಲ್ಲ, ಯಾರೇ ಮುಖ್ಯಮಂತ್ರಿಗಳಾಗಿ ಕುಳಿತುಕೊಂಡರೂ ಕೂಡ, ಇವತ್ತಿನ ಪರಿಸ್ಥಿತಿಯಲ್ಲಿ ಇವತ್ತು ನಾವೇ ಸೃಷ್ಟಿಸಿಕೊಂಡಿರುವ ವ್ಯವಸ್ಥೆಯಲ್ಲಿ ಯಾವುದೇ ಮಿತಿಯನ್ನು ಹೇರುವುದಕ್ಕೆ ಸಾಧ್ಯವಾಗುವುದಿಲ್ಲ. ಮಂತ್ರಿಗಳ ಹಿಂದೆ ಹೋಗುವಂಥ ಕಾರನ್ನು, ನೀವು ಹೋಗಬೇಡಿ ಎನ್ನುವ ಒಂದೇ ಒಂದು ಕಾರ್ಯಕ್ರಮವನ್ನು ಕೈಗೊಂಡಿರುವುದರಿಂದ, ನೀವು 139 ಕೋಟಿ ರೂಪಾಯಿಗಳ ಕೊರತೆಯನ್ನು ನೀಗುವುದಕ್ಕೆ ಸಾಧ್ಯವಾಗುವುದಿಲ್ಲ. ಈ ಮೂರು ತಿಂಗಳಿಂದ ನಿಮ್ಮ ಆಡಳಿತವನ್ನು ನೋಡಿದಾಗ, ಯಾವ ಮಿತವ್ಯಯವನ್ನು ಹೇರುವುದಕ್ಕೂ ನಿಮ್ಮಿಂದ ಸಾಧ್ಯವಾಗುವುದಿಲ್ಲ. ಈ ಮಿತವ್ಯಯವನ್ನು ಸಾಧಿಸುವುದಕ್ಕೆ ಸಾಧ್ಯವಿದೆ. ಯಾವಾಗ ಸಾಧ್ಯವಿದೆ ಎಂದರೆ, ಇದಕ್ಕೆ ರಾಜಕೀಯವಾದ ಇಚ್ಛಾ ಶಕ್ತಿ ಬೇಕಾಗುತ್ತದೆ. ಈ ಮಿತವ್ಯಯ ಸಾಧನೆಗೆ ಸನ್ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಇಚ್ಛಾಶಕ್ತಿ ಇಲ್ಲವೆಂದು ನಾನು ದೂರುವುದಕ್ಕೆ ಸಿದ್ಧನಿಲ್ಲ, ಅವರಿಗೆ ಸಾಕಷ್ಟು ಶಕ್ತಿ ಇದೆ. ಆದರೆ, ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಇರುವಂಥ ಇಚ್ಛಾಶಕ್ತಿಯನ್ನು ಅನುಷ್ಠಾನಕ್ಕೆ ತರಬೇಕಾದರೆ, ರಾಜಕೀಯ ಸ್ಥಿರತೆ ಬೇಕಾಗುತ್ತದೆ. ಮಿತವ್ಯಯವನ್ನು ತರಬೇಕು, ಇದು ಬೇಕೇಬೇಕು. ಆ ಮಿತವ್ಯಯವನ್ನು ತರಬೇಕಾದರೆ, ಇದಕ್ಕೆ ರಾಜಕೀಯ ಇಚ್ಛಾಶಕ್ತಿ ಬೇಕಾಗುತ್ತದೆ. ಆ ಇಚ್ಛಾಶಕ್ತಿಯನ್ನು ಅನುಷ್ಠಾನಗೊಳಿಸುವಂಥ ಮನಸ್ಸು ಅವರಿಗೆ ಇಲ್ಲ ; ಅವರಿಗೆ, ಇಚ್ಛಾಶಕ್ತಿಯನ್ನು ಅನುಷ್ಠಾನಗೊಳಿಸುವಷ್ಟು ಶಕ್ತಿ ಇಲ್ಲ. ಮತ್ತು ಆ ಚತುರತೆ ಇಲ್ಲವೆನ್ನುವ ಅಪವಾದವನ್ನು ನಾನು ಮಾಡುತ್ತಿದ್ದೇನೆ. He is capable of doing all these things. But I pitty him. ಇಂತಹ ವಿಷಯದಲ್ಲಿ ಅನುಷ್ಠಾನಕ್ಕೆ ತರಬೇಕಾದ ರಾಜಕೀಯ ಸ್ಥಿರತೆ ಅಲ್ಲಿ ಇಲ್ಲ. ಇಲ್ಲಿಯ ಪರಿಸ್ಥಿತಿಯನ್ನು ನೋಡಿದರೆ ನಮಗೆ ಅಯ್ಯೋ ಎನಿಸುತ್ತದೆ. ಮೂರು ಮೂರು ತಿಂಗಳಿಗೆ, ಈ ರಾಜಕೀಯದ ಅಧಿಕಾರದ ಬದಲಾವಣೆಯಿಂದ ರಾಜ್ಯದ ಅಭ್ಯುದಯದ ಕೆಲಸಗಳ ಮೇಲೆ,ಅಭಿವೃದ್ಧಿ ಕೆಲಸಗಳ ಮೇಲೆ ಅತ್ಯಂತ ಕೆಟ್ಟ ಪರಿಣಾಮವಾಗುತ್ತಿದೆ. ರಾಜಕೀಯ ಅಸ್ಥಿರತೆಯಲ್ಲಿ ಆಡಳಿತದಲ್ಲಿ ಬಿಗಿ ತರುವುದಕ್ಕೆ ಅವರ ಕೈಯಲ್ಲಿ ಸಾಧ್ಯವಾಗುವುದಿಲ್ಲ. ಆಡಳಿತದಲ್ಲಿ ಬಿಗಿ ಇರದಂತಹ ಈ ಸಂದರ್ಭದಲ್ಲಿ ಬೊಕ್ಕಸದಿಂದ ಸೋರಿ ಹೋಗುವ ಹಣವನ್ನು ತಡೆಗಟ್ಟುವ ಶಕ್ತಿಯನ್ನು ಅವರು ಕಳೆದುಕೊಂಡಿದ್ದಾರೆ. ರಾಜಕೀಯ ಅಸ್ಥಿರತೆಯಿಂದಾಗಿ ಆರ್ಥಿಕ ಶಿಸ್ತು ಕಾಪಾಡಿಕೊಂಡು

ಹೋಗುವುದರಲ್ಲಿ ತಾವು ವಿಫಲರಾಗಿದ್ದೀರಿ. ಇದಕ್ಕೆ ಪ್ರಬಲವಾದ ವಾತಾವರಣ. ಪ್ರತಿಕೂಲ ವಾತಾವರಣ ಅಂದರೆ ಅದು ವೆದರ್ ಅಲ್ಲ.

ಅಧ್ಯಕ್ಷರು : 10 ನಿಮಿಷದಲ್ಲಿ ಮುಗಿಸಿ.

ಶ್ರೀ ವೈ.ಕೆ. ರಾಮಯ್ಯ : ನಾನು ಈಗ ಶುರು ಮಾಡುತ್ತಿದ್ದೇನೆ.

ಅಧ್ಯಕ್ಷರು : ಇಷ್ಟು ಹೊತ್ತು ಪೀಠಿಕೆ .....

ಶ್ರೀ ವೈ. ಕೆ. ರಾಮಯ್ಯ : ಮಾನ್ಯ ಅಧ್ಯಕ್ಷರೇ, ಈ ಆಯುವ್ಯಯ ಪತ್ರದಲ್ಲಿ ತೋರಿಸುವಂಥ ಹಣವನ್ನು ಖರ್ಚು ಮಾಡಲಿಕ್ಕೆ ಹಣ ಸಿಗಬೇಕಾದರೆ ತಾವು ಸೋರಿಕೆ ತಡೆಗಟ್ಟಬೇಕಾಗುತ್ತದೆ. ಸೋರಿಕೆ ತಡೆಗಟ್ಟುವುದು ಅಷ್ಟು ಸುಲಭದ ಕೆಲಸವಲ್ಲ. ಸೋರಿಕೆಯನ್ನು ತಡೆಗಟ್ಟುವುದರಲ್ಲಿ ಏತಕ್ಕೆ ವಿಫಲರಾಗಿದ್ದೀರಿ ಎಂದು ಹೇಳಿದರೆ ಅದಕ್ಕೆ ಮತ್ತೆ ನಾನು ಹೇಳುತ್ತೇನೆ. ಅದಕ್ಕೆ ನಮ್ಮ ಪರಿಸ್ಥಿತಿ. ಸನ್ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಒಂದು ವಿಷಯವನ್ನು ತರುವುದಕ್ಕೆ ನಾನು ಇಷ್ಟಪಡುತ್ತೇನೆ. ಸೋರಿಕೆಯನ್ನು ತಡೆಗಟ್ಟುವುದರಲ್ಲಿ ನಾವುಗಳೆಲ್ಲರೂ ಸೇರಿ ವಿಫಲರಾಗಿದ್ದೇವೆ. ಮಾನ್ಯ ಅಧ್ಯಕ್ಷರೇ, ಸರ್ಕಾರಿ ಸ್ವಾಮ್ಯಕ್ಕೆ ಸೇರಿದಂತಹ ಕುಣಿಗಲ್ ಸ್ಟಡ್ ಫಾರಮ್ ಇದೆ. ಅದನ್ನು ಬೆಂಗಳೂರು ಟರ್ಫ್ ಕ್ಲಬ್‌ಗೆ ಗುತ್ತಿಗೆಗೆ ಕೊಟ್ಟಿದ್ದರು. ಗುತ್ತಿಗೆ ಅವಧಿ ಮುಗಿಯುವುದಕ್ಕೆ ಮೊದಲೇ, 8 ವರ್ಷಗಳ ಮೊದಲೇ ಆ ಗುತ್ತಿಗೆಯನ್ನು ರದ್ದು ಮಾಡಿ ಸರ್ಕಾರ ವಾಪಸ್ಸು ತೆಗೆದುಕೊಂಡರು. ಸರ್ಕಾರ ಅದನ್ನು ವಾಪಸ್ ತೆಗೆದುಕೊಂಡು ಅದನ್ನು ಯುನೈಟೆಡ್ ಬ್ರಿವರೀಸ್ ಎನ್ನತಕ್ಕಂಥ ಒಂದು ಕಂಪನಿಗೆ ಮತ್ತೆ ಗುತ್ತಿಗೆಗೆ ಕೊಟ್ಟಿದ್ದಾರೆ. ಸರ್ಕಾರ ಟರ್ಫ್ ಕ್ಲಬ್‌ಗೆ ಗುತ್ತಿಗೆಗೆ ಕೊಟ್ಟಿದ್ದುದು ಗುತ್ತಿಗೆ ಹಣ ವರ್ಷಕ್ಕೆ 5 ಲಕ್ಷ ರೂಪಾಯಿಗಳು. ಅದನ್ನು ರದ್ದು ಮಾಡಿ ಒಂದು ವರ್ಷಕ್ಕೆ 36 ಲಕ್ಷ ರೂಪಾಯಿಗಳು ಆದಾಯ ಬರತಕ್ಕಂಥ ಗುತ್ತಿಗೆಗೆ ಕೊಟ್ಟಿದ್ದಾರೆ.

ಆ ಗುತ್ತಿಗೆ ವ್ಯವಹಾರ ನಡೆದಾಗ 490 ಎಕರೆ ಜಮೀನು , ಅಲ್ಲಿ ಕೋಟ್ಯಾಂತರ ರೂಪಾಯಿಗಳ ಇಮ್ಮೂವಬಲ್ ಪ್ರಾಪರಿಟಿ ಇದೆ. ಅದನ್ನು ಈ ರಾಜ್ಯದ ಮುಖ್ಯಕಾರ್ಯದರ್ಶಿಗಳ ಆಜ್ಞೆ ಪ್ರಕಾರ 100 ರೂಪಾಯಿಗಳ ಸ್ಟ್ಯಾಂಪ್ ಪೇಪರ್ ಮೇಲೆ ಅಗ್ರಿಮೆಂಟ್ ಬರೆಯುವಷ್ಟರ ಮಟ್ಟಿಗೆ ನಿಮ್ಮ ವ್ಯವಸ್ಥೆ ಕೆಟ್ಟು ಹೋಯಿತೆ ಸ್ವಾಮಿ. Can you transfer the property worth under a lease deed on a hundred rupees stamp paper? ಸನ್ಮಾನ್ಯ ಮಂತ್ರಿಗಳು ಒಂದಸ್ನಾದರೂ, ಗಮನಿಸಬೇಕು. ಈ ವಿಚಾರ ಬಹಳ ಸ್ವಾರಸ್ಯಕರವಾಗಿದೆ. 490 ಎಕರೆ ಜಮೀನು ಇದ್ದು ಕೋಟ್ಯಾಂತರ ರೂಪಾಯಿಗಳ ಮೂವಬಲ್ ಪ್ರಾಪರಿಟಿ ಇರತಕ್ಕಂಥ ಕುಣಿಗಲ್ ಸ್ಟರ್ ಫಾರಮ್ ಅನ್ನು 100 ರೂಪಾಯಿಗಳ ಸ್ಟ್ಯಾಂಪ್ ಪೇಪರ್ ಮೇಲೆ ಅಗ್ರಿಮೆಂಟ್ ಅಲ್ಲ,ಲೀಜ್ ರೀಡ್ ಅಗ್ರಿಮೆಂಟ್ ಎಂದು ವಾದಿಸುತ್ತೀರಿ ಎಂದು ನನಗೆ ಗೊತ್ತು. It is not an agreement, It is a lease deed. ದಯಮಾಡಿ ಮಾನ್ಯ ಮುಖ್ಯಮಂತ್ರಿಗಳು ಈ ಫೈಲು ತರಿಸಿ ನೋಡಬೇಕು. ಅಕ್ಟೋಬರ್‌ಅಂದು 1993ರಂದು ಕುಣಿಗಲ್ ಫಾರಮ್ ಅನ್ನು ಗುತ್ತಿಗೆಗೆ ಕೊಟ್ಟಿದ್ದಾರೆ. ಅಲ್ಲಿ 490 ಎಕರೆ ಜಮೀನು ಕೋಟ್ಯಾಂತರ ರೂಪಾಯಿ ಬೆಲೆಬಾಳುವ ಕುದುರೆಗಳು, ಟ್ರಾಕ್ಟರ್ ಮರಗಳು, ಬಿಲ್ಡಿಂಗ್ ಇಷ್ಟೊಂದು ಕೋಟ್ಯಾಂತರ ರೂಪಾಯಿಗಳ ಬೆಲೆಬಾಳತಕ್ಕಂಥ ಆಸ್ತಿಯನ್ನು ತಾವು

ವಕೀಲರಾಗಿದ್ದವರು ಎಷ್ಟು ರೂಪಾಯಿಗಳ ಸ್ಟ್ಯಾಂಪ್ ಪೇಪರ್ ಕೊಡಬೇಕು ಸ್ವಾಮಿ, ನಮ್ಮ ರಾಜ್ಯದ ಮುಖ್ಯ ಕಾರ್ಯದರ್ಶಿಗಳು ನೂರು ರೂಪಾಯಿ ಸ್ಟ್ಯಾಂಪ್ ಪೇಪರ್ ಮೇಲೆ ಗುತ್ತಿಗೆ ಪತ್ರವನ್ನು ಬರೆಯುತ್ತಾರೆ. It is not a lease agreement, It is a lease deed itself executed this first day of October. So it is not an agreement, It is a lease deed.

4.15 ಪಿ. ಎಂ.

ಇದನ್ನು ಕೇಳಿದರೆ, ನಿಮ್ಮ ಮುಖ್ಯಕಾರ್ಯದರ್ಶಿಗಳು ನನಗೆ ಪತ್ರವನ್ನು ಬರೆಯುತ್ತಾರೆ, ಅದೂ ಕೂಡ ಯಾವಾಗ? ನಾನು ಅಲ್ಲಿ ಹೋಗಿ 15 ದಿವಸಗಳ ಕಾಲ ಮುಷ್ಕರಕ್ಕೆ ಕುಳಿತುಕೊಂಡ ಮೇಲೆ. ಸೋರಿಕೆಯನ್ನು ತಡೆಗಟ್ಟಲು ನಿಮಗೆ ಸಾಧ್ಯವಿಲ್ಲ ಎಂಬ ಒಂದೇ ಒಂದು ಕಾರಣಕ್ಕಾಗಿ ನಿಮಗೆ ನಾನು ಈ ಮಾತನ್ನು ಹೇಳುತ್ತಾ ಇದ್ದೇನೆ. This is the letter received from the Chief Secretary dated 9.10.1992. I do not want to trouble you by reading the whole thing. M/s. U. B. & Company is in the possession of the farm.

ಕೋಟ್ಯಾಂತರ ರೂಪಾಯಿಗಳ ಬೆಲೆ ಬಾಳುವಂಥ ಆಸ್ತಿಯನ್ನು ನೂರು ರೂಪಾಯಿಗಳ ಸ್ಟ್ಯಾಂಪ್‌ಪೇಪರ್ ಮೇಲೆ ಬರೆದಿದ್ದ ಅಗ್ರಿಮೆಂಟ್‌ನಲ್ಲಿ ತೆಗೆದುಕೊಂಡು ಹೋಗಿ ಅಗ್ರಿಮೆಂಟ್ ಮಾಡಿ ಅವರ ಸ್ವಾಧೀನಕ್ಕೆ ಕೊಟ್ಟಿದ್ದೇವೆ ಎಂದು ನನಗೆ ಈ ಕಾರ್ಯದರ್ಶಿಗಳು ಬರೆಯುತ್ತಾರೆ. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆ ಅಂದರೆ ನಾನು ಹೋಗಿ 15 ದಿವಸ ಅಲ್ಲಿ ಮುಷ್ಕರ ಕುಳಿತ ಮೇಲೆ ನಿಜವಾಗಿಯೂ ಎಷ್ಟು ರೂಪಾಯಿಗಳ ಸ್ಟ್ಯಾಂಪ್ ಪೇಪರ್ ಮೇಲೆ ಮಾಡಿಕೊಡಬೇಕಾಗಿತ್ತು ಎಂಬ ಬಗ್ಗೆ ಯಾರಿಗಾದರೂ ಅರಿವು ಇದೆಯೇ? original stamp paper . 10 ಲಕ್ಷದ 82 ಸಾವಿರದ, 200 ರೂಪಾಯಿಗಳ ಸ್ಟ್ಯಾಂಪ್‌ಪೇಪರನ್ನು ಸರಕಾರಕ್ಕೆ ಕಟ್ಟಬೇಕಾದ ಕಡೆ ಕೇವಲ ನೂರು ರೂಪಾಯಿಗಳ ಸ್ಟ್ಯಾಂಪ್‌ಪೇಪರ್ ಮೇಲೆ ಅಗ್ರಿಮೆಂಟ್ ಮಾಡಿಕೊಟ್ಟಂಥ ಅಧಿಕಾರಿಯನ್ನು ನೀವು ಕೆಲಸದಿಂದ ತೆಗೆದು ಹಾಕಿದ್ದೀರಾ? ಅವರ ಮೇಲೆ ಆಕ್ಷನ್ ತೆಗೆದುಕೊಂಡಿದ್ದೀರಾ? ಎನ್‌ಕ್ವೈರಿ ಮಾಡಿದ್ದೀರಾ? ನಾನು ಅಲ್ಲಿ 15 ದಿವಸಗಳ ಕಾಲ ಅನ್ನ ನೀರು ಇಲ್ಲದೆ ಮುಷ್ಕರಕ್ಕೆ ಕುಳಿತ ಮೇಲೆ ಇದು ಸರಕಾರದ ಗಮನಕ್ಕೆ ಬಂದು ಆ ಮೂಲಕ ಸರಕಾರಕ್ಕೆ ಹತ್ತು ಲಕ್ಷಗಳೂ ಬಂದುವು, ಅದಕ್ಕಾಗಿ ನಾನು ಹೆಮ್ಮೆಪಡುತ್ತೇನೆ. ಅದು ಸರಕಾರದ ಬೊಕ್ಕಸಕ್ಕೆ ಕಟ್ಟುವಂತಾಯಿತು. ಈ ಸರಕಾರಕ್ಕೆ ಕಿವಿ ಇದೆಯೋ ಇಲ್ಲವೋ ಗೊತ್ತಿಲ್ಲ ನಮ್ಮ ಕರ್ತವ್ಯವನ್ನು ನಾವು ಮಾಡಬೇಕಾಗುತ್ತದೆ. ಇದರಂತೆ ಮತ್ತೆ 70 ಲಕ್ಷ ರೂಪಾಯಿಗಳ ದ್ರೋಹವನ್ನು ಇವರುಗಳು ಸರಕಾರಕ್ಕೆ ಮಾಡಿದ್ದಾರೆ. ಅವೊತ್ತಿನ ಮಂತ್ರಿಗಳಾದ ಬಸವರಾಜ ಪಾಟೀಲರ ಎದುರು ಆ ಮೂರು ಜನರನ್ನು ಕರೆಯಿಸಿ,, ಆ 70 ಲಕ್ಷ ರೂಪಾಯಿಗಳನ್ನು ಕಟ್ಟುವಂಥ ನಿರ್ಣಯವನ್ನು ತೆಗೆದುಕೊಂಡರು. ಆದರೆ ಆ ಬಗ್ಗೆ ಇವೊತ್ತಿನವರೆಗೂ ಯಾವುದೇ ಪ್ರಯತ್ನ ಮಾಡಿಲ್ಲ. ಬೆಂಗಳೂರು ಟರ್ಫ್ ಕ್ಲಬ್‌ನವರಿಗೆ ಈ ಫಾರ್ಮನ್ನು ಗುತ್ತಿಗೆ ಕೊಡುವಂಥ ಸಂದರ್ಭದಲ್ಲಿ ನಾವು ಯಾವ ಯಾವ ಆಸ್ತಿಗಳನ್ನು ಕೊಟ್ಟಿದ್ದರೋ ಆ ಎಲ್ಲಾ ಆಸ್ತಿಗಳು ಇವತ್ತು ಸರಕಾರಕ್ಕೆ ವಾಪಸ್ಸು ಬರಬೇಕಾಗಿದೆ ; With 25% extra amount.

ಇದು ಬಹಳ ತಮಾಷೆಯಾಗಿದೆ. ಇಲ್ಲಿಯಾರಾದರೂ ಕುದುರೆ ವ್ಯವಹಾರದವರು ಇದ್ದಾರೊ ಇಲ್ಲವೋ ಗೊತ್ತಿಲ್ಲ. ಕುದುರೆ ವ್ಯವಹಾರ ಅಂದರೆ ಅದರ ಬೆಲೆ, ಅದರ ಪಿಡಿಗ್ರಿ ಮುಂತಾಗಿ

ಇರುತ್ತದೆ. ನಾವು ಬಿಟಿಸಿಯವರಿಗೆ ಈ ಫಾರ್ಮನ್ನು ಕೊಟ್ಟಾಗ ಕೋಟ್ಯಾಂತರ ರೂಪಾಯಿಗಳ ಬೆಲೆ ಬಾಳುವ ವಸ್ತುಗಳನ್ನು ಕೊಟ್ಟಿದ್ದೇವೆ. ಅದೇ ಅವರಿಂದ ವಾಪಸ್ ತೆಗೆದುಕೊಳ್ಳುವಾಗ ಒಪ್ಪಂದದ ಪ್ರಕಾರ 13 ಲಕ್ಷ ರೂಪಾಯಿಗಳು ಮಾತ್ರ. ಇವೊತ್ತು ಕತ್ತೆ ಬೆಲೆ ಕೂಡ ಇದಕ್ಕೆ ಆಗುವುದಿಲ್ಲ. ಬಸವರಾಜ ಪಾಟೀಲರು ಮಂತ್ರಿಯಾಗಿದ್ದಾಗ ಈ ಹಣನಿಗದಿ ಮಾಡಿದ್ದುದು ಸರಿಯಾಗಿಲ್ಲ, ಇದನ್ನು ರೀ-ಅಸೆಸ್ ಮಾಡಬೇಕು, ಹಾಗೆ ಮಾಡಿದಾಗ 70 ಲಕ್ಷಗಳಷ್ಟು ಬರಬೇಕೆಂದು ತೀರ್ಮಾನ ಆಗಿತ್ತು. ಈ ತೀರ್ಮಾನಕ್ಕೆ ಬೆಲೆ ಇಲ್ಲ, ಈ ಚರ್ಚೆಗೆ ಗಮನ ಕೊಡುವವರೂ ಇಲ್ಲ. ಅಷ್ಟಿದ್ದೂ ನೀವು ಸೋರಿಕೆಯನ್ನು ತಡೆಗಟ್ಟುತ್ತೀರಾ, ಆ ಶಕ್ತಿಯು ನಿಮ್ಮಲ್ಲಿ ಇದೆಯೇ? ಆ ಯೋಗ್ಯತೆಯು ನಿಮ್ಮಲ್ಲಿ ಇದೆಯೇ? ಕಣ್ಣುಮುಂದೆ ಕಾಣುವಂಥಾದ್ದನ್ನು ನಿಮಗೆ ಮನವರಿಕೆ ಮಾಡಿಕೊಟ್ಟರೂ ಅದನ್ನು ವಸೂಲು ಮಾಡಿಲ್ಲ. ನಿಮಗೆ ಆ ಹಣವನ್ನುಕೇಳಲು ಶಕ್ತಿ ಇಲ್ಲ. ಆ ಬಗ್ಗೆ ಆಸಕ್ತಿಯೂ ನಿಮ್ಮಲ್ಲಿ ಇಲ್ಲ, ಅದನ್ನು ನೋಡಿದರೆ ಕುದುರೆ ಫಾರ್ಮಗೆ ಮತ್ತು ಸರ್ಕಾರಕ್ಕೆ ಯಾವ ತರಹದ ಸಂಬಂಧ ಎಂಬುದು ನನಗೆ ಗೊತ್ತಿಲ್ಲ. ಆ 70 ಲಕ್ಷ ರೂಪಾಯಿಗಳನ್ನು ವಸೂಲು ಮಾಡಿ ತನ್ನಿ, ಆ ದುಡ್ಡು ತಂದು ಎಲ್‌ಓಸಿ ಕೊಟ್ಟರೆ ಅಲ್ಲಿ ಹೇಮಾವತಿ, ಕಬಿನಿ, ಕೃಷ್ಣದಲ್ಲಿ ಕೆಲಸ ಆಗಲಿ ಅಂದರೆ, ಯಾವುದನ್ನೂ ಮಾಡುತ್ತಿಲ್ಲ ಅಂದರೆ ನಿಮಗೆ ಶಕ್ತಿ ಇಲ್ಲವೋ? ಅಥವಾ ಕೇಳುವ ಮನಸ್ಸು ಇಲ್ಲವೋ? That is why I am telling you, you have not plugged the loopholes. I am not telling you that you can't have the capacity, you have the capacity, but you don't have the will power for the reasons best known to the Government.

ಕೊರತೆಯನ್ನು ತುಂಬುವುದಕ್ಕಾಗಿ ಬೊಕ್ಕಸಕ್ಕೆ ಹಣವನ್ನು ತರುವಂಥ ದಿಸೆಯಲ್ಲಿ ಯೋಜನೆಗಳನ್ನು ರೂಪಿಸುವಂಥ ಮುಖ್ಯಮಂತ್ರಿಗಳು, ಈ ಸೋರಿಕೆಯನ್ನು ತಡೆಯಬೇಕಾಗುತ್ತದೆ. ಆದರೆ, ಈ ತರಹದ ಹಿನ್ನೆಲೆಯನ್ನು ನೋಡಿದರೆ ಅದನ್ನು ತಡೆಯಲು ನಿಮಗೆ ಆಗುವುದಿಲ್ಲ. ಈ ಕೊರತೆಯಿಂದ ಮತ್ತು ಆರ್ಥಿಕ ದುಸ್ಥಿತಿಯಿಂದ ಹೊರಗೆ ಬರಬೇಕಾದರೆ, ಮೊದಲು ನೀವು ಕೇಂದ್ರದಿಂದ ನಮಗೆ ಬರುವಂಥ ಆರ್ಥಿಕ ಸಹಾಯವನ್ನು ಪಡೆದುಕೊಳ್ಳಲು ಪ್ರಯತ್ನವನ್ನು ಮಾಡಬೇಕು. ಇದರಲ್ಲಿನ 20ನೇ ಪ್ಯಾರಾದಲ್ಲಿ ಮಾನ್ಯ ಮುಖ್ಯಮಂತ್ರಿಯವರು ಅವರ ಅಸಹಾಯಕತೆಯನ್ನು ತೋಡಿಕೊಂಡಿದ್ದಾರೆ. ಹಣಕಾಸು ಆಯೋಗದ ಶಿಫಾರಸ್ಸಿನ ಪ್ರಕಾರ ಸಂಪನ್ಮೂಲಗಳ ಒಟ್ಟು ಹಂಚಿಕೆಯಲ್ಲಿ ಕರ್ನಾಟಕ ರಾಜ್ಯಕ್ಕೆ ಹಲವಾರು ವರ್ಷಗಳಿಂದ ಪೂರ್ಣಪಾಲು ದೊರೆತಿಲ್ಲ ಎಂಬ ಸಂಗತಿ ತಮಗೆಲ್ಲಾ ತಿಳಿದಿದೆ. ಕೇಂದ್ರ ತೆರಿಗೆಗಳಲ್ಲಿ ರಾಜ್ಯದ ಪಾಲಿನ ಹಂಚಿಕೆಗೆ, ತಲಾವಾರು ಆದಾಯವನ್ನು ಒಂದು ಮುಖ್ಯ ಮಾನದಂಡವಾಗಿ ಅಳವಡಿಸಿಕೊಂಡಿರುವುದೇ ಇದಕ್ಕೆ ಮುಖ್ಯ ಕಾರಣ. ಕರ್ನಾಟಕವು ಐದನೆಯ ಹಣಕಾಸು ಆಯೋಗದ ಸಮಯದಿಂದಲೂ ಸಂವಿಧಾನದ 275ನೇ ಅನುಚ್ಛೇದದ ಮೇರೆಗೆ ಸಹಾಯಧನವನ್ನು ಸಹ ಪಡೆದಿಲ್ಲ. ಏಕೆ? ನಿಮಗೆ ಏನಾಗಿದೆ? you cannot blame that there is a different Government of different party.

ಅಲ್ಲಿ ನಿಮ್ಮದೇ ಸರಕಾರ ಇದೆ? ಅಲ್ಲಿ ವಿ. ಪಿ. ಸಿಂಗ್ ಕುಳಿತಿದ್ದಾರೆ. ಚಂದ್ರಶೇಖರ್‌ರವರು ಕುಳಿತಿದ್ದಾರೆ, ಮೊರಾರ್ಜಿ ದೇಸಾಯಿಯವರು ಕುಳಿತಿದ್ದಾರೆ ಎಂದು ನಿಮಗೆ ಹೇಳುವುದಕ್ಕಾಗುವುದಿಲ್ಲ.

ನಿಮ್ಮದೇ ಪಕ್ಷಕ್ಕೆ ಸೇರಿದಂಥ ಕೇಂದ್ರ ಸರಕಾರ ಇದ್ದಾಗ್ಯೂ ಕೂಡ, ಸಂವಿಧಾನದ 275ರ

ಅನುಚ್ಛೇದದ ಮೇರೆಗೆ ಬರಬೇಕಾದ ಹಣವನ್ನು ಪಡೆಯುವುದರಲ್ಲಿ ನೀವು ವಿಫಲರಾಗುವುದಕ್ಕೆ ಕಾರಣ ಏನು? ತಲಾವಾರು ಆದಾಯದ ಮೇಲೆ ಆ ರಾಜ್ಯಕ್ಕೆ ಬರಬೇಕಾದಂಥ ಭಾಗದ ಹಣವನ್ನು ಪಡೆಯದೇ ಇರಲು ಆದ ವಿಫಲತೆಗೆ ಕಾರಣ ಏನು? ಇದಕ್ಕೆ ಉತರಿಸುವವರು ಯಾರು? ಇದನ್ನು ಸದನವು ಅರ್ಥಮಾಡಿಕೊಂಡಿದೆಯೇ ಎಂಬುದು ನನಗೆ ಗೊತ್ತಿಲ್ಲ, ಆದರೆ ಇದು ನನ್ನ ಸಮಸ್ಯೆಯಾಗಿದೆ. ಹಣ ಇಲ್ಲ ಎಂದು ಬೊಬ್ಬೆ ಹೊಡೆದರೆ ಆಗುವುದಿಲ್ಲ ಅಧ್ಯಕ್ಷರೇ, ನಮಗೆ ಸಿಗುವ ಹಣವನ್ನು ತರಬೇಕು. ಆ ಬಗ್ಗೆ ಪ್ರಯತ್ನ ಮಾಡಬೇಕು. ಸಂವಿಧಾನದ 275ರ ಅನುಚ್ಛೇದದ ಪ್ರಕಾರ ಕೇಂದ್ರ ಸರಕಾರದಿಂದ ನಮಗೆ ಹಣ ಸಹಾಯ ಬಂದಿಲ್ಲವೆಂದು ಮುಖ್ಯಮಂತ್ರಿಯವರೇ ಒಪ್ಪಿಕೊಳ್ಳುತ್ತಾರೆ. ಇದು ಏಕೆ ಆಯಿತು? ನಿಮಗೇನು ತೊಂದರೆಯಾಗಿದೆ? ಕೇಂದ್ರಸರ್ಕಾರವನ್ನು ಕೇಳಲು ನಿಮಗೆ ಅಂಜಿಕೆ ಇದೆಯೇ? ಅಥವಾ ನಾಚಿಕೆಯಾಗುತ್ತಿದೆಯೇ? ಅದಕ್ಕಾಗಿ ನಾನು ಹೇಳಿದ್ದುದು, ಇದೆಲ್ಲಕ್ಕೂ ಮೂಲ ರಾಜಕೀಯ ಸ್ಥಿರತೆ. ಇಲ್ಲಿ ಮಿತವ್ಯಯ ಮಾಡೋಣ ಅಂದರೆ, ಯಾರೋ ಅಳಿಯ? ಯಾರದ್ದೋ ಮೊಮ್ಮಗ? ಯಾರೋ ಸೋದರತ್ತೆ ಗಂಡ? ಕೇಂದ್ರದಿಂದಾದರೂ ತರೋಣ ಅಂದರೆ ಪ್ರಧಾನಿಯವರನ್ನು ಗಟ್ಟಿಯಾಗಿ ಕೇಳುವ ಗಡಸುತನ ನಿಮ್ಮಲ್ಲಿ ಇಲ್ಲ. ಇದೇ ನಿಮ್ಮ ಆರ್ಥಿಕ ದುಸ್ಥಿತಿಗೆ ಇರುವ ಎರಡು ಕಾರಣಗಳು. ರಾಜ್ಯದ ಒಳಗಡೆ ಮಿತವ್ಯಯ ತರಲು ರಾಜಕೀಯ ಅಸ್ಥಿರತೆ ಇದೆ. ಕೇಂದ್ರ ಸರಕಾರಕ್ಕೆ ಬಲಿಷ್ಠವಾದ ಪ್ರಬಲವಾದ ಪ್ರಭಾವವನ್ನು ಬೀರಿ ಆರ್ಥಿಕ ಸಹಾಯವನ್ನು ಪಡೆಯಲು ಪ್ರಧಾನಿಗಳ ಹಂಗಿನಲ್ಲಿ ನೀವು ಇದ್ದೀರಿ. The ultimate casuality is to the people of Karnataka.

ಕೃಷ್ಣ ನದಿ ನೀರಿನ ಹಂಚಿಕೆಯ ವಿಚಾರದಲ್ಲಿ ನೀವು ಕೇಂದ್ರ ಸರಕಾರವನ್ನು ಎದುರು ಹಾಕಿಕೊಳ್ಳಲು ಇಷ್ಟಪಡುವುದಿಲ್ಲ, ಸಂವಿಧಾನತ್ಮಕವಾಗಿ ನಮಗೆ ಬರತಕ್ಕಂಥ ಹಣದ ಭಾಗವನ್ನು ಕೇಳಲು ನಿಮಗೆ ಶಕ್ತಿ ಇಲ್ಲ. ಎಲ್ಲದಕ್ಕೂ ಮೂಲ ಕಾರಣ ಎಂದರೆ, ಪ್ರಧಾನಿಗಳ ಹಂಗಿನಲ್ಲಿರುವ ಈ ರಾಜ್ಯದಲ್ಲಿನ ನಾಯಕತ್ವ ಏನಿದೆ, ಇದೇ ಪ್ರಬಲವಾದಂಥ ಕಾರಣ. ಈ ಒಂದು ವಿಫಲತೆಯಿಂದಾಗಿ ಈ ಸರಕಾರ 139 ಕೋಟಿ ರೂ.ಗಳ ಕೊರತೆ ಏನು ಇದೆಯೋ ಅದನ್ನು ತುಂಬಲು ಸಂಪನ್ಮೂಲಗಳ ಕ್ರೋಢೀಕರಣ, ಮತ್ತು ಮಿತವ್ಯಯ ಏನು ಕೋರಿದ್ದಾರೋ ಇವೆರಡನ್ನೂ ಕೂಡ ಸಾಧಿಸಲು ಈ ಸರಕಾರಕ್ಕೆ ಸಾಧ್ಯವಿಲ್ಲ ಎನ್ನುವ ಮಾತನ್ನು ಹೇಳಲು ಇಚ್ಛೆಪಡುತ್ತೇನೆ.

ಮತ್ತೊಂದು ವಿಷಯವನ್ನು ನಾನಿಲ್ಲಿ ಪ್ರಸ್ತಾವ ಮಾಡಬೇಕಾಗುತ್ತದೆ. ಅನಧಿಕೃತ ಕಟ್ಟಡಗಳನ್ನು ಸಕ್ರಮಗೊಳಿಸುವ ಮೂಲಕ ಹಣ ಪಡೆಯುವ ಬದಲು ಯಾರಾದರೂ ಸರ್ಕಾರದ ಪರವಾಗಿ ಕಿವಿಗೆ ಹಾಕಿಕೊಳ್ಳುವವರಿದ್ದರೆ ಒಂದು ಮಾತು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಿಮಗೂ ಅನುಭವಕ್ಕೆ ಬಂದಿರಬಹುದು, ದುಡ್ಡು ಬರುವಂತಹ ಒಂದು ಬಾಬ್ತು. ನಾವೆಲ್ಲರೂ ನಮ್ಮ ತಾಲ್ಲೂಕುಗಳಲ್ಲಿ ಅಕ್ರಮವಾಗಿ ಹೊಂದಿರುವ ಜಮೀನನ್ನು ಸಕ್ರಮಗೊಳಿಸುತ್ತಿದ್ದೇವೆ. ಅದೂ 4 ಎಕರೆ 38 ಗುಂಟೆಗಿಂತ ಯಾರಿಗಾದರೂ ಜಾಸ್ತಿ ಇದ್ದರೆ ಅವರಿಗೆ ಕೊಡಲು ಸಾಧ್ಯವಿಲ್ಲ. ಕೆಲವು ಕಡೆಗೆ ಹತ್ತಾರು ವರ್ಷಗಳಿಂದ ಜಮೀನು ಮಾಡುತ್ತಿದ್ದಾರೆ. 10-15 ವರ್ಷದ ತೆಂಗಿನಮರಗಳು ಬಂದು ಬಿಟ್ಟಿವೆ. ಆದರೂ ಕೂಡ ನಾವು ಅವರಿಗೆ ಜಮೀನು ಮಂಜೂರು ಮಾಡಿಕೊಡುವುದಕ್ಕೆ ಆಗುವುದಿಲ್ಲ because of this limitation.ಆದರೆ ಅವರನ್ನು ಬಿಡಿಸಲು ಸಾಧ್ಯವಾಗುವುದಿಲ್ಲ. ದೊಡ್ಡ ತೆಂಗಿನಮರಗಳು ಬೆಳೆದುಬಿಟ್ಟಿವೆ, ಅಡಿಕೆ ಮರ ಬೆಳೆದುಬಿಟ್ಟಿವೆ, ಪಂಪ್‌ಸೆಟ್ ಹಾಕಿ ಒಳಗಡೆ ಮನೆ ಕಟ್ಟಿಕೊಂಡುಬಿಟ್ಟಿದ್ದಾರೆ. ಈ ಜಮೀನುಗಳನ್ನು ಅಫ್‌ಸೆಟ್ ಪ್ರೈಸ್‌ಗೆ ಸರ್ಕಾರವ ಮೂಲಕ ಅವರಿಗೆ ಮಂಜೂರು ಮಾಡಬಹುದು. ಬಹುಶಃ ಬಿಡಿಎನಲ್ಲಿ ಸ್ಲಂ ಕ್ರಿಯೇಟ್ ಮಾಡು

ಬದಲು, ಈ ಕೆಲಸ ಮಾಡಬಹುದು. ನಾನು ಆಗಲೇ ರೆವಿನ್ಯು ಮಂತ್ರಿಗಳಿಗೆ ಕಾಗದ ಬರೆದಿದ್ದೇನೆ. ಯಾವ್ಯಾವ ಮಂತ್ರಿಗಳು ಕಾಗದ ಓದುತ್ತಾರೋ, ಓದಲ್ಲವೋ, ಓದಿದರೂ ಎಷ್ಟು ಜನಕ್ಕೆ ಅರ್ಥವಾಗುತ್ತದೆಯೋ, ಅರ್ಥವಾಗಿದ್ದನ್ನು ಕಾರ್ಯರೂಪಕ್ಕೆ ತರಲು ಎಷ್ಟು ಜನಕ್ಕೆ ಶಕ್ತಿ ಇದೆಯೋ ನನಗಂತೂ ಗೊತ್ತಿಲ್ಲ. ಇದನ್ನು ಅವರಿಗೆ ನಾನು ಬರೆದಿದ್ದೇನೆ. ಹತ್ತಾರು ವರ್ಷಗಳಿಂದ ತೋಟತುಡಿಕೆ ಮಾಡಿಕೊಂಡಿದ್ದಾರೆ. ಅವರಿಗೆ ನಾವು ಮಂಜೂರು ಮಾಡುವ ಹಾಗಿಲ್ಲ, ಹೊರಗಡೆಗೆ ಎತ್ತಿಹಾಕುವ ಹಾಗಿಲ್ಲ. ಒಂದೇ ಏಟಿನಲ್ಲಿ ನೀವು ಎರಡು ಹಕ್ಕಿಗಳನ್ನು ಹೊಡೆದಹಾಗಾಗುತ್ತದೆ. ಒಂದು, ಕಾನೂನಿನ ಚೌಕಟ್ಟಿನಲ್ಲಿ ಅವರಿಗೆ ಜಮೀನು ಕೊಟ್ಟ ಹಾಗೆ ಆಗುತ್ತದೆ. ನಿಮ್ಮ ಬೊಕ್ಕಸಕ್ಕೆ ಹಣವೂ ಬರುತ್ತದೆ ಸಾವಿರಾರು ಎಕರೆಗಳು ಸಿಗುತ್ತವೆ. ಬಹುಶಃ ಇದರಿಂದ ಕೋಟ್ಯಾಂತರ ರೂ.ಗಳು ಸರ್ಕಾರದ ಬೊಕ್ಕಸಕ್ಕೆ ಬಳಿದುಕೊಳ್ಳಲು ಸಹಾಯವಾಗುತ್ತದೆ. ಇದನ್ನು ಪರಿಶೀಲಸಿ ಮಾಡಬೇಕೆಂದು ಹೇಳಲು ನಾನು ಇಷ್ಟಪಡುತ್ತೇನೆ. ಈ ಆಯವ್ಯಯ ಏನಿದೆ ಈ ಗುರಿಯನ್ನು ಮುಟ್ಟುವುದರಲ್ಲಿ ಯಾವ ಕ್ಷೇತ್ರದಲ್ಲೂ ಸಾಧ್ಯವಾಗುವುದಿಲ್ಲ. ಎಂಬುದು ನನ್ನ ಭಾವನೆ. ಒಂದು ಬಿಟ್ಟು, ಯಾವುದರಲ್ಲಿ ಅಂದರೆ ಸರ್ಕಾರಿ ನೌಕರರಿಗೆ ಸಂಬಳ ಕೊಡುವುದು. ನಮ್ಮ ಯೋಜನಾ ವೆಚ್ಚದ ಗುರಿ ಮುಟ್ಟುವ ಯಾವುದಾದರೂ ಕ್ಷೇತ್ರ ಇದ್ದರೆ ಇದೊಂದೇ ಕ್ಷೇತ್ರ ಅದು. 31ನೇ ತಾರೀಖು ಬಿಲ್ ಆಗಿಯೇ ಆಗುತ್ತದೆ.

1ನೇ ತಾರೀಖು ಸಂಬಳ ಬಂದೇ ಬರುತ್ತದೆ. ಈಗ 26-27ನೇ ತಾರೀಖಿಗೆ ಸಂಬಳ ಕೊಟ್ಟು ಬಿಡುತ್ತಾರಂತೆ. ಆದ್ದರಿಂದ ಇದೊಂದು ಕ್ಷೇತ್ರವನ್ನು ಬಿಟ್ಟರೆ ಮುಖ್ಯಮಂತ್ರಿಗಳು ತೋರಿರುವ ಯಾವುದೇ ಯೋಜನಾ ವೆಚ್ಚದ ಗುರಿ ಮುಟ್ಟಲು ಸಾಧ್ಯವಿಲ್ಲ. ಈ ಗುರಿಯನ್ನು ಸಾಧಿಸುವುದರಲ್ಲಿ ಮಿತವ್ಯಯ ತರುವುದರಲ್ಲಿ, ಸೋರಿಕೆಯನ್ನು ನಿಲ್ಲಿಸುವುದರಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ಹೆಚ್ಚು ಹಣ ಒದಗಿಸಿಕೊಡುವುದರಲ್ಲಿ ಈ ರಾಜ್ಯದ ಮುಖ್ಯಮಂತ್ರಿಗಳು ಸಫಲರಾದರೆ, ಅವರು ಇನ್ನೂ ಹತ್ತು ವರ್ಷ ಈ ರಾಜ್ಯದಲ್ಲಿ ಮುಖ್ಯಮಂತ್ರಿಯಾಗಿರಲಿ, ನನ್ನ ಅಭ್ಯಂತರವಿಲ್ಲ. ದೇವರೇನಾದರೂ ಅವರಿಗೆ ಆ ಶಕ್ತಿ ಕೊಡಲಿ ಅಂತ ನಾನು ಅವರ ಪಕ್ಷದ ಶಾಸಕರು, ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇದ್ದರೆ ಆತನು ಅವರಿಗೆ ಆಶೀರ್ವಾದ ಮಾಡಲಿ ಯೋಜನಾ ವೆಚ್ಚದ ಗುರಿ ಮುಟ್ಟುವ ಸಾಹಸದ ಕೆಲಸದಲ್ಲಿ ಅವರಿಗೆ ನೆರವಾಗಲಿ. ಇನ್ನು ಕೆಲವು ಯೋಜನೆಗಳನ್ನು ಇದರಲ್ಲಿ ತಂದಿದ್ದಾರೆ. ನೀರಾವರಿ, ತಮ್ಮ ಮೂಲಕ ಈ ಸದನದ ಮೂಲಕ ನೋವಿನಿಂದ ಈ ರಾಜ್ಯದ ಜನತೆಗೆ ಹೇಳಬೇಕಾಗುತ್ತದೆ. ಅದೇನು ಅಂದರೆ ಈ ರಾಜ್ಯದ ಎರಡು ಪ್ರಮುಖ ನೀರಾವರಿ ಯೋಜನೆಗಳ ಕೆಲಸದ ಬಗ್ಗೆ ಈ ಸದನದಲ್ಲಿ ಚರ್ಚೆ ಮಾಡಲು ನನಗೆ ಅವಕಾಶ ದೊರೆಯುತ್ತಾ ಇಲ್ಲ, ಪತ್ರಿಕೆ ಮೂಲಕ ನಾನು ರಾಜ್ಯದ ಜನತೆಗೆ ನಾನು ತಿಳಿಸಿಕೊಡುತ್ತಿದ್ದೇನೆ. ಈ ರಾಜ್ಯದ ಸಾಹಿತಿಗಳು ಬರೆಯುತ್ತಾರೆ. ಕೃಷ್ಣಾ ನದಿಯ ನೀರಿನ ಬಗ್ಗೆ ಚರ್ಚೆ ಮಾಡಲು ಆಸಕ್ತಿ ಇಲ್ಲದಂತಹ ಬೆನ್ನುಹುರಿ ಇಲ್ಲದ ರಾಜಕಾರಣಿಗಳು ಈ ರಾಜ್ಯದ ರಾಜಕಾರಣಿಗಳು ಎಂದು ಹೇಳುತ್ತಿದ್ದಾರೆ. ರಾಜಕಾರಣಿಯಾಗಿ ನಾನು ಈ ಮಾತು ಹೇಳುತ್ತಿಲ್ಲ. ಸಾಹಿತಿಗಳು ಕೊಪ್ಪಳದಲ್ಲಿ ರೆಸಲ್ಯೂಶನ್ ಪಾಸ್ ಮಾಡಿದ್ದಾರೆ.

ಬೆನ್ನುಹುರಿ ಇಲ್ಲದಂಥ ರಾಜಕಾರಣಿಗಳು, ಈ ರಾಜ್ಯದ ಕೃಷ್ಣ ನದಿಯ ನೀರಿನ ಹಂಚಿಕೆ ಬಗ್ಗೆ ಚಕಾರ ಶಬ್ದವನ್ನು ಎತ್ತದೇ ಇರುವಂಥ ಬೆನ್ನುಹುರಿ ಇಲ್ಲದಂಥವರು ಎಂದು ಬರೆದಿದ್ದಾರೆ. ಎರಡು ಸಾವಿರ ವರ್ಷದಲ್ಲಿ ಬ್ರಹ್ಮನ ಕೈಯಲ್ಲಿ ಕೂಡ ಕೃಷ್ಣ ನದಿ ನೀರಿನ ಉಪಯೋಗವನ್ನು ಮಾಡಿಕೊಳ್ಳುವಂಥ ಕಾರ್ಯವನ್ನು ಸಾಧಿಸಲಿಕ್ಕೆ ಸಾಧ್ಯ ಇಲ್ಲ ಎಂದು ಬೀದಿಯಲ್ಲಿ ಜನ ಮಾತನಾಡಿಕೊಳ್ಳುತ್ತಾರೆ. ಇಡೀ ರಾಜ್ಯದಲ್ಲಿ ಅದರಲ್ಲೂ ಕಾವೇರಿಯ ಕೊಳ್ಳದಲ್ಲಿ ಗುಸುಗುಸು

ಮಾತು ನಡೆಯುತ್ತಿದೆ. ಕಾವೇರಿಕೊಳ್ಳದ ಜನತೆಗೆ ಅಂದಿನ ಮದ್ರಾಸ್‌ನವರೇ ಆದ ರಾಷ್ಟ್ರಾಧ್ಯಕ್ಷರಿಂದ ಅನ್ಯಾಯವಾಯಿತು. ಇವತ್ತು ಕೃಷ್ಣ ಕೊಳ್ಳದ ಜನತೆಗೆ ಈ ರಾಷ್ಟ್ರದ ಪ್ರಧಾನಿಯಾದ ನರಸಿಂಹರಾಯರಿಂದ ಅನ್ಯಾಯವಾಗುತ್ತಿದೆ ಎನ್ನುವ ಮಾತನ್ನು ಜನರು ಮಾತನಾಡಿಕೊಳ್ಳುತ್ತಿದ್ದಾರೆ. ಇಂಥ ಒಂದು ಗಂಭೀರವಾದ ಸಮಸ್ಯೆಯ ವಿಷಯದಲ್ಲಿ ಯೋಜನೆಗಳ ಅನುಷ್ಠಾನದ ವಿಷಯದಲ್ಲಿ ಈ ಸರ್ಕಾರ ಏನು ಮಾಡುತ್ತಿದೆ ಎನ್ನುವುದನ್ನು ಕೇಳಲಿಕ್ಕೆ ನಾನು ಮಾಡಿದ ಎಲ್ಲಾ ಪ್ರಯತ್ನಗಳೂ ವಿಫಲವಾಗಿವೆ. ಈ ಸದನದ ಮುಂದೆ ಚರ್ಚೆ ಮಾಡಲಿಕ್ಕೆ ಎಲ್ಲಾ ನಿಯಮಗಳ ಪ್ರಕಾರ ನಾನು ತೆಗೆದುಕೊಂಡು ಬಂದಿದ್ದೆ, ಅದಕ್ಕೆ ಅವಕಾಶವಿಲ್ಲ. ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಹೇಮಾವತಿ ಬಗ್ಗೆ ಪ್ರಶ್ನೆ ಕೇಳಿದ್ದೆ. ಪ್ರಶ್ನೆಗೆ ಬಂದಂಥ ಉತ್ತರವನ್ನು ಕೊಡದೆ ತಡೆಹಿಡಿಯಲಾಯಿತು. ನಾನು ಈ ವಿಷಯದಲ್ಲಿ I must compliment Sri Bangarappa. ನಾನು ಅವರ ಬಗ್ಗೆ ಸುರುಕೊಳ್ಳುವಷ್ಟು ವ್ಯಾಮೋಹ ಏನೂ ಇಲ್ಲ. ನಾನೂ ಈ ಸದನಕ್ಕೆ ಸದಸ್ಯರಾಗಿ ಬರಕೂಡದು ಎನ್ನುವಂಥದಕ್ಕೆ ಬಹಳ ಶ್ರಮಪಟ್ಟವರು ಅವರು. ಮಾನ್ಯ ಬಂಗಾರಪ್ಪನವರು. ನನ್ನನ್ನು ಸೋಲಿಸುವುದಕ್ಕೆ ಬಹಳ ಪ್ರಯತ್ನಪಟ್ಟವರು. ಆದರೂ ಕೂಡ ಈ ಒಂದು ವಿಷಯದಲ್ಲಿ ಅವರನ್ನು ನಾನು ಮೆಚ್ಚಿಕೊಳ್ಳುತ್ತೇನೆ. He has used everything at his command to see that I should not enter this House. But still I compliment him particularly in view of the decisions he has taken in respect of Irrigation Projects............ ಸನ್ಮಾನ್ಯ ಅಧ್ಯಕ್ಷಿಣಿಯವರೇ, ತನ್ನದೇ ಆದಂಥ ಪಕ್ಷದ ಸರ್ಕಾರದ ವಿರುದ್ಧವಾಗಿ ಸುಗ್ರೀವಾಜ್ಞೆಯನ್ನು ಹೊರಡಿಸುವಂಥ ಗಂಡಸುತನವನ್ನು ಅವರು ಪ್ರದರ್ಶನ ಮಾಡಿದರು. ಅದು ಸಿಂಧುವೋ ಅಸಿಂಧುವೋ ಕಾನ್‌ಸ್ಟಿಟ್ಯೂಷನೋ, ಅನ್‌ಕಾನ್‌ಸ್ಟಿಟ್ಯೂಷನೋ, ಲೀಗಲೋ, ಇಲ್ಲೀಗಲೋ ಅದು ಬೇರೆ ಆಯಿತು. ಆದರೆ ಈ ರಾಜ್ಯದ ಜನರ ಹಿತವನ್ನು ರಕ್ಷಣೆ ಮಾಡುವಂಥ ಸಂದರ್ಭದಲ್ಲಿ ತನ್ನದೇ ಆದಂಥ ಪಕ್ಷಕ್ಕೆ ಕೂಡ ಇರಿಸು ಮುರಿಸು ಬರುವಂಥ ತೀರ್ಮಾನವನ್ನು ತೆಗೆದುಕೊಳ್ಳುವಂಥ ಗಂಡು ನಿರ್ಧಾರವನ್ನು ಅವರು ಮಾಡಿದರು. ಅಷ್ಟೇ ಅಲ್ಲ, ಈ ಸದನದ ಮುಂದೆ ತೀರ್ಮಾನವನ್ನು ತೆಗೆದುಕೊಂಡರು. ಸರ್ವಪಕ್ಷದ ಸಮ್ಮತವಾದಂಥ ತೀರ್ಮಾನ. ಏನೆಂದರೆ ನೀರಿನ ಹಂಚಿಕೆಯ ದಾರಿ ದೀಪವೇ ಇಲ್ಲದಂಥ ಸಂದರ್ಭದಲ್ಲಿ ನೀರಿನ ಹಂಚಿಕೆಯ ಬಗ್ಗೆ ತೀರ್ಮಾನ ಕೊಡಲಿಕ್ಕೆ ದೆಹಲಿಯಲ್ಲಿ ಕುಳಿತಿರತಕ್ಕಂಥ ನ್ಯಾಯ ಮಂಡಲಿಯನ್ನು ಬಹಿಷ್ಕರಿಸ ಬೇಕು ಎನ್ನುವಂಥ ಸರ್ವಸಮ್ಮತವಾದ ತೀರ್ಮಾನವನ್ನು ಇಲ್ಲಿ ತೆಗೆದುಕೊಂಡರು. ಅಷ್ಟೇ ಅಲ್ಲ, ಆಗ ನಾನು ಶಾಸಕನಲ್ಲ. He constituted a High Power Committee, including me.

ಶಾಸಕನಲ್ಲದೇ ಇರುವಂಥ ನನ್ನನ್ನು ಕೂಡ ಇವನಿಗೆ ಏನೊ ಅಷ್ಟೋ ಇಷ್ಟೋ ಆ ವಿಷಯದಲ್ಲಿ ಆಸಕ್ತಿ ಇದೆ ಎಂದು ತಿಳಿದುಕೊಂಡು ಈ ಕಾವೇರಿ ನೀರಿನ ಹಂಚಿಕೆಯ ಬಗ್ಗೆ ನಡೆಯುತ್ತಿರುವಂಥ ವಿದ್ಯಮಾನಗಳನ್ನು ಚರ್ಚೆ ಮಾಡಲಿಕ್ಕೆ, ಅದಕ್ಕೆ ಪರಿಹಾರಗಳನ್ನು ಸೂಚಿಸಲಿಕ್ಕೆ ಒಂದು ಉನ್ನತ ಮಟ್ಟದ ಸಮಿತಿಯನ್ನು ಮಾಡಿದರು. ಇಷ್ಟೆಲ್ಲ ಅವರು ಮಾಡಿದರೆ ಸನ್ಮಾನ್ಯ ಮುಖ್ಯಮಂತ್ರಿಗಳು ಈ ರಾಜ್ಯದ ಸೂತ್ರವನ್ನು ಹಿಡಿದಂಥ ಸಾರಥಿಯಾಗಿ ಮೂರು ತಿಂಗಳಾಯಿತು. ಪತ್ರ ಬರೆದೆ, ಅವುಗಳಿಗೆ ಉತ್ತರವಿಲ್ಲ. ಕಾವೇರಿ ಕೊಳ್ಳದ ಶಾಸಕರನ್ನು ಕರೆದು ಚರ್ಚೆ ಮಾಡುತ್ತೇನೆ ಎಂದು ಹೇಳಿದ ವಾಗ್ದಾನಕ್ಕೆ ಅವರಲ್ಲಿ ಬೆಲೆ ಇಲ್ಲ ಏಕೆ ? ಏನಾಗಿದೆ? ನಾನು ಇವತ್ತು ಅಪವಾದವನ್ನು ಮಾಡಬೇಕಾಗುತ್ತದೆ.

ಎರಡು ಕೊಳ್ಳಕ್ಕೂ ಸೇರಿದ ಈ ಮುಖ್ಯಮಂತ್ರಿಗಳಿಗೆ ಬಹುಶಃ ಈ ಎರಡು ಯೋಜನೆಗಳ ಅನುಷ್ಠಾನದಲ್ಲಿ ಆಸಕ್ತಿ ಇಲ್ಲ. I have no alternative. I am forced to make this complaint. ಉಪ್ಪು ನೀರಿನ ಮೀನು ಹಿಡಿಯುವವರ ಬಗ್ಗೆ ಆಸಕ್ತಿ, ಕೃಷ್ಣ, ಕಾವೇರಿ ಕೊಳ್ಳದ ಕಾರ್ಯಗಳ ಅನುಷ್ಠಾನದ ಬಗ್ಗೆ ಈ ಮುಖ್ಯಮಂತ್ರಿಗಳಿಗೆ ಇಲ್ಲ. ಏಕೆ? ಏಕೆ, ಯಾವುದೋ ಕಾಣದ ಕೈ ಒಂದು ವಾರದಿಂದ ಈ ಸದನದಲ್ಲಿ ಚರ್ಚೆ ಮಾಡುವುದನ್ನು ತಡೆಹಿಡಿಯುತ್ತಿದೆ. ಯಾವುದೋ ಕಾಣದ ಕೈನ ಕೈವಾಡ ನಡೆಯುತ್ತಿದೆ. ಈ ಎರಡೂ ಯೋಜನೆಗಳ ಅನುಷ್ಠಾನವನ್ನು ತಡೆಹಿಡಿಯುವಂತಹ ಯಾವುದೋ ಪಿತೂರಿ ನಡೆಯುತ್ತಿದೆ. ಇದು ಇಲ್ಲ ಎನ್ನುವುದಾದರೆ ಸರ್ಕಾರ ಮುಂದೆ ಬರಲಿ ಏನಿದೆ ಎಂದು ಹೇಳಲಿ. Why they are not prepared to discuss. Why you are not calling the meeting of the Legislators of the two Benches to discuss about the implementation of the two projects. ನಿಮಗೆ ದೇವರು ಒಳ್ಳೆಯದು ಮಾಡುವುದಿಲ್ಲ. ಮಾನ್ಯ ಅಧ್ಯಕ್ಷರು ಈಗ ನೀವು ಪ್ರಸ್ತಾಪ ಮಾಡಬಹುದು ಎಂದು ಹೇಳಿದರು. ಆ ಪ್ರಸ್ತಾಪ ಪ್ರಯೋಜನ ಆಗುವುದಿಲ್ಲ. ಉತ್ತರ ಕೊಟ್ಟರೆ ತಾನೆ ನನ್ನ ಕಂಠ ಶೋಷಣೆಗೆ? 68ರ ಕೆಳಗಡೆ ಆಗಿದ್ದರೆ ನಾವು ಪ್ರಸ್ತಾಪ ಮಾಡುತ್ತಿದ್ದೆವು, ಅವರು ಉತ್ತರ ಕೊಡುತ್ತಿದ್ದರು. ಈಗ ಮಾಡಿಕೊಂಡರೂ ಸಹ ಮಾನ್ಯ ಮುಖ್ಯ ಮಂತ್ರಿಗಳು ದೆಹಲಿಗೆ ಹೋಗಿದ್ದಾರೆ. ಬಂದ ಮೇಲೆ ಯಾವುದೋ ಒಂದೆರಡು ಪ್ಯಾರಾ ಓದಿಕೊಳ್ಳುತ್ತಾರೆ, ಮೋಸ್ಟ್‌ಲಿ ಎಕ್ಸೈಸ್ ಮೇಲೆ ಉತ್ತರ ಮೇಲುತ್ತರ ಕೊಡುತ್ತಾರೆ. ಅದು ಹಾಗೆಯೇ ಆಗುತ್ತದೆ. ಅಬಕಾರಿಗೆ ಆದ್ಯತೆ ಇರುವಷ್ಟು ನೀರಾವರಿಗೆ ಈ ಸರ್ಕಾರಕ್ಕೆ ಆಗಲಿ ಅಥವಾ ಈ ಸದನಕ್ಕೆ ಇಲ್ಲವೇ? 66 ಜನ ಕ್ಯಾಂಟೀನ್‌ನಲ್ಲಿ ಕೆಲಸ ಮಾಡುವಂತಹವರ ವಿಷಯವನ್ನು ಚರ್ಚೆ ಮಾಡುವುದಕ್ಕೆ ಈ ಸದನದಲ್ಲಿ ಅವಕಾಶ ಇದೆ. 250 ಜನ ಅರಣ್ಯ ಪ್ರೇರಕರ ಸಮಸ್ಯೆಯನ್ನು ಚರ್ಚೆ ಮಾಡುವುದಕ್ಕೆ ಈ ಸದನದಲ್ಲಿ ಅವಕಾಶ ಇದೆ. ನಿಯಮಗಳ ಪ್ರಕಾರ ನೀವು ಅದಕ್ಕೆ ಅವಕಾಶ ಕೊಡುತ್ತೀರಿ. ಆದರೆ, ಲಕ್ಷಾಂತರ ಜನ ಈ ಎರಡೂ ಯೋಜನೆಗಳಿಂದ ಬರುವಂತಹ ನೀರಿಗಾಗಿ ಚಾತಕಪಕ್ಷಿಯಂತೆ ಕಾಯ್ದು ಕುಳಿತಿರುವಾಗ, ಈ ಯೋಜನೆಗಳು ನೆನೆಗುದಿಗೆ ಬಿದ್ದಿವೆ, ಈ ಯೋಜನೆಗಳು ನೆನೆಗುದಿಗೆ ಬಿದ್ದಿರುವಾಗ, ವಿಶಬ್ಯಾಂಕಿನ ನೆರವು ಕೃಷ್ಣ ಯೋಜನೆಯ ಅನುಷ್ಠಾನಕ್ಕೆ ನಿಂತು ಹೋಗಿರುವಾಗ ಕಾವೇರಿ ಬಗ್ಗೆ ನ್ಯಾಯ ಮಂಡಲಿ ಏನು ತೀರ್ಪು ಕೊಡುತ್ತದೆ ಎನ್ನುವಂತಹ ಅಜ್ಞಾತದಲ್ಲಿ ನಮ್ಮನ್ನು ನೀವು ದೂಡಿರುವಾಗ ಈ ವಿಷಯದ ಚರ್ಚೆಗೆ ಅವಕಾಶ ಇಲ್ಲ ಎಂದರೆ ಅದಕ್ಕೆ ಸಂಬಂಧಪಟ್ಟವರು ಯಾರೇ ಆಗಿರಲಿ ಅದನ್ನು ನಾನು ಪ್ರತಿಭಟಿಸುತ್ತೇನೆ. ಈ ನೀರಾವರಿ ಬಗ್ಗೆ ಚರ್ಚೆ ಅವಶ್ಯಕತೆ ಇಲ್ಲ ಎಂದು ಸದನದಲ್ಲಿ ಅಧ್ಯಕ್ಷರು ಅಭಿಪ್ರಾಯ ಪಟ್ಟಿರುತ್ತಾರೆ. ಸರ್ಕಾರಕ್ಕೂ ಕೂಡ ಇದರ ಬಗ್ಗೆ ಆಸಕ್ತಿ ಇದ್ದ ಹಾಗೆ ಇಲ್ಲ. ಅದನ್ನು ರಾಜ್ಯದ ಜನತೆಗೆ ತಮ್ಮ ಮೂಲಕ ತಿಳಿಸುತ್ತಿದ್ದೇನೆ. ಇಷ್ಟಾದರೂ ನಮ್ಮ ನೀರಾವರಿ ಮಂತ್ರಿ ಅವರನ್ನು ಹಾಗೆ ಕರೆಯಬೇಕೋ ಬೇಡವೋ ಗೊತ್ತಿಲ್ಲ. Because I have said that Constitutionally he is not a Deputy Chief Minister. ನನ್ನ ಮಟ್ಟಿಗೆ ಅವರು ನೀರಾವರಿ ಮತ್ತು ವಿದ್ಯುಚ್ಛಕ್ತಿಯ ಕ್ಯಾಬಿನೆಟ್ ದರ್ಜೆಯ ಮಂತ್ರಿಗಳಾಗಿದ್ದಾರೆ. ಅಷ್ಟು ಮಟ್ಟಿಗಾದರೂ ನಾನು ಒಂದು ಒರಟಾದ ಪತ್ರವನ್ನು ಬರೆದಿದ್ದೆ. ನಿಮಗೆ ಕೃಷ್ಣಾ ಕಣ್ಣಿಗೆ ಬಿತ್ತು, ಕಾವೇರಿ ಕಣ್ಣಿಗೆ ಬೀಳಲಿಲ್ಲವೇ ಎಂದು ಬರೆದಿದ್ದೆ. ಏಕೆಂದರೆ ಇವರ ಮನೆ ಮುಂದೆ ನೀರು ಹೋಗುತ್ತದೆ. ಹೇಮಾವತಿ ನೀರು ಶಿಂಷಾ ವ್ಯಾಲಿಯಲ್ಲಿ ಬಿದ್ದರೆ ಸನ್ಮಾನ್ಯ ಸಚಿವರ ಮನೆ ಮುಂದೆ ಕೂಡ ಕಾಲುವೆ ಹೋಗುತ್ತದೆ. ಇವರಾದರೂ ಕೂಡ ಕೃಷ್ಣಾ ಕಾವೇರಿ ಬೇಸಿಸ್‌ನ ಶಾಸಕರನ್ನು

ಕರೆದಿದ್ದರೋ ಇಲ್ಲವೋ ಗೊತ್ತಿಲ್ಲ. ಏಕೆಂದರೆ ನಾನು ಆ ಬೇಸಿನ್‌ಗೆ ಬರುವುದಿಲ್ಲ. ಕಾವೇರಿ ಬೇಸಿನ್ ಶಾಸಕರನ್ನು ಅಂತೂ ಕರೆದಿಲ್ಲ. ಕರೆದು ಅನುಷ್ಠಾನದ ಬಗ್ಗೆ ಯೋಜನೆ ಬಗ್ಗೆ ಚರ್ಚೆ ಮಾಡಿಲ್ಲ. ಆದ್ದರಿಂದ ಈ ಸದನದಲ್ಲಿ ನಾನು ಸರ್ಕಾರವನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಕಾವೇರಿ ಮತ್ತು ಕೃಷ್ಣಾ ಯೋಜನೆ ಅನುಷ್ಠಾನದ ಬಗ್ಗೆ.

ಶ್ರೀ ವಾಟಾಳ್‌ನಾಗರಾಜ್ : ನೀರಾವರಿ ಮಂತ್ರಿಗಳು ಯಾರು?

ಶ್ರೀ ವೈ. ಕೆ. ರಾಮಯ್ಯ : ಎಸ್. ಎಂ. ಕೃಷ್ಣ ಅವರು. There is no constitutional sanction.

ಶ್ರೀ ವಾಟಾಳ್ ನಾಗರಾಜ್ : ಉಪ ಮುಖ್ಯಮಂತ್ರಿಗಳು ಎಂದು ಕರೆಯುವುದಿಲ್ಲ ಎನ್ನುವ ಪ್ರಶ್ನೆ ಬಂದರೆ ಹೇಗೆ? ಉಪ ಮುಖ್ಯಮಂತ್ರಿಗಳನ್ನು ಉಪ ಮುಖ್ಯಮಂತ್ರಿಗಳು ಎಂದು ಕರೆಯುವುದಿಲ್ಲ ಎಂದರೆ ಹೇಗೆ ? ಅವರು ಉಪ ಮುಖ್ಯಮಂತ್ರಿಗಳು ಎಂದು ಈ ಸದನಕ್ಕೆ ಬರುತ್ತಿದ್ದಾರೆ. ಅವರು ಪ್ರಮಾಣವಚನ ಸ್ವೀಕಾರ ಮಾಡಿದ್ದಾರೆ ಉಪ ಮುಖ್ಯಮಂತ್ರಿಗಳು ಎಂದು ಪ್ರಮಾಣವಚನ ಸ್ವೀಕಾರ ಮಾಡಿ ಆದ ಮೇಲೆ ಅದೇ ರೀತಿ ಈ ಸದನಕ್ಕೆ ಬರುತ್ತಿದ್ದಾರೆ. ಅವರ ಪತ್ರ ಬಂದಿದೆ; ಉಪ ಮುಖ್ಯಮಂತ್ರಿಗಳು ಎಂದು. ಅದನ್ನು ನಾನು ಒಪ್ಪುವುದಿಲ್ಲ ಎಂದರೆ ಹೇಗೆ? ಇದರ ಬಗ್ಗೆ ದೊಡ್ಡ ವ್ಯಾಖ್ಯಾನ ಆಗಬೇಕಾಗುತ್ತದೆ. ಹಿಂದೆ ದೇವಿಲಾಲ್ ಅವರು ಉಪ ಪ್ರಧಾನಿ ಆಗಿದ್ದರು. ಮೊರಾರ್ಜಿದೇಸಾಯಿ ಇದ್ದರು. ಇದು ಈ ರೀತಿ ಆಗಿದ್ದರೆ ಸರಿಯಾದ ರೀತಿ ಅಲ್ಲ. ನನ್ನ ದೃಷ್ಟಿಯಲ್ಲಿ ಈಗ ಪ್ರಮಾಣವಚನ ಸ್ವೀಕಾರ ಮಾಡಬೇಕಾದರೆ ರಾಜ್ಯಪಾಲರನ್ನು ಕರೆದು ಪ್ರಮಾಣವಚನ ಬೋಧನೆ ಮಾಡಬೇಕಾದರೆ ಉಪ ಮುಖ್ಯಮಂತ್ರಿ ಎಂದು ಹೇಳಿದ್ದಾರೆ. ಯಾರು ಹೇಳಿರತಕ್ಕವರು? ಸಂವಿಧಾನದ ಒಬ್ಬ ಮುಖ್ಯಸ್ಥ. ನಮ್ಮ ರಕ್ಷಕರು ನಮ್ಮರಾಜ್ಯದ ರಾಜ್ಯಪಾಲರು. ಅವರ ಮುಂದೆ ಪ್ರಮಾಣ ವಚನ ನಡೆದಿರುವಾಗ ನಾನು ಅದನ್ನು ಒಪ್ಪುವುದಿಲ್ಲ ಎಂದು ಹೇಳುವುದಾದರೆ ಮಾನ್ಯ ರಾಮಯ್ಯನವರು ಯಾವ ರೀತಿ ವ್ಯಾಖ್ಯಾನ ಮಾಡುತ್ತಿದ್ದಾರೋ ಅದರ ಬಗ್ಗೆ ಮತ್ತಷ್ಟು ಬೆಳಕನ್ನು ಚೆಲ್ಲಬೇಕು ಎಂದು ಹೇಳುತ್ತೇನೆ.

ಶ್ರೀ ಎ. ಕೆ. ಅನಂತಕೃಷ್ಣ : ಅವರು ಪಾಪ ಬಹಳ ವಿಷಯ ಒಪ್ಪುವುದಿಲ್ಲ. ಇದನ್ನೆಲ್ಲಾ ಮಾಡಿ ಎಂದು ಸರಿಯಾಗಿಲ್ಲ ಕೆಪಾಸಿಟಿ ಇಲ್ಲ, ಎಬಿಲಿಟಿ ಇಲ್ಲ ಎಂದು ಏನೇನೋ ಹೇಳುತ್ತಾರೆ, ಸರ್ಕಾರಕ್ಕೆ ಪ್ರೇಯರ್ ಮಾಡುತ್ತಿದ್ದಾರೆ. It is not a question of prayer. It is a question of Constitutional Validity. ಈ ಬಗ್ಗೆ ಚರ್ಚೆಗೆ ಇಷ್ಟವಿಲ್ಲ. ಉಪ ಮುಖ್ಯಮಂತ್ರಿ ಎಂದು ಕರೆಯಬೇಕೋ ಬೇಡವೋ ಯಾರು ಬೋಧಿಸಿದ್ದಾರೋ, ಯಾರು ಫಾರಂ ಫಿಲಪ್ ಮಾಡಿದ್ದಾರೋ ಗೊತ್ತಿಲ್ಲ. ಸಂವಿಧಾನದ 156ನೇ ಆರ್ಟಿಕಲ್ ಪ್ರಕಾರ ಉಪ ಮುಖ್ಯಮಂತ್ರಿಗಳ ಹುದ್ದೆಯ ಅವಕಾಶ ಇಲ್ಲ. '' ಹುದ್ದೆ '' ಒಂದು ಸೆಕೆಂಡ್ ಡಿವಿಜನ್ ಕ್ಲಾರ್ಕನ್ನು ನೇಮಕ ಮಾಡಬೇಕಾದರೂ ವಿಧಿವಿಧಾನಗಳಿವೆ. ನಮ್ಮ ರಾಜ್ಯದಲ್ಲಿ ಉಪಮುಖ್ಯಮಂತ್ರಿಯ ಹುದ್ದೆಯ ಸೃಷ್ಟಿಗೆ ಸಂವಿಧಾನದ ನೆರವು ಇಲ್ಲ. It is an Unconstitutional Act.

ಶ್ರೀ ವಾಟಾಳ್ ನಾಗರಾಜ್ : ನಮ್ಮ ರಾಜ್ಯದ ರಾಜ್ಯಪಾಲರು ಸಂವಿಧಾನದ ಪಾಲಕರು. ಅದು ಹೇಗೆ? ಅವರು ಪ್ರಮಾಣವಚನವನ್ನು ಬಹಿರಂಗವಾಗಿ ಮಾಡಿಸಿ

ಕೊಂಡಿದ್ದಾರೆ. ಯಾರ ತೆರೆಯಮರೆಯಲ್ಲಿ ನಡೆದಿರತಕ್ಕಂಥದ್ದಲ್ಲ. ಪ್ರಮಾಣವಚನವನ್ನು ಬೋಧಿಸಿದ್ದಾರೆ. ಉಪಮುಖ್ಯಮಂತ್ರಿ ಎಂದು ನಾವು ಇಲ್ಲಿ ಒಪ್ಪಿದ್ದೇವೆ. ಮಾನ್ಯ ರಾಮಯ್ಯನವರು ಒಪ್ಪಿಲ್ಲವೋ.

Chairman : Your time is running out. I cannot help.

ಒಬ್ಬ ಮಾನ್ಯ ಸದಸ್ಯರು : ಚೌಧರಿ ಚರಣ್‌ಸಿಂಗ್‌ರವರನ್ನು, ಬಾಬುರ ಜಗಜೀವನರಾಂರವರನ್ನು ಮತ್ತು ದೇವಿಲಾಲ್‌ರವರನ್ನು ಡೆಪ್ಯೂಟಿ ಉಪ ಪ್ರಧಾನಮಂತ್ರಿ ಮಾಡುವಾಗ ಸಂವಿಧಾನದಲ್ಲಿ ಪ್ರಾವಿಜನ್ ಇತ್ತು ಎಂದು ಕಾಣಿಸುತ್ತದೆ.

ಶ್ರೀ ವಾಟಾಳ್ ನಾಗರಾಜ್ : ನಾನು ಏನು ಹೇಳುತ್ತಿದ್ದೇನೆಂದರೆ ಏನೋ ಒಂದು ಅರಳಿ ಮರದ ಕೆಳಗೆ ಇದ್ದಕ್ಕಿದ್ದ ಹಾಗೆ ಅವರೇ ಉಪಮುಖ್ಯಮಂತ್ರಿ ಎಂದು ನಾಮಫಲಕ ಹಾಕಿಕೊಂಡು ಈ ಸದನಕ್ಕೆ ಬಂದುಬಿಟ್ಟಿದ್ದರೆ, ಇವರು ಉಪಮುಖ್ಯಮಂತ್ರಿ ಅಲ್ಲ ಇವರು ಏನು ಹೀಗೆ ಹೇಳುತ್ತಿದ್ದಾರೆ ಅಂತ ಹೇಳಬಹುದಾಗಿತ್ತು. ನಮ್ಮ ರಾಜ್ಯದ ರಾಜ್ಯಪಾಲರು ಬೋಧನೆಯನ್ನು ಮಾಡಿ ಪ್ರಮಾಣವಚನವನ್ನು ಮಾಡಿ ಕರೆದು ಅವರು ಉಪಮುಖ್ಯಮಂತ್ರಿ ಅಂತ ಅವರ ಬಾಯಿಯಲ್ಲಿ ಹೇಳಿದ್ದಾರೆ. ತಾವು ಅದನ್ನು ಒಪ್ಪುತ್ತೀರೋ ಇಲ್ಲವೋ ಹಾಗಾದರೆ ರಾಜ್ಯಪಾಲರ ವ್ಯಾಖ್ಯಾನವನ್ನು ನೀವು ಒಪ್ಪುವುದಿಲ್ಲವೋ. ನೀವು ಹೀಗೆ ತಲೆಯನ್ನು ಕುಣಿಸಿದರೆ ಹೇಗೆ? ಮಾನ್ಯ ಯಡಿಯೂರಪ್ಪನವರೇ ತಾವು ಇದರ ಬಗ್ಗೆ ಏನು ಹೇಳುತ್ತೀರಿ?

ಛೇರ್ಮನ್ : ಮಾನ್ಯ ರಾಮಯ್ಯನವರೆ ನಿಮ್ಮ ಭಾಷಣವನ್ನು ಮುಂದುವರಿಸಿ.

ಶ್ರೀ ವಾಟಾಳ್ ನಾಗರಾಜ್ : ತಾವು ಮಾರ್ಗದರ್ಶನವನ್ನು ಕೊಡಬೇಕು. ಇದು ನಗತಕ್ಕದ್ದಲ್ಲ ಮತ್ತು ಲಘುವಾಗಿ ಇದನ್ನು ತೆಗೆದುಕೊಂಡಿಲ್ಲ. ನಾನು ಮಾನ್ಯ ರಾಮಯ್ಯನವರ ವಿಚಾರಧಾರೆಯನ್ನು ನಾನು ಹೇಳುತ್ತಿದ್ದೇನೆ, ಅದರ ಧಾಟಿ ಯಾವ ರೀತಿ ಎನ್ನುವುದನ್ನು ಕೇಳುತ್ತಿದ್ದೇನೆ. ನೀವಾದರೂ ಮಾರ್ಗದರ್ಶನ ಕೊಡಿ.

ಶ್ರೀ ಎ. ಕೆ. ಅನಂತಕೃಷ್ಣ : ಮಾನ್ಯ ಉಪಮುಖ್ಯಮಂತ್ರಿಗಳು ಇಲ್ಲಿ ಕುಳಿತಿದ್ದಾಗ ಅವರನ್ನು ಉಪಮುಖ್ಯಮಂತ್ರಿಗಳೇ ಎಂತಲೇ ಬೋಧಿಸುತ್ತಾರೆ. ಮಾನ್ಯ ಉಪಮುಖ್ಯಮಂತ್ರಿಗಳೇ ಅಂತ ಸಂಬೋಧನೆಯನ್ನು ಪದೇ ಪದೇ ಮಾಡಿದ್ದಾರೆ. ಅವರ ಕೆಪ್ಯಾಸಿಟಿಯನ್ನು ಕೂಡ ಒಪ್ಪಿಕೊಂಡಿದ್ದಾರೆ. ನೀವು ಬಹಳ ಚೆನ್ನಾಗಿ ಮಾಡುವವರಾಗಿದ್ದೀರಿ, ನಿಮಗೆ ಒಳ್ಳೆಯ ಖಾತೆ ಬಂದಿದೆ. ನಿಮ್ಮಿಂದ ಪ್ರಗತಿಯನ್ನು ನಿರೀಕ್ಷಿಸುತ್ತೇವೆಂದು ಸಾಕಷ್ಟು ಹೇಳಿದ್ದಾರೆ. ಎಲ್ಲರೂ ಹೇಳಿದ್ದಾರೆ. ಹೇಳದಿದ್ದವರು ಯಾರಾದರೂ ಇದ್ದರೆ ಈಗ ಹೇಳಬೇಕು.

ಶ್ರೀ ಬಿ. ಎಸ್. ಯಡಿಯೂರಪ್ಪ : ಇಲ್ಲಿ ಮುಖ್ಯಮಂತ್ರಿಗಳು , ಉಪಮುಖ್ಯಮಂತ್ರಿಗಳು ಕ್ಯಾಬಿನೆಟ್ ದರ್ಜೆಯ ಸಚಿವರು ಕೆಳಗಡೆ ಇರುವ ಸಚಿವರ ವ್ಯತ್ಯಾಸ ಏನು? ಏನಾದರೂ ಆಡಳಿತದಲ್ಲಿ ವ್ಯತ್ಯಾಸಗಳು ಕಂಡಾಗ ಆ ಸ್ಥಾನಕ್ಕೆ ಒಂದಿಷ್ಟು ಗೌರವವಿದೆ. ಆ ರೀತಿ ಕರೆಯಬೇಕೆಂದು ಯೋಚನೆ ಮಾಡಬೇಕು. ನಾನು ಯಾವ ರೀತಿ ಸಲಹೆ ಕೊಡುವುದು ಎಂದರೆ ಇಲ್ಲಿರುವಂತಹ ಎಲ್ಲಾ ಶಾಸಕರು, ಆಡಳಿತ ಪಕ್ಷದಲ್ಲಿರುವಂತಹವರನ್ನು

ಮಂತ್ರಿಗಳೆಂದು ಕರೆಯಬೇಕು. ಏಕೆಂದರೆ ಮಾನ್ಯ ಮುಖ್ಯಮಂತ್ರಿಗಳು ಕ್ಯಾಬಿನೆಟ್ ಏತಕ್ಕೆ ದೊಡ್ಡದು ಮಾಡಿದೆ ಎಂದರೆ, ಕಾಲ ಕಡಿಮೆ ಇದೆ ಒಂದು ಮುಕ್ಕಾಲು ವರ್ಷ ಇದೆ. ಅಭಿವೃದ್ಧಿ ಕಾರ್ಯದ ಕಡೆಗೆ ಬೇಗ ಗಮನಕೊಡಬೇಕು ಎಂದು ಹೇಳಿದರು. ಅದಕ್ಕೆ ನಾನು ಸಲಹೆಯನ್ನು ಕೊಟ್ಟೆ, ಈಗ ಏನು ಬಡಿದಾಟ ಇದೆ ಅದು ನಿಂತು ಸ್ಥಿರ ಸರ್ಕಾರ ಕಾಂಗ್ರೆಸ್ ಪಕ್ಷದಲ್ಲಿ ಆಗಬೇಕಾದರೆ ಅವರ ಬಡಿದಾಟ ಏತಕ್ಕೆ? ಜನ ಹಿತಕ್ಕೋಸ್ಕರ ಅಲ್ಲ. ಆದ್ದರಿಂದ ಎಲ್ಲರನ್ನು ಮಂತ್ರಿ ಮಾಡಿಬಿಡಿ ಅಂತ ಹೇಳುವಂಥವನು ನಾನು. ಆದ್ದರಿಂದ ಉಪಮುಖ್ಯಮಂತ್ರಿಗಳು ಅಂತ ಕರೆಯುವುದು ಮಾನ್ಯ ರಾಮಯ್ಯನವರು ಹೇಳಿದಹಾಗೆ ನಾನು ಒಪ್ಪುತ್ತೇನೆ. ಅಲ್ಲಿ ಕುಳಿತವರು ನ್ಯಾಯ ರಕ್ಷಣೆ ಮಾಡುವಂತಹ ರಾಜ್ಯಪಾಲರು ಮತ್ತೊಬ್ಬರು ಸಂವಿಧಾನದ ಚೌಕಟ್ಟಿನಲ್ಲಿ ಕೆಲಸ ಮಾಡುವವರು ಹೇಳಿದರೂ ಸಹ ಉಪಮುಖ್ಯಮಂತ್ರಿ ಸ್ಥಾನ ಅಂತ ನಮ್ಮಲ್ಲಿ ಅವಕಾಶಗಳೇ ಇಲ್ಲದೆ ಇದ್ದಾಗ ನಿಮ್ಮ ರಾಜಕೀಯ ಅನುಕೂಲತೆಗೆ ಏನೇನೊ ಹೆಸರನ್ನು ಕರೆದುಕೊಂಡರೆ ಇದನ್ನು ಯಾರು ಮೆಚ್ಚುತ್ತಾರೆ. ನಾನು ಅದನ್ನು ವಿರೋಧ ಮಾಡುವಂಥವನು.

ಶ್ರೀ ವಾಟಾಳ್ ನಾಗರಾಜ್ : ರಾಜ್ಯಪಾಲರನ್ನೇ ನೀವು ಒಪ್ಪೋದೆ ಇಲ್ಲವೇ?

ಶ್ರೀ ಬಿ. ಎಸ್. ಯಡಿಯೂರಪ್ಪ : ಅಗತ್ಯ ಇಲ್ಲ. ಅದು ಬೇಡ ಎನ್ನುವವರು ನಾವು.

ಶ್ರೀ ವಾಟಾಳ್ ನಾಗರಾಜ್ : ಬೇಡ ಎಂದು ಹೇಳಿ ಅದು ಬೇರೆ ವಿಚಾರ. ರಾಜ್ಯಪಾಲರ ಹುದ್ದೆ, ರಾಜ್ಯಭವನವೆ ಬೇಡ ಅಂತ ಹೇಳತಕ್ಕದ್ದು ಚಿಂತನೆಯಾಗಬೇಕು. ಅದನ್ನು ಬದಲಾವಣೆ ಮಾಡತಕ್ಕದ್ದು. ಸಂವಿಧಾನ ಬದಲಾವಣೆ ಅದು ನಡೆಯಲಿ. ರಾಜ್ಯಾಂಗದ ಬದಲಾವಣೆ ಆಗಬೇಕು. ಈಗ ಮಾನ್ಯ ಯಡಿಯೂರಪ್ಪನವರು, ಮತ್ತು ರಾಮಯ್ಯನವರು ನಾವು ಒಪ್ಪುವುದೇ ಇಲ್ಲ ಅಂತ ಅಂದರೆ ಹೇಗೆ? ಇದು ಚೆನ್ನಾಗಿದೆ. ಸೂರ್ಯ ಎಲ್ಲಿ ಹುಟ್ಟುತ್ತಿದ್ದಾನೆ; ಸೂರ್ಯನಿಗೂ ನಮಗೂ ಸಂಬಂಧವೇ ಇಲ್ಲ ಅಂತ ಅಂದರೆ ಅದು ಹೇಗಾಗುತ್ತದೆ. ಅದಕ್ಕೆ ವ್ಯವಸ್ಥೆ ಏನಿದೆ. ಇವತ್ತು ರಾಜ್ಯಪಾಲರು ಪ್ರಮಾಣವಚನವನ್ನು ಬೋಧನೆ ಮಾಡಿದ್ದಾರೆ. ರಾಜ್ಯಪಾಲರ ಪ್ರಮಾಣವಚನದ ಬಗ್ಗೆ ನಿಮಗೆ ನಂಬಿಕೆ ಇಲ್ಲವೋ ಅದನ್ನು ತಾವು ಹೇಳಿ.

Sri A. K. Anantha Krishna : It is now too late to question it. We have to accept it as a matter of right and we have addressed him also as a Deputy Chief Minister. ಮತ್ತೆ ಅದರ ಪ್ರಶ್ನೆಯನ್ನು ಏತಕ್ಕೆ ಎತ್ತುವುದು?

Let us say, even if it is not constitutional, we have established a convention and you have accepted it in the open House, you have addressed him as Hon'ble Deputy Chief Minister and you have also participated in the meeting convened by him and there also you have addressed him as Deputy Chief Minister. Why are you breathing hot and cold.

ಶ್ರೀ ಜೆ. ಸಿ. ಮಾಧುಸ್ವಾಮಿ : ಮಾನ್ಯ ಅನಂತಕೃಷ್ಣರವರು ನಮಗೆ ಒಂದು ಪರಿಹಾರ ಕೊಡಬೇಕು. ಸಂವಿಧಾನದಲ್ಲಿ ಉಪ ಮುಖ್ಯಮಂತ್ರಿಗಳಿಗೇನಾದರೂ ಕರ್ತವ್ಯ,

ಅಧಿಕಾರವನ್ನು ನಿರ್ದಿಷ್ಟಪಡಿಸಿದ್ದರೆ, ಅದನ್ನು ದಯಮಾಡಿ ಹೇಳಿದರೆ ನಾವುಗಳೆಲ್ಲರೂ ಒಪ್ಪಿಕೊಳ್ಳುತ್ತೇವೆ. ಆ ಸ್ಥಾನಕ್ಕೆ ಕಾನ್ಸ್‌ಟಿಟ್ಯೂಷನಲ್ ವೆಲಿಡಿಟಿ ಇದ್ದರೆ ಹೇಳಿ. He is number two in the cabinet for your convenience as Deputy Chief Minister.

ಶ್ರೀ ವೈ. ಕೆ. ರಾಮಯ್ಯ : ಸನ್ಮಾನ್ಯ ಅಧ್ಯಕ್ಷರೆ, ನಾನು ಈ ವಿಷಯದಲ್ಲಿ ವಿವಾದವನ್ನು ಸೃಷ್ಟಿಸುವುದಕ್ಕೆ ಸಿದ್ಧನಿಲ್ಲ. ಆದರೆ, ಅಕಾಡೆಮಿಕ್ ಉದ್ದೇಶಕ್ಕೆ ಹಿಂದೆ ದೇವಿಲಾಲರನ್ನು ನೀವು ಉಪಪ್ರಧಾನಿ ಮಾಡಿದಂಥ ಸಂದರ್ಭವಿಲ್ಲವೆ? ಎಂದು ನನ್ನ ಸ್ನೇಹಿತರು ನನಗೆ ಪ್ರಶ್ನೆ ಕೇಳಿದ್ದಾರೆ. ನನ್ನ ಬುದ್ಧಿಗೆ ತಿಳಿದಮಟ್ಟಿಗೆ ದೇವಿಲಾಲ್ ಅವರನ್ನು ಉಪ ಪ್ರಧಾನಿ ಎಂದು ಪ್ರಮಾಣ ವಚನ ಬೋಧಿಸಲಿಲ್ಲ, ಫಾರ್ಮ್‌ನೊಳಗೆ ಫಿಲ್-ಅಪ್ ಮಾಡಿರಲಿಲ್ಲ, ನಾನು ಉಪ ಪ್ರಧಾನಿಯಾಗಿ ಪ್ರಮಾಣ ವಚನ ಸ್ವೀಕರಿಸುತ್ತಿದ್ದೇನೆಂದು' ಅವರಿಗೆ ಅವರೇ ಹೇಳಿಕೊಂಡರು. ಅಲ್ಲಿಗೂ ಇಲ್ಲಿಗೂ ವ್ಯತ್ಯಾಸವೇನು? ಅಕಾಡೆಮಿಕ್ ಪರ್‌ಪಸ್‌ಗೋಸ್ಕರ ಅವರು ಏನಾದರೂ ಕರೆದುಕೊಳ್ಳಲಿ.

ಶ್ರೀ ಬಿ. ಎಂ. ಇದಿನಬ್ಬ : ದೇವಿಲಾಲ್‌ರವರು ಉಪಪ್ರಧಾನಿಯಾಗಿ ಪ್ರಮಾಣ ವಚನ ಸ್ವೀಕರಿಸಿರುವುದನ್ನು ನಾವು ದೂರದರ್ಶನದಲ್ಲಿ ನೋಡಿದ್ದೇವೆ.

ಶ್ರೀ ಎಂ. ನಾರಾಯಣ ಸ್ವಾಮಿ : ಇವರು ಹೇಳುತ್ತಿರುವುದು ಸುಳ್ಳು. ದೇವಿಲಾಲರು ಕ್ಯಾಬಿನೆಟ್ ಸದಸ್ಯರಿಂದ ಪ್ರಮಾಣ ವಚನ ಸ್ವೀಕರಿಸಿದ್ದುದು, ಮತ್ತು ದೇವಿಲಾಲರೆ 'ನಾನು ಉಪ ಪ್ರಧಾನ ಮಂತ್ರಿ' ಎಂದು ಕರೆದುಕೊಂಡದ್ದುದು.

ಶ್ರೀ ಕೆ. ಎಚ್. ಹನುಮೇಗೌಡ : ರಾಮಯ್ಯನವರೆ, ಈಗ ದೇವಿಲಾಲರು ಉಪ ಪ್ರಧಾನಿ ಎಂದು ಪ್ರಮಾಣ ವಚನ ಸ್ವೀಕರಿಸಿದ್ದಾರೆಂದು ಹೇಳಲಾಗಿದೆ. ಇದರಿಂದ ನಿಮಗಾಗಿರುವ ತೊಂದರೆಯಾದರೂ ಏನು? ಏನೆಂದರೆ, ಈಗ ಕಾವೇರಿ ನೀರಿನ ಅನ್ಯಾಯವಾಗುತ್ತಿದೆಯೆಂದು ನೀವು ಹೇಳುತ್ತಿದ್ದೀರಿ, ಸಂತೋಷ, ಇದು ಮೆಚ್ಚತಕ್ಕಂಥ ವಿಚಾರ, ಹಾಗೆಯೇ ಕೃಷ್ಣಾ ನದಿ ವಿಚಾರವಾಗಿ ಹೇಳುತ್ತಿದ್ದೀರಿ. ಇದೂ ಕೂಡ ಮೆಚ್ಚತಕ್ಕಂಥ ವಿಚಾರ. ಇವುಗಳ ಬಗ್ಗೆ ಎಷ್ಟು ವ್ಯಾಖ್ಯಾನವಾದರೂ ಮಾಡಿ, ಇದರಲ್ಲಿ ಅರ್ಥವಿರುತ್ತದೆ. ಆದರೆ, ಕೆಲಸಕ್ಕೆ ಬಾರದೇ ಇರತಕ್ಕಂಥ ವಿಚಾರ ತೆಗೆದುಕೊಂಡು ಏಕೆ ಇಷ್ಟೊಂದು ಬೇಸರಪಟ್ಟು ಕೊಳ್ಳುತ್ತೀರಿ?

ಶ್ರೀ ವೈ. ಕೆ. ರಾಮಯ್ಯ : ಸನ್ಮಾನ್ಯ ಅಧ್ಯಕ್ಷರೆ , ನಾನು ವ್ಯಾಖ್ಯಾನ ಮಾಡುವುದಕ್ಕೆ ಹೋಗಲಿಲ್ಲ. ನೀರಾವರಿ ಸಚಿವರೂ ಕೂಡ ಈ ವಿಷಯದಲ್ಲಿ ಆಸಕ್ತಿ ವಹಿಸಿಲ್ಲವೆಂದು ಹೇಳಿದಂಥ ಸಂದರ್ಭದಲ್ಲಿ, ವಕೀಲನಾಗಿ ನನ್ನ ಅಭಿಪ್ರಾಯ ಇಷ್ಟೆ : ಆ ಒಂದು ಹುದ್ದೆಗೆ ಅನಂತಕೃಷ್ಣರವರು ಒಪ್ಪುತ್ತಾರೋ, ಮತ್ತೊಬ್ಬರು ಒಪ್ಪುತ್ತಾರೋ ಅದು ಸರಿಯೋ? ತಪ್ಪೋ? ಎನ್ನುವುದರ ಬಗ್ಗೆ ನನ್ನ ಅಭಿಪ್ರಾಯವನ್ನಾದರೂ ಹೇಳಬಹುದಲ್ಲ. ಆ ಹುದ್ದೆಗೆ ಕಾನ್‌ಸ್ಟಿಟ್ಯೂಷನಲ್ ಸ್ಯಾಂಕ್ಷನ್ ಇಲ್ಲ. ಅದು ಸರಿಯಿರಬಹುದು, ತಪ್ಪು ಇರಬಹುದು, ಅಷ್ಟೆ ನನ್ನ ಅಭಿಪ್ರಾಯ. ಅದಕ್ಕಿಂತ ಹೆಚ್ಚೇನೂ ನನ್ನ ಅಭಿಪ್ರಾಯವಿಲ್ಲ. ಆ ರೀತಿ ಹೇಳಿದ್ದೇನೆಯೆ ಹೊರತು ಇನ್ನಾವುದಕ್ಕೂ ನಾನು ಕಾರಣಕರ್ತನಲ್ಲ. ಅಲ್ಲದೆ, ಕೆಲಸಕ್ಕೆ ಬಾರದಿರತಕ್ಕ ವಿಷಯದ ಬಗ್ಗೆ ಮಾತನಾಡುವುದಕ್ಕೆ ನನಗೆ ಆಸಕ್ತಿಯಿಲ್ಲ. What I said is there is no

sanction. ಇಷ್ಟು ಮಾತ್ರ ಹೇಳಿದ್ದೇನೆ. ಇಲ್ಲವೆ ಇದು ಇದೆಯೆಂದು ಹೇಳುವುದಾದರೆ ನನ್ನದೇನೂ ಅಭ್ಯಂತರವಿಲ್ಲ.

Sri. A. K. ANANTH KRISHNA : Nobody took objection. When you want on insisting and then went on elaborating then, they took exception to it. Let us close it now.

ಶ್ರೀ ಕೆ. ಹೆಚ್. ಹನುಮೇಗೌಡ : ಇದರ ಬಗ್ಗೆ ಸಾಕಷ್ಟು ವ್ಯಾಖ್ಯಾನ ಮಾಡಿದಿರಿ, ಬಹುಶಃ ನಿಮ್ಮ ವ್ಯಾಖ್ಯಾನವನ್ನು ಇವೊತ್ತು ಮುಗಿಸುತ್ತೀರಾ? ದಯವಿಟ್ಟು ಆ ವಿಷಯ ಬಿಟ್ಟು ಬೇರೆ ವಿಷಯ ಯಾವುದಾದರೂ ಮಾತನಾಡಿ.

ಶ್ರೀ ವೈ. ಕೆ. ರಾಮಯ್ಯ : ಸನ್ಮಾನ್ಯ ಅಧ್ಯಕ್ಷರೆ , ಯಾವ ವಿಷಯದ ಮೇಲೆ ಯಾವಾಗ ವ್ಯಾಖ್ಯಾನ ಮಾಡಬೇಕೆನ್ನುವುದನ್ನು ನಾನು ಬೇರೆಯವರಿಂದ ತಿಳಿದುಕೊಂಡು ಮಾತನಾಡಬೇಕಾಗಿಲ್ಲ. ಮತ್ತೊಂದು ಪ್ರಮುಖ ವಿಷಯವೇನೆಂದರೆ, ಕೃಷಿ. ಕೃಷಿ ಕ್ಷೇತ್ರದಲ್ಲಿ ಪ್ರಗತಿ ಕುಂಠಿತವಾಗಿದೆ. 1980ರ ದಶಕದಲ್ಲಿ ನಾವು ಏನು ಸಾಧನೆ ಮಾಡಿದ್ದೇವೆ, ಆ ಸಾಧನೆ ಅಲ್ಲಿಗೆ ನಿಂತುಹೋಗಿದೆ. 1990ರ ದಶಕ ಶುರುವಾದರೂ ಕೂಡ ಪ್ರಗತಿ ಹೆಚ್ಚಾಗಿಲ್ಲವೆನ್ನುವ ಮಾತನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ತಮ್ಮ ಬಜೆಟ್ ಭಾಷಣದ 46ನೇ ಪ್ಯಾರಾದಲ್ಲಿ ಹೇಳಿದ್ದಾರೆ . ನನಗೆ ಕಾಲಾವಕಾಶವಿಲ್ಲದಿರುವುದರಿಂದ ಒಂದೇ ಮಾತಿನಲ್ಲಿ ಇದಕ್ಕೆ ಪರಿಹಾರ ಸೂಚಿಸುವುದಕ್ಕೆ, ಕಾರಣ ಕಂಡುಹಿಡಿಯುವುದಕ್ಕೆ ಸತೀಶ್‌ಚಂದ್ರನ್‌ರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನೂ ಸಹ ಮಾಡಲಾಗಿದೆಯೆಂದು ಹೇಳಿದ್ದಾರೆ. ನನಗನಿಸುತ್ತದೆ; ಈ ಒಂದು ವಿಫಲತೆಗೆ, ಈ ಒಂದು ಕೊರತೆಗೆ ಯಾವ ಸಮಿತಿಯ ಅವಶ್ಯಕತೆಯಿಲ್ಲ. ನಾನೊಬ್ಬ ರೈತನಾಗಿ, ರೈತರ ಮಗನಾಗಿ ನನಗನ್ನಿಸಿದ್ದು ಏನೆಂದರೆ, ಇತ್ತೀಚಿನ ಕೃಷಿ ಉತ್ಪನ್ನಗಳಲ್ಲಿ ಬೆಳೆ ಕಡಿಮೆಯಾಗುತ್ತಿರುವುದಕ್ಕೆ ಕಾರಣ ನೀರಿನ ಕೊರತೆ. ಹತ್ತು ಎಕರೆಗಳಲ್ಲಿ ಬೆಳೆಯುತ್ತಿದ್ದಂಥ ಬೆಳೆಯನ್ನು ನೀರಿಲ್ಲದೆ ಒಂದೆರಡು ಎಕರೆಗಳಿಗೆ ಬೆಳೆಯನ್ನು ಇಳಿಸಿಕೊಂಡಿದ್ದೇವೆ. ಅದರ ಜೊತೆಗೆ ಎಲ್ಲಿ ರಾಗಿ, ಭತ್ತ, ಕಬ್ಬು ಬೆಳೆಯುತ್ತಿದ್ದೆವೋ ಅಲ್ಲೆಲ್ಲಾ ಟೊಮೊಟೊ, ಆಲೂಗಡ್ಡೆಯಂಥ ವಾಣಿಜ್ಯ ಬೆಳೆಗಳನ್ನು ಹಾಕಿಕೊಳ್ಳುವಂಥ ಪರಿಸ್ಥಿತಿಗೆ ನಾವು ಬಂದಿದ್ದೇವೆ. ಆದುದರಿಂದ, ನಾನು ಹೇಳುವುದೇನೆಂದರೆ, ಇವಕ್ಕೆಲ್ಲಾ ಒಂದೇ ಮೂಲ ಪರಿಹಾರವೆಂದರೆ, ನೀರಾವರಿ. ನೀರಿನ ಕೊರತೆಯಿಂದಾಗಿ, ಕೃಷಿ ಕ್ಷೇತ್ರದಲ್ಲಿನ ನಮ್ಮ ಪ್ರಗತಿ ಕುಂಠಿತವಾಗಿದೆ. ಆದುದರಿಂದ, ನೀರಾವರಿಗೆ ಆದ್ಯತೆ ಕೊಟ್ಟು ಆ ಕೆಲಸವನ್ನು ಮುಗಿಸಿಕೊಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

4.45 ಪಿ. ಎಂ.

ಸನ್ಮಾನ್ಯ ಅಧ್ಯಕ್ಷರೇ, ಮತ್ತೊಂದು ಪ್ರಸ್ತಾವನೆಗೆ ಮಾನ್ಯ ಮುಖ್ಯಮಂತ್ರಿಗಳೇ ಚರ್ಚೆಗೆ ಆಹ್ವಾನ ಮಾಡಿದ್ದಾರೆ. ಇದೆಂದರೆ ಡಂಕಲ್ ಕಮಿಷನ್‌ನ ವರದಿಯ ಬಗ್ಗೆ. ಅದರ ಬಗ್ಗೆ ಈ ದಿನ ಇಲ್ಲಿ ಪ್ರಸ್ತಾಪ ಮಾಡಿದಾಗ ಸನ್ಮಾನ್ಯ ರಂಗನಾಥ್‌ರವರು ಏನು ಡಂಕಲ್, ಡಂಕಲ್ ಎಂದು ಹೇಳುತ್ತಿದ್ದೀರಿ ಅದರಿಂದ ಏನಾಗುತ್ತದೆಂದು ಕೇಳಿದರು. ''ಗ್ಯಾಟ್'' ಎನ್ನತಕ್ಕದ್ದು ಒಂದು ಸಂಸ್ಥೆ. ಡೆಂಕಲ್ ಎನ್ನುವವರು ಅದರ ಮಹಾ ನಿರ್ದೇಶಕರು, ಈ ಮಹಾ ನಿರ್ದೇಶಕರು ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕೃಷಿ ಉತ್ಪಾದನೆಗಳ ಬೆಲೆ ನಿರ್ಧಾರ, ತೆರಿಗೆ ಹಾಕುವುದು,

ಆಮದು, ರಫ್ತು, ಮುಂತಾದ ವಿಷಯಗಳಲ್ಲಿ ಯಾವ ರೀತಿ ಇರಬೇಕು ಎನ್ನತಕ್ಕ ಪ್ರಸ್ತಾವನೆಯನ್ನು ವಿಶ್ವದ ಮುಂದೆ ಇಟ್ಟಿದ್ದಾರೆ. ಇದಕ್ಕೆ ಡಂಕಲ್ ಪ್ರಸ್ತಾವನೆ ಎನ್ನುವುದು. ಇದರಿಂದ ರಾಜ್ಯಗಳಿಗೆ, ರಾಷ್ಟ್ರಕ್ಕೆ ಏನಾಗುತ್ತದೆ, ಏಕೆ ನೀವೆಲ್ಲರೂ ಕೂಗಾಡಿಕೊಳ್ಳುತ್ತಿದ್ದೀರಿ ಎಂದು ಕೇಳಿದರೆ ಅದಕ್ಕೆ ಎರಡೇ ಮಾತಿನಲ್ಲಿ ಉತ್ತರವನ್ನು ಕೊಡಬೇಕೆಂದರೆ ; ಸ್ವಾತಂತ್ರ್ಯದ ನಂತರ ಈ ರಾಷ್ಟ್ರದಲ್ಲಿ ಕೃಷಿ ಉತ್ಪಾದನೆಯು ಜಾಸ್ತಿಯಾಗಿ ನಾವುಗಳು ಆಹಾರವಸ್ತುಗಳ ಮೇಲೆ ಸ್ವಾವಲಂಬನೆಯನ್ನು ಪಡೆದ ಮೇಲೆ ಮುಂದುವರೆದ ರಾಷ್ಟ್ರವಾದಂಥ ಅಮೇರಿಕಾದಲ್ಲಿ ಬೆಳೆದಂಥ ಆಹಾರ ವಸ್ತುಗಳಿಗೆ ಮಾರುಕಟ್ಟೆ ಇಲ್ಲ. ಇಂದು ಭಾರತದಂಥ ಅಭಿವೃದ್ಧಿ ಶೀಲ ರಾಷ್ಟ್ರದಲ್ಲಿ When they achieved self-sufficiency in their foodgrains ಅವರ ಆಹಾರವಸ್ತುಗಳು ಕೊಳೆತು ಬೀಳುತ್ತಿದೆ. ಅದಕ್ಕಾಗಿ ಇವತ್ತು ದೇಶದ ಕೃಷಿ ಉತ್ಪನ್ನಗಳ ಉತ್ಪಾದನೆಯನ್ನು ನಾಶಮಾಡತಕ್ಕ ದೃಷ್ಟಿಯಿಂದ ಈ ಡಂಕಲ್ ಪ್ರಸ್ತಾವನೆಯನ್ನು ತರುತ್ತಿದ್ದಾರೆ. ಇದರಿಂದಾಗಿ ಕೃಷಿ ಉತ್ಪನ್ನಗಳ ಉತ್ಪಾದನೆ ಮಾಡತಕ್ಕ ಯಾವುದೇ ವ್ಯವಹಾರಕ್ಕೆ ಸರ್ಕಾರ ಹಣದ ಸಹಾಯವನ್ನು ಮಾಡಬಾರದು ಗೊಬ್ಬರದ ಮೇಲೆ ಇರತಕ್ಕ ಸಬ್ಸಿಡಿಯನ್ನು ತೆಗೆದುಹಾಕಬೇಕು. ಏಕೆ? ಯಾವ ಕಾರಣಕ್ಕಾಗಿ ಇದನ್ನು ಹೇಳುತ್ತಿದ್ದೀರಿ? ಮೂಲ ಉದ್ದೇಶ ಇಷ್ಟೇ? ರಾಷ್ಟ್ರದಲ್ಲಿ ನಾವು ಏನು ಕೃಷಿ ಉತ್ಪನ್ನಗಳನ್ನು ಉತ್ಪಾದನೆ ಮಾಡತಕ್ಕ ಶಕ್ತಿಯನ್ನು ವರ್ಧಿಸಿಕೊಂಡಿದ್ದೇವೆ. ಅದನ್ನು ನಾಶಮಾಡತಕ್ಕ ಒಂದೇ ಒಂದು ಮೂಲ ಉದ್ದೇಶದಿಂದ, ಕೃಷಿಕನಿಗೆ ಕೊಟ್ಟಿರತಕ್ಕ ಧನಸಹಾಯವನ್ನು ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ಭಾರತ ಸರ್ಕಾರ ಹೇಳಿದೆ ಎನ್ನತಕ್ಕ ಪ್ರಸ್ತಾವನೆಯನ್ನು ಹೇಳುತ್ತಿದ್ದಾರೆ. ಅದಕ್ಕಾಗಿ ಇದನ್ನು ನಾವು ಈಗಾಗಲೇ ವಿರೋಧ ಮಾಡುತ್ತಿದ್ದೇವೆ. ಚೈನಾ ದೇಶದವರು ಅವರ ಮಾರುಕಟ್ಟೆಯಲ್ಲಿ ಮಾರುವುದಕ್ಕಿಂತಲೂ ಕಡಿಮೆ ಬೆಲೆಯಲ್ಲಿ ರೇಷ್ಮೆಯನ್ನು ಭಾರತದಲ್ಲಿ ಮಾರುತ್ತಿದ್ದಾರೆ. on the price less than their market price. ನಮ್ಮ ಮಾಜಿ ರೇಷ್ಮೆಮಂತ್ರಿಗಳಿಗೆ ಇದು ಗೊತ್ತಿದೆ. ಚೈನಾದೇಶದಲ್ಲಿ 20 ಡಾಲರ್ ಇದ್ದರೆ ಅವರು ಭಾರತದ ಮಾರುಕಟ್ಟೆಯಲ್ಲಿ 10 ಡಾಲರ್‌ಗೆ ರೇಷ್ಮೆಯನ್ನು ಮಾರುತ್ತಿದ್ದಾರೆ. ನಮ್ಮ ಮೇಲಿರುವ ವ್ಯಾಮೋಹದಿಂದ, ನಮ್ಮ ಮೇಲೆ ಉಕ್ಕಿ ಬರುತ್ತಿರುವ ಪ್ರೀತಿಯಿಂದ ಅಲ್ಲಿ ಅವರು ಆ ರೀತಿ ಮಾರುತ್ತಿರುವುದು. ನಮ್ಮ ದೇಶದ ರೇಷ್ಮೆ ಉತ್ಪಾದನೆಯನ್ನು ಸರ್ವನಾಶ ಮಾಡುವುದಕ್ಕಾಗಿ That is what the Dunkel proposal. ಈ ದೇಶದಲ್ಲಿರತಕ್ಕ ಕೃಷಿ ಉತ್ಪಾದನೆಯಲ್ಲಿರುವ ಶಕ್ತಿಯನ್ನು ನಾಶಮಾಡುವುದಕ್ಕಾಗಿ ಈ ಡಂಕಲ್ ಪ್ರಸ್ತಾವನೆಯನ್ನು ತಂದಿದ್ದಾರೆ. ಅದಕ್ಕಾಗಿ, ನಾವು ಇದನ್ನು ವಿರೋಧ ಮಾಡುತ್ತಿದ್ದೇವೆ. ಇದನ್ನು 'ಆರಾಧನಾ' ಎನ್ನತಕ್ಕ ಯೋಜನೆಯನ್ನು ತಂದಿದ್ದಾರೆ, ಇದು ಕಳೆದ ವರ್ಷವೇ ಇತ್ತು, ಅದನ್ನು ಈ ವರ್ಷವೂ ಕೂಡ ಮುಂದುವರೆಸಿದ್ದಾರೆ. ನನಗೆ ತುಂಬಾ ವ್ಯಥೆಯಾಗುತ್ತಿದೆ, ಏಕೆಂದರೆ ಈ ಯೋಜನೆಯಲ್ಲಿ ದೇವಸ್ಥಾನವನ್ನು ಕಟ್ಟಲು ಅರ್ಜಿಕೊಟ್ಟರೆ ಹಣವನ್ನು ಕೊಡುತ್ತಾರಂತೆ. ನಾನು ಹಳ್ಳಿಗೆ ಹೋದಾಗ ಇದು ತಿಳಿಯಿತು. I was surprised to know that this was meant only for the Harijans. ಆರಾಧನಾ ಯೋಜನೆಯಡಿಯಲ್ಲಿ ದೇವಸ್ಥಾನಗಳನ್ನು ಕಟ್ಟಿ ಕೊಡುವಂತದ್ದು, ಧನ ಸಹಾಯ ಮಾಡುವಂಥಾಹದ್ದು ಕೇವಲ ಹರಿಜನರಿಗೆ ಮಾತ್ರ ಎಂದು ನಾನು ಭಾವಿಸಿಕೊಂಡಿದ್ದೇನೆ.

ಶ್ರೀ ಎ. ಕೆ. ಅನಂತಕೃಷ್ಣ : ಅದು ಅಮೆಂಡ್‌ಮೆಂಟ್ ಆಗಿದೆ. ಅದನ್ನು ಹರಿಜನರಿಗಾಗಿ ಮಾತ್ರವಲ್ಲ. ಎಲ್ಲಾರಿಗೂ ಕೊಡುತ್ತಾರೆ. ಈ ಯೋಜನೆಯನ್ನು ಇತರೇ ಅಲ್ಪಸಂಖ್ಯಾತ ಕೋಮಿಗೆ ಸೇರಿದ ಆರಾಧನಾ ಸ್ಥಳಗಳಿಗೂ ಅನ್ವಯಿಸುವಂತೆ ಮಾಡಲಾಗಿದೆ

ಎಂದು ಹೇಳಿದ್ದಾರೆ. ಇದನ್ನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ, ಹರಿಜನರಿಗಾಗಿಯೇ ದೇವಸ್ಥಾನಗಳನ್ನು ಕಟ್ಟಿಸಿಕೊಟ್ಟು ಅದಕ್ಕೆ ಹರಿಜನರ ದೇವಸ್ಥಾನ ಎಂದು ಬೋರ್ಡ್ ಹಾಕಿ ಮತ್ತೆ ಅವರನ್ನು ಊರಿನಿಂದ ಹೊರಗೆ ತಳ್ಳುತ್ತೀರಾ? ಇದು ನನ್ನ ನೋವು. ಕೇವಲ ಹರಿಜನಗೋಸ್ಕರ ದೇವಸ್ಥಾನಕ್ಕೆ ಸಹಾಯ ಮಾಡುತ್ತೇವೆಂದು ಹೇಳಿ ಅದನ್ನು ಹರಿಜನರ ದೇವಸ್ಥಾನ ಎಂದು ಊರಿನಲ್ಲೆಲ್ಲಾ ಟಾಂ ಟಾಂ ಹೊಡೆದಂತಾಯಿತು. ನನಗೆ ತಿಳಿದಮಟ್ಟಿಗೆ ಈ ಇಲಾಖೆಯ ಮಂತ್ರಿಗಳು ಎಲ್ಲರಿಗೂ ಕೊಡಿಸುತ್ತೇನೆಂದು ವಾಗ್ದಾನವನ್ನು ಕೊಡುವುದಾದರೆ ನಾನು ನನ್ನ ಮಾತನ್ನು ವಾಪಸ್ಸು ತೆಗೆದುಕೊಳ್ಳುತ್ತೇನೆ. ತಾವು ಬೋರ್ಡ್ ಹಾಕುವುದಿಲ್ಲ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ.

ಶ್ರೀ ಕರಿಯಣ್ಣ : ಇದು ಹರಿಜನರ ಕೇರಿಯ ದೇವಸ್ಥಾನಗಳ ಅಭಿವೃದ್ಧಿಗಾಗಿ ಆರಾಧನಾ ಎನ್ನತಕ್ಕ ಯೋಜನೆಯನ್ನು ಹೊಸದಾಗಿ ತಂದಿರತಕ್ಕದ್ದು. ಅದಲ್ಲದೆ ಮುಜರಾಯಿ ಇಲಾಖೆಯಿಂದ ಎಲ್ಲ ಜನಾಂಗದವರಿಗೂ ಹಣವನ್ನೂ ಕೊಡುತ್ತಾರೆ. ಹರಿಜನರಿಗೆ ಆದ್ಯತೆ ಇಲ್ಲದಿರುವುದರಿಂದ ಇದನ್ನು ಮಾಡಿದ್ದಾರೆ. ಆದ್ದರಿಂದ ಇದು ಬಹಳ ಉಪಯುಕ್ತವಾದ ಯೋಜನೆಯಾಗಿದೆ. ಮುಜರಾಯಿ ಇಲಾಖೆಯಿಂದ ಎಲ್ಲಾ ಜಾತಿಯವರಿಗೂ ಸಿಕ್ಕುತ್ತದೆ. ಚುನಾವಣೆಗೆ ಹೋದಾಗ ತಾವೇ ನೋಡಿದ್ದೀರಿ, ಆ ಕಡೆ ಈ ಕಡೆ ಒಂದು ಕಲ್ಲನ್ನು ಇಟ್ಟು ಮೇಲುಗಡೆ ಒಂದು ಕಲ್ಲು ಇಟ್ಟು ಅದರ ಕೆಳಗೆ ಒಂದು ಸಣ್ಣ ಕಲ್ಲನ್ನು ಇಟ್ಟು ಪೂಜೆ ಮಾಡುತ್ತಿದ್ದಾರೆ. ತಮಗೇ ಎಷ್ಟೋ ಸಾರಿ ಅಯ್ಯೋ ಎನಿಸಿದೆ. ಅಂಥ ಒಂದು ದೇವಸ್ಥಾನವನ್ನು ಕಟ್ಟಿಸುವುದಕ್ಕೆ ಮಾಡಿರತಕ್ಕದ್ದು ಒಳ್ಳೆಯ ಕಾರ್ಯಕ್ರಮವಾದ್ದರಿಂದ ಇದನ್ನು ಒಪ್ಪಬಹುದು.

ಶ್ರೀ ವೈ. ಕೆ. ರಾಮಯ್ಯ : ಹಣವನ್ನು ಕೊಟ್ಟಿದ್ದಕ್ಕೆ ನನ್ನ ಅಭ್ಯಂತರವಿಲ್ಲ. ಹರಿಜನರ ಉದ್ಧಾರಕ್ಕಾಗಿ ಇನ್ನೂ ನೂರು ಯೋಜನೆಗಳನ್ನು ತಂದರೂ ನಾನು ಸ್ವಾಗತಿಸುತ್ತೇನೆ. ಇದು ನನ್ನ ತಾತ್ವಿಕ ಅಭಿಪ್ರಾಯ. ಕೇವಲ ಹರಿಜನ ದೇವಸ್ಥಾನಗಳನ್ನು ಕಟ್ಟಿಕೊಳ್ಳುವುದಕ್ಕಾಗಿ ಹಣವನ್ನು, ಅವರಿಗಾಗಿಯೇ ದೇವಸ್ಥಾನವನ್ನು ಕಟ್ಟಿಕೊಟ್ಟು ಇದು ಹರಿಜನ ದೇವಸ್ಥಾನ ಎಂದು ಕರೆಯುವಂಥಾದ್ದು ಸರಿಯಲ್ಲವೆಂದು ನನ್ನ ಅಭಿಪ್ರಾಯ.

ಡಾ॥ ಎಂ. ನಾಗಪ್ಪ : ಅದು ಹರಿಜನ ದೇವಸ್ಥಾನ ಅಲ್ಲ. ಒಟ್ಟಿನಲ್ಲಿ ಅದು ದೇವಸ್ಥಾನ.

ಶ್ರೀ ವೈ. ಕೆ. ರಾಮಯ್ಯ : ಇನ್ನು ತೆರಿಗೆಗಳನ್ನು ಹಾಕಿರುವ ಬಗ್ಗೆ ಒಂದೆರಡು ಮಾತನ್ನು ಹೇಳಬಯಸುತ್ತೇನೆ. ತುಂತುರು ನೀರಾವರಿಗೆ ಬೇಕಾದ ಪೈಪುಗಳು. ಮತ್ತಿತರೆ ನೀರಾವರಿಗೆ ಬೇಕಾದ ಪೈಪುಗಳ ಮೇಲೆ ಏನು ತೆರಿಗೆಯನ್ನು ಜಾಸ್ತಿ ಮಾಡಿದ್ದಾರೆ ಅದನ್ನು ಸಂಪೂರ್ಣವಾಗಿ ತೆಗೆದುಹಾಕಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇನ್ನುಳಿದದ್ದನ್ನು ಅಷ್ಟೊಂದು ಗಂಭೀರವಾಗಿ ವಿರೋಧ ಮಾಡುವಂಥಾದ್ದು ಏನೂ ಇಲ್ಲ. ಏಕೆಂದರೆ ನಮ್ಮ ರಾಜ್ಯದ ಬೊಕ್ಕಸವನ್ನು ತುಂಬಿಕೊಳ್ಳಬೇಕಾಗುತ್ತದೆ. ತೆರಿಗೆಯೇ ಇಲ್ಲದ ಆಯವ್ಯಯವನ್ನು ನಾವು ಯಾರೂ ಮಂಡಿಸುವುದಕ್ಕಾಗುವುದಿಲ್ಲ. ಆದರೆ ರೈತರ ಅವಶ್ಯಕ ವಸ್ತುವಾದ ಈ ಪೈಪುಗಳ ಮೇಲೆ ಏನು ಕರವನ್ನು ವಿಧಿಸಿದ್ದಾರೆ ಅದನ್ನು ದಯವಿಟ್ಟು ಸಂಪೂರ್ಣವಾಗಿ ತೆಗೆದುಹಾಕಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಶೈತ್ಯಾಗಾರ ಸ್ಥಾವರಗಳು, ತಂಪು ಹವಾನಿಯಂತ್ರಣ ವಸ್ತುಗಳ ಮೇಲೆ ತೆರಿಗೆಯನ್ನು ಕಡಿಮೆ ಮಾಡಿರುವುದನ್ನು ಜಾಸ್ತಿ

ಮಾಡಬೇಕೆಂದು ಪ್ರಾರ್ಥಿಸುತ್ತೇನೆ. ಅವು ಯಾವುವು ಎಂದರೆ, ರೆಫ್ರಿಜರೇಟರುಗಳು, ಏರ್‌ಕೂಲರ್ಸ್, ಏರ್ ಕಂಡೀಷನ್‌ರ್ಸ್ ಮೇಲೆ ಇವರು ತೆರಿಗೆಯನ್ನು ಏನು ಕಡಿಮೆ ಮಾಡಿದ್ದಾರೆ ಅದನ್ನು ಜಾಸ್ತಿ ಮಾಡಬೇಕು. ಯಾವ ಪೈಪಿನ ಮೇಲೆ ತೆರಿಗೆಯನ್ನು ಜಾಸ್ತಿ ಮಾಡಿದ್ದಾರೆ ಅದನ್ನು ಕಡಿಮೆ ಮಾಡಬೇಕು.

ಡಾ॥ ಎಂ. ನಾಗಪ್ಪ : ಪ್ರತಿಯೊಬ್ಬ ಸಾಮಾನ್ಯ ಜನರೂ ಇದನ್ನು ಕೊಂಡುಕೊಳ್ಳಲಿ ಎಂಬ ಉದ್ದೇಶದಿಂದ ಟ್ಯಾಕ್ಸನ್ನು ಕಡಿಮೆ ಮಾಡಿರತಕ್ಕದ್ದು. ಕೇವಲ ಶ್ರೀಮಂತರು, ಬಂಡವಾಳಶಾಹಿಗಳ ಮನೆಯಲ್ಲೇ ಇರಬಾರದು. ಮಧ್ಯಮ ವರ್ಗದ ಜನರೂ ತೆಗೆದುಕೊಂಡು ಉಪಯೋಗಿಸಲೆಂಬ ಉದ್ದೇಶದಿಂದ ಟ್ಯಾಕ್ಸನ್ನು ಕಡಿಮೆ ಮಾಡಿದೆ.

ಶ್ರೀ ವೈ. ಕೆ. ರಾಮಯ್ಯ : ಅದು ತಮ್ಮ ಅಭಿಪ್ರಾಯ. ನನ್ನ ಅಭಿಪ್ರಾಯದಲ್ಲಿ ರೆಫ್ರಿಜರೇಟರ್ಸ್, ಏರ್‌ಕೂಲರ್ಸ್, ಏರ್ ಕಂಡೀಷನರ್ಸ್‌ಗೆ ಹಾಕಿರುವ ಕರವನ್ನು ಜಾಸ್ತಿ ಮಾಡಬೇಕು. ನನಗೆ ಪೈಪು ಬೇಕು. ತಮಗೇನು ಬೇಕೋ ನನಗೆ ಗೊತ್ತಿಲ್ಲ. ನಾನು ಎರಡು ಬೋರ್‌ವೆಲ್ಲನ್ನು ಇಟ್ಟುಕೊಂಡಿದ್ದೇನೆ. ನನ್ನ ಬೆಳೆ ಒಣಗಿಹೋಗುತ್ತದೆ. ಪ್ರತಿದಿನ ನೀರನ್ನು ಹಾಯಿಸಬೇಕು. ಆದ್ದರಿಂದ ಪೈಪನ್ನು ಕೊಂಡುಕೊಂಡು ಹೋಗುವುದಕ್ಕೆ ದುಡ್ಡು ಸ್ವಲ್ಪ ಕಡಿಮೆಯಾದರೆ ನನಗೆ ಸ್ವಲ್ಪ ಅನುಕೂಲವಾಗುತ್ತದೆ. ನನಗೆ ಬೇಕಾದ್ದನ್ನು ನಾನು ಹೇಳಿದ್ದೇನೆ. ಮಾನ್ಯ ಸದಸ್ಯರಿಗೆ ಏನು ಬೇಕೋ ಅವರು ಹೇಳಿಕೊಳ್ಳಲಿ. ಇಷ್ಟು ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

* ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ) : ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ತಂದಿರತಕ್ಕಂಥ ಈ ಆಯವ್ಯಯ ಪತ್ರವನ್ನು ಬೆಂಬಲಿಸಿ ನಾನು ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ನಿಜವಾಗಿಯೂ ಮುಖ್ಯಮಂತ್ರಿಗಳು ತಂದಿರತಕ್ಕಂಥ ಈ ಆಯವ್ಯಯಪತ್ರ ಅನೇಕ ಪತ್ರಿಕೆಗಳಲ್ಲಿಯೂ ಇನ್ನಿತರ ಕಡೆಗಳಲ್ಲಿಯೂ ಒಳ್ಳೆಯ ಸ್ವಾಗತವನ್ನು ಕಂಡುಕೊಂಡಿದೆ. ಉದಾಹರಣೆಗೆ ನಾನು ನೋಡಿದ ಹಾಗೆ ಸಂಯುಕ್ತ ಕರ್ನಾಟಕದಲ್ಲಿ ಮರುದಿವಸ ಮೊದಲನೆಯ ಪುಟದಲ್ಲಿ ಪ್ರಗತಿದಾಯಕವಾದ ಬಜೆಟ್ ಎಂದು ಹೇಳಿಬಂತು. ಅದೇ ರೀತಿಯಲ್ಲಿ ಕನ್ನಡಪ್ರಭಾ, ಪ್ರಜಾವಾಣಿ ಪತ್ರಿಕೆಯಲ್ಲೂ ಕೂಡ ತೆರಿಗೆ ಹೊರೆಯನ್ನು ಇಳಿಸತಕ್ಕಂತ ಶಕ್ತಿಯನ್ನು ಹೊಂದಿರತಕ್ಕಂಥ ಬಜೆಟ್ ಎಂದು ಬಂದಿದೆ. ಈ ರೀತಿಯಲ್ಲಿ ಎಲ್ಲವೂ ಒಳ್ಳೆಯದೆಂದು ಹೇಳಲಿಕ್ಕೆ ಬರುವುದಿಲ್ಲ. ಬಹುಪಕ್ಷ ಯಾವುದೆಲ್ಲ ಒಳ್ಳೆಯದುಂಟೋ ಅದನ್ನು ಒಳ್ಳೆಯದು ಎಂದು ಹೇಳಿದ್ದಾರೆ. ಅದೂ ಅಲ್ಲದೆ, ಮಾನ್ಯ ಮುಖ್ಯಮಂತ್ರಿಗಳು ಹೊಸದಾಗಿ ಆಯವ್ಯಯವನ್ನು ಮಂಡನೆ ಮಾಡುತ್ತಿಲ್ಲ. ಇದಕ್ಕಿಂತ ಮೊದಲೂ ಕೂಡ ಎರಡು ಮೂರು ಆಯವ್ಯಯಗಳನ್ನು ಮಂಡನೆ ಮಾಡಿ ಅನುಭವ ಇರತಕ್ಕಂಥವರು. ಬಹಳ ಸಮತೋಲನದಿಂದ ಈ ಆಯವ್ಯಯ ಪತ್ರವನ್ನು ಮಂಡನೆ ಮಾಡಿದ್ದಾರೆ. ನನಗೆ ಬಹಳ ಸಮಯ ಕಡಿಮೆ ಇರುವುದರಿಂದ ಎಲ್ಲಾ ವಿಷಯಗಳನ್ನು ವಿಷದವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಒಂದೊಂದು ಎರಡು ವಿಚಾರಗಳನ್ನು ಹೇಳಿ ನಾನು ಮುಂದುವರಿಯುತ್ತೇನೆ. ವಾರ್ಷಿಕ ಯೋಜನೆಯಲ್ಲಿ 1993-94ರ ವಾರ್ಷಿಕ ಯೋಜನಾ ಗಾತ್ರವನ್ನು 3 ಸಾವಿರದ 25 ಕೋಟಿ ರೂಪಾಯಿಗಳಿಗೆ ಏರಿಸುವ ಮಹತ್ವಾಕಾಂಕ್ಷೆಯನ್ನು ಇಟ್ಟುಕೊಂಡು, ಈ ದಿಸೆಯಲ್ಲಿ 1992-93ನೇ ವರ್ಷಕ್ಕೆ 1915 ಕೋಟಿ ಇದ್ದದ್ದು ಅದನ್ನು 1993-94ಕ್ಕೆ ಹೆಚ್ಚುಮಾಡಿದ್ದಾರೆ. ಈ ರಾಜ್ಯದಲ್ಲಿ ಅಭಿವೃದ್ಧಿ ಕೆಲಸಗಳನ್ನು ಇನ್ನಿತರ ಕೆಲಸಗಳನ್ನು ಸುಸೂತ್ರವಾಗಿ ನಡೆಸಿಕೊಂಡು ಹೋಗಬೇಕೆನ್ನುವಂಥ ಭಾವನೆ ಆಯವ್ಯಯ ಪಟ್ಟಿಯಲ್ಲಿ ಉಂಟು. ಇನ್ನು ಗ್ರಾಮೀಣಾಭಿವೃದ್ಧಿಯ

ಬಗ್ಗೆ ಹೆಚ್ಚಿನ ಕಳಕಳಿಯನ್ನು ತೋರಿಸಿದ್ದಾರೆ. 1992-93ರಲ್ಲಿ 1393ಕೋಟಿ ಚಿಲ್ಲರೆ ರೂಪಾಯಿಗಳನ್ನು ಇಟ್ಟಿದ್ದರೆ, 1993-94ರಲ್ಲಿ 1966 ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ. ಇದರ ಅರ್ಥವೇನೆಂದರೆ ರಾಜ್ಯದಲ್ಲಿ ಮಂಡಲಪಂಚಾಯತಿಗಳು ಬಂದ ಮೇಲೆ ಒಳ್ಳೆಯ ರೀತಿಯಲ್ಲಿ ಕೆಲಸ ಆಗಬೇಕೆಂದು ಹೇಳಿ, ಸಾಧಾರಣ ಮುನ್ನೂರು, ನಾಲ್ಕುನೂರು ಕೋಟಿ ರೂಪಾಯಿಗಳನ್ನು ಹೆಚ್ಚಿಗೆ ಇಟ್ಟಿದ್ದಾರೆ. ಇದರಲ್ಲಿ ನಾವು ಕಾಣಲಿಕ್ಕೆ ಗ್ರಾಮೀಣ ಪ್ರದೇಶಗಳಿಗೆ ಗ್ರಾಮೀಣ ಅಭಿವೃದ್ಧಿಗೆ ಈ ಆಯವ್ಯಯ ಪಟ್ಟಿಯಲ್ಲಿ ಸಾಕಷ್ಟು ಸವಲತ್ತುಗಳನ್ನು ಮುಖ್ಯಮಂತ್ರಿಗಳು ಕೊಟ್ಟಿದ್ದಾರೆಂಬುದನ್ನು ಸರಿಯಾಗಿ ಸೂಕ್ಷ್ಮವಾಗಿ ನೋಡಿದರೆ ನಮಗೆ ಗೊತ್ತಾಗುತ್ತದೆ.

ಇನ್ನು ಕೈಗಾರಿಕೆಗಳ ಮಟ್ಟಿಗೆ ನೋಡಿದರೆ ಎಂಟನೆ ಸ್ಥಾನದಲ್ಲಿದ್ದಂಥ ನಮ್ಮ ದೇಶ ಅಥವಾ ನಮ್ಮ ರಾಜ್ಯ 1995ರ ವೇಳೆಗೆ 4ನೇ ಸ್ಥಾನಕ್ಕೆ ಬರಬೇಕೆಂಬ ಅಭಿಪ್ರಾಯವಿದ್ದರೆ ಇದನ್ನು ಸ್ವಲ್ಪ ಖಾಸಗಿ ವಲಯಕ್ಕೂ ವಿಸ್ತರಿಸಿ ಕೈಗಾರಿಕೆಯನ್ನು ಅಭಿವೃದ್ಧಿಪಡಿಸಬೇಕು ಇಲ್ಲವಾದರೆ ಸಮತೋಲನ ಬರುವುದಿಲ್ಲವೆಂದು ಹೇಳತಕ್ಕಂಥ ವಿಷಯ ಕೂಡ ಹೇಳಿದ್ದರಲ್ಲಿ ಸಂಪೂರ್ಣವಾದಂಥ ಒಂದು ಶಕ್ತಿ ಇದೆ ಎಂದು ನಾವು ಭಾವಿಸಬಹುದು.

ಇನ್ನು ಗ್ರಾಮಾಂತರ ಪ್ರದೇಶಕ್ಕೆ ಗ್ರಾಮೀಣ ಅಭಿವೃದ್ಧಿಯ ಸಂದರ್ಭದಲ್ಲಿ ಕುಡಿಯುವ ನೀರಿನ ಬಗ್ಗೆಯೂ ಕೂಡ ಸಾಕಷ್ಟು ಹಣವನ್ನು ಅವರು ಹೆಚ್ಚಿಗೆ ಇಟ್ಟಿದ್ದಾರೆ. ಏಕೆಂದರೆ ಕುಡಿಯುವ ನೀರಿನ ಬಗ್ಗೆ ಬೆಳಿಗ್ಗೆಯೂ ಸಾಕಷ್ಟು ಚರ್ಚೆಯಾಯಿತು. ಎಲ್ಲಾ ಕ್ಷೇತ್ರಗಳಲ್ಲೂ ಕುಡಿಯುವ ನೀರಿನ ತೊಂದರೆಯುಂಟು. ಇದನ್ನು ನೀಗಿಸಬೇಕಾದದ್ದು ಬಹಳ ಪ್ರಾಮುಖ್ಯ. ಆದ್ದರಿಂದ ಆಯವ್ಯಯ ಪಟ್ಟಿಯಲ್ಲೂ ಕೂಡ ಕುಡಿಯುವ ನೀರಿನ ಬಗ್ಗೆ ಹೆಚ್ಚಿನ ಹಣವನ್ನು ಒದಗಿಸಿದ್ದಾರೆ. ಅದು ಒಳ್ಳೆಯ ರೀತಿಯಲ್ಲಿ ಖರ್ಚಾಗುವುದೇ ಬಹಳ ಮುಖ್ಯ. ಇವತ್ತು ನಮ್ಮ ಉಳ್ಳಾಲ ಕ್ಷೇತ್ರದಲ್ಲಿಯೂ ಕೂಡ ಪೊಣಾಜೆಯಲ್ಲಿ, ಪೆರಮಣ್ಣೂರಿನಲ್ಲಿ, ಸೋಮೇಶ್ವರದಲ್ಲಿ, ನಲ್ಲಿಯ ನೀರಿನ ಯೋಜನೆ ಇದ್ದರೂ ಕೂಡ, ಕೊಳವೆಬಾವಿಗಳನ್ನು ತೋಡಿಸಿದ್ದರೂ ಕೂಡ ಅಲ್ಲಿ ಸರಿಯಾದ ರೀತಿಯಲ್ಲಿ ಮಾಡುವಂಥ ವ್ಯವಸ್ಥೆಯನ್ನು ಅಲ್ಲಿಯ ಅಧಿಕಾರಿಗಳು ಮಾಡುವುದಿಲ್ಲ. ಅಧಿಕಾರಿಗಳ ಉದಾಸೀನತೆಯಿಂದ ಮಾತ್ರ ನಮ್ಮ ಸರ್ಕಾರಕ್ಕೆ ಕೆಟ್ಟ ಹೆಸರು ಬರುತ್ತದೆಂದು ನಮ್ಮ ಅನುಭವದಿಂದ ಧಾರಾಳವಾಗಿ ಹೇಳಬಹುದು. ಏತಕ್ಕೆಂದರೆ ಸರ್ಕಾರ ಕೊಟ್ಟಿದೆ, ಅದನ್ನು ಕೊಂಡು ಹೋಗಿ ಮಾಡದೆ ಎಲ್ಲವೂ ಆಗಿದೆ. ಅದನ್ನು ವಿತರಣೆ ಮಾಡುವಂಥ ವ್ಯವಸ್ಥೆಯಲ್ಲಿ ಏನಾದರೂ ಒಂದು ತೊಂದರೆ, ಅದು ಹಾಳಾಗಿದೆ, ಇಲ್ಲಿ ನೀರು ಸಿಕ್ಕಲಿಲ್ಲ. ಫೇಲ್ಯೂರ್ ಆಯಿತು, ಇಲ್ಲಿ ಕೊಳವೆ ಬಾವಿಗಳು ಹಾಳಾಯಿತು ಎಂದು ಹೇಳತಕ್ಕಂಥ ಈ ರೀತಿ ಕಾಲವ್ಯಯ ಮಾಡತಕ್ಕಂಥ ಒಂದು ಹವ್ಯಾಸ ಗ್ರಾಮೀಣ ಪ್ರದೇಶಗಳಲ್ಲಿ ನಾವು ಕಾಣುತ್ತಿದ್ದೇವೆ ನಾನು ಮನವಿ ಮಾಡುತ್ತಿದ್ದೇನೆ ಈ ಬಗ್ಗೆ ಹೆಚ್ಚಿನ ಜಾಗ್ರತೆಯನ್ನು ತೆಗೆದುಕೊಂಡರೆ, ಅಧಿಕಾರಿಗಳ ಬಗ್ಗೆ ಅದು ಎಕ್ಸಿಕ್ಯುಟೀವ್ ಇಂಜಿನಿಯರ್ ಆಗಲಿ, ಅಸಿಸ್ಟೆಂಟ್ ಇಂಜಿನೀಯರ್ ಆಗಲಿ, ಜೂನಿಯರ್ ಇಂಜಿನಿಯರ್ ಆಗಲಿ ಕುಡಿಯುವ ನೀರಿನ ಕೆಲಸ ಮಾಡುತ್ತಾರೋ ಇಲ್ಲವೋ? ಮಾಡದಿದ್ದರೆ ಏತಕ್ಕೆ ಮಾಡಲಿಲ್ಲವೆಂಬುದನ್ನು ನೋಡಿದರೆ ಅವರು ಸಿಕ್ಕಿಬೀಳುತ್ತಾರೆ.

ಸರ್ಕಾರ ಬೇಕಾದಷ್ಟು ಹಣ ಕೊಟ್ಟಿದೆ. ಭಕ್ಷ್ಯ ಭೋಜನ ಮಾಡಬೇಕೆಂದು ಸರ್ಕಾರ ಬೇಕಾದಷ್ಟು ಹಣ ಕೊಟ್ಟಿದೆ., ಅದಕ್ಕೆ ಬೇಕಾದ ಎಲ್ಲಾ ಪದಾರ್ಥಗಳನ್ನು ತರಿಸಿಕೊಟ್ಟು ಭಕ್ಷ್ಯ ಭೋಜನ ತಯಾರು ಮಾಡಿ ಅದನ್ನು ತಿನ್ನಲಿಕ್ಕೆ ಕೊಡುವಾಗ ಕೊಡತಕ್ಕ ಮನುಷ್ಯ ಸರಿಯಾಗಿ ಕೊಡದಿದ್ದರೆ ಹೇಗಾಗುತ್ತದೆ, ಇವತ್ತು ಅದೇ ರೀತಿಯಾಗಿದೆ. ಕುಡಿಯುವ ನೀರಿನ ಬಗ್ಗೆ ಹೇಳುವುದಾದರೆ, ನಳ

ನೀರಿನ ಯೋಜನೆಯಾಗಲಿ, ಮಿನಿ ವಾಟರ್ ಸಪ್ಲೈ ಆಗಲಿ, ಇನ್ನಿತರ ವಿಚಾರಗಳಿಗೆ ಬೇಕಾದಷ್ಟು ಹಣವನ್ನು ಈ ಸಾರಿ ಆಯವ್ಯಯದಲ್ಲಿ ಇಟ್ಟಿದ್ದಾರೆ. ಇದನ್ನು ಒಳ್ಳೆಯ ರೀತಿಯಲ್ಲಿ ಚಲಾವಣೆಯಾಗುವಂತೆ ನೋಡಿಕೊಳ್ಳುವುದು ಮುಖ್ಯ. ಅಧಿಕಾರಿಗಳಲ್ಲಿ ಒಳ್ಳೆಯವರು ಇರಬಹುದು, ಕೆಟ್ಟವರು ಇರಬಹುದು, ಬಳಸುವವರು ಅವರು. ಒಳ್ಳೆಯ ರೀತಿಯಲ್ಲಿ ಕೆಲಸ ಮಾಡಿದರೆ ಜನರ ಆಶೀರ್ವಾದ ಅವರಿಗೆ ಸಿಗುತ್ತದೆ. ಜನರು ಅವರನ್ನು ಮೆಚ್ಚುತ್ತಾರೆ. ದೇವರು ಮೆಚ್ಚುತ್ತಾನೆ. ಒಳ್ಳೆಯವರು ಇದ್ದಾರೆ. ಆದರೆ ಕೆಲವರು ನಾಳೆ ಮಾಡುವ ಎಂದು ಉದಾಸೀನ ಮಾಡುತ್ತಾರೆ. ಇದರಿಂದ ಆಗತಕ್ಕ ಅನಾಹುತ ಬಹಳ ದೊಡ್ಡದು. ಇದನ್ನು ಚೆನ್ನಾಗಿ ಆಲೋಚನೆ ಮಾಡಬೇಕಾಗಿದೆ. ವಿದ್ಯುಚ್ಛಕ್ತಿ ಬಗ್ಗೆ 1993-94ಕ್ಕೆ 699 ಕೋಟಿ ರೂಪಾಯಿ ಇಟ್ಟಿದ್ದಾರೆ. ಭಾಗ್ಯಜ್ಯೋತಿ ಯೋಜನೆಗೆ ನಲವತ್ತೊಂಬತ್ತು ಸಾವಿರ ರೂಪಾಯಿಗಳಿಂದ ಒಂದು ಲಕ್ಷದ ಎಪ್ಪತ್ತೊಂದು ಸಾವಿರ ರೂಪಾಯಿಗಳಿಗೆ 93-94ನೇ ಸಾಲಿನಲ್ಲಿ ಏರಿಸಬೇಕೆಂದು ಮಾಡಿದ್ದಾರೆ. ಇದು ಬಹಳ ಆಶಾದಾಯಕವಾದ ವಿಚಾರ. ಹಳ್ಳಿಹಳ್ಳಿಗೆ ಇದರಿಂದ ಉಪಕಾರವಾಗುತ್ತದೆ. ಇದನ್ನು ಒಳ್ಳೆಯ ರೀತಿಯಲ್ಲಿ ಮಾಡುತ್ತಾ ಹೋಗಬೇಕು. ವಿದ್ಯುಚ್ಛಕ್ತಿ ಕೂಡ ಎಲ್ಲಾ ಕಡೆ ಬಹಳ ಕೆಟ್ಟು ಹೋಗಿದೆ. ಅದರ ಬಗ್ಗೆ ಯಾರೂ ಗಮನ ಕೊಡುವುದಿಲ್ಲ. ಎಷ್ಟು ಗಮನ ಸೆಳೆಯುವ ಸೂಚನೆ ಬಂದಿದೆ. ಎಷ್ಟು ಜನ ಮಾತನಾಡುವಾಗ ಹೇಳಿದ್ದಾರೆ. ಬೇರೆ ರೀತಿಯಲ್ಲಿ ಚರ್ಚೆಯಾದರೂ ಕೂಡ ಯಾರೂ ಅದರ ಕಡೆ ಗಮನ ಕೊಡುವುದಿಲ್ಲ. ಇವತ್ತು ಕೂಡ ಓಲ್ಟೇಜ್ ಇಲ್ಲದೆ ಓದುವ ಮಕ್ಕಳಿಗೆ ಓದುವುದಕ್ಕೆ ಸಾಧ್ಯವಾಗುತ್ತಿಲ್ಲ. ಹಾಗಾಗಿ ಮಿಣಮಿಣ ದೀಪಕ್ಕಿಂತ ಕಡಿಮೆಯಾಗಿದೆ. ನಮ್ಮ ಉಳ್ಳಾಲ ಕ್ಷೇತ್ರದ ಕೊಣಾದಿಯಲ್ಲಿ ಒಂದು ಸಬ್‌ಸ್ಟೇಷನ್ ಉಂಟು. ಅಲ್ಲಿ ಜನರನ್ನು ಇಡಲಿಕ್ಕೆ ಇನ್ನೂ ಆಗಿಲ್ಲ. ರಾತ್ರಿ ಇಡೀ ಕತ್ತಲೆ. ಅಲ್ಲಿ ರಾತ್ರಿ ಹೋಗತಕ್ಕವರು ಇಲ್ಲ. ಅದನ್ನು ಸರಿ ಮಾಡತಕ್ಕವರು ಇಲ್ಲ. ಇಡೀ ರಾತ್ರಿ ಕತ್ತಲೆಯಲ್ಲಿ ಇರಬೇಕಾಗುತ್ತದೆ. ಒಬ್ಬ ಜನರನ್ನು ಸೇರಿಸತಕ್ಕ ವ್ಯವಸ್ಥೆ ಇಷ್ಟು ಉದಾಸೀನ ಮಾಡುವುದಾದರೆ, ಸರ್ಕಾರದಲ್ಲಿ ತಪ್ಪಿಲ್ಲ, ಮಂತ್ರಿಗಳಲ್ಲಿ ತಪ್ಪಿಲ್ಲ. ಒಳ್ಳೊಳ್ಳೆಯ ಕೆಲಸ ಮಾಡಿದೆ, ಮಂತ್ರಿಗಳು ಮಾಡುತ್ತಾರೆ. ಒಳ್ಳೆಯ ಕೆಲಸ ಮಾಡಿದ್ದಾರೆ. ಆದರೆ ಅದನ್ನು ಮುಟ್ಟಿಸತಕ್ಕ ಜನ ಅಧಿಕಾರಿಗಳೋ ಇನ್ನಿತರರೋ ಮಂಡಲ ಪಂಚಾಯಿತಿಯೋ ಯಾರೆ ಆಗಲಿ ಅದನ್ನು ಮುಟ್ಟಿಸದಿದ್ದರೆ ಜನರಿಗೆ ಉಪಕಾರವಾಗುವುದು ಹೇಗೆ? ಜನರ ಬಾಯಿಂದ ಕೆಡುಕನ್ನು ಟೀಕೆಯನ್ನು ಕೇಳುವುದಕ್ಕೆ ಸರ್ಕಾರಕ್ಕೆ ದಾರಿಯಾಗುತ್ತದೆ. ಇದನ್ನು ತಪ್ಪಿಸಬೇಕು. ಮೀನುಗಾರಿಕೆ ಇಲಾಖೆ ಬಗ್ಗೆ ಹೇಳುವುದಾದರೆ, ನೀಲಿ ಕ್ರಾಂತಿ ಯೋಜನೆಯನ್ನು ಆಯವ್ಯಯದಲ್ಲಿ ಸೇರಿಸಿದ್ದಾರೆ. ಇದು 220 ಕಿಲೋಮೀಟರ್ ಕರಾವಳಿ ಇರತಕ್ಕ ಪ್ರದೇಶಗಳಲ್ಲಿ 50-60 ಕೋಟಿ ರೂಪಾಯಿ ಚಿನ್ನ. ಸಮುದ್ರದಲ್ಲಿರತಕ್ಕ ಮೀನನ್ನು (ಚಿನ್ನವನ್ನು) ಬಗೆದು ತರತಕ್ಕವರು ಬಡ ಮೀನುಗಾರರು. ಬಹಳ ಕಷ್ಟದಲ್ಲಿ ರಾತ್ರಿ ಹೋದರೆ 12-13 ಗಂಟೆ ಕೆಲಸ ಮಾಡಬೇಕು. ಮಳೆ ಬಂದರೆ, ತುಫಾನ್ ಬಂದರೆ ಅವರು ಒದ್ದಾಡಬೇಕು. ಒಂದೊಂದು ವೇಳೆ ನೌಕೆ ಮುಳುಗಿದರೆ ಜೀವ ಕಳೆದುಕೊಳ್ಳತಕ್ಕ ಪರಿಸ್ಥಿತಿಯನ್ನು ಪತ್ರಿಕೆಯಲ್ಲಿ ಓದಿರಬಹುದು. ಬಹಳ ಕಷ್ಟದ ಜೀವನ. ಅಂಥವರಿಗೆ ಸವಲತ್ತು ಕೊಡತಕ್ಕ ವ್ಯವಸ್ಥೆ ಈ ನೀಲಿ ಕ್ರಾಂತಿ ಯೋಜನೆ. ಮಾಡಿ ಬೇಕಾದಷ್ಟು ಸಹಾಯ ಮಾಡತಕ್ಕ ಕಾರ್ಯಕ್ರಮ ಈ ಆಯವ್ಯಯದಲ್ಲಿ ಇದೆ. 220 ಕಿಲೋಮೀಟರ್ ಕರಾವಳಿಯಲ್ಲಿರತಕ್ಕ ಮೀನುಗಾರರು ಸಂತೋಷಪಡತಕ್ಕ ವಿಚಾರ. ಅದು ಮಾತ್ರವಲ್ಲ ಅವರಿಗೆ ವಸತಿ ಸೌಲಭ್ಯ ಮಾಡಿಕೊಡತಕ್ಕ ವ್ಯವಸ್ಥೆ ಕೂಡ ಇದೆ. ಕರಾವಳಿ ಮೀನುಗಾರರ ರಸ್ತೆಗಳನ್ನು ಕೂಡ ಸರಿ ಮಾಡಿಕೊಡಬೇಕೆಂಬ ವ್ಯವಸ್ಥೆ ಇದೆ. ಈ ರೀತಿಯಲ್ಲಿ ಮೀನುಗಾರರಿಗೆ ಅನುಕೂಲವಾಗುವ ರೀತಿಯಲ್ಲಿ ನೀಲಿ ಕ್ರಾಂತಿ ಎಂದು ಹೇಳುವ ವ್ಯವಸ್ಥೆಯನ್ನು ಸೇರಿಸಿದ್ದುದು ಸಂತೋಷದ ವಿಚಾರ. ಇನ್ನು 'ಸಾಗರದೀಪ' ಎಂದು ಯೋಜನೆ ಮಾಡಿದ್ದಾರೆ, ಬಹಳ ಸಂತೋಷ. ಎಲ್ಲದಕ್ಕಿಂತ ಮುಖ್ಯವಾಗಿ 'ನೆರಳಿನ ಭಾಗ್ಯ' ಯೋಜನೆ, ಇದು ಬಹಳ ಬಡವರಿಗೆ

ಕೊಂಪೆಯಲ್ಲಿ, ಕೊಳಚೆ ಪ್ರದೇಶದಲ್ಲಿ ಮನೆಮಾಡಿ ಕುಳಿತುಕೊಂಡಿರತಕ್ಕ ಜನರಿಗೆ.

ಶ್ರೀ ಸಿ. ಬೈರೇಗೌಡ : ಬರೀ ಮೀನುಗಾರರಿಗೆ ಹೇಳಿದಿರಿ. ಅದೇ ದಕ್ಷಿಣ ಕನ್ನಡ ಜಿಲ್ಲೆ ಒಂದರಲ್ಲೇ ಸುಮಾರು 140 ಕೆಲಸಗಳು ಫ್ಲಡ್ ಕಂಟ್ರೋಲ್‌ನಲ್ಲಿ ಸೇರಿವೆ. ಅದು ಬಡ್ಜೆಟ್ಟಿನಲ್ಲಿ ಇದೆ. ಇದಕ್ಕೆ 11 ಕೋಟಿ ರೂಪಾಯಿ ಹೆಚ್ಚಿಗೆ ಹಣ ತಗಲತಕ್ಕದ್ದು ಎಂದು ಆಗಿದೆ. ನಮಗೆ ಮುಖ್ಯಮಂತ್ರಿಗಳು ಕಾಗದ ಬರೆದರು. ಬಡ್ಜೆಟ್ಟಿನಲ್ಲಿ ಸೇರಿಸತಕ್ಕ ಕೆಲಸಗಳು ಇದ್ದರೆ ನಮಗೆ ಕಳುಹಿಸಿಕೊಡಿ ಎಂದು. ನಾನು ಕಳುಹಿಸಿಕೊಟ್ಟಿದ್ದೇನೆ. ಅದರಲ್ಲಿ ಒಂದು ಕೆಲಸವೂ ಸೇರಿಲ್ಲ. ನಾನು ಕಾಗದ ಬರೆದದ್ದು ಒಂದೂ ಸೇರಿಲ್ಲ. ದಕ್ಷಿಣ ಕನ್ನಡ ಜಿಲ್ಲೆ ಒಂದರಲ್ಲಿ ಮಾತ್ರ 140ಕ್ಕೂ ಹೆಚ್ಚು ಕೆಲಸಗಳು ಫ್ಲಡ್ ಕಂಟ್ರೋಲ್‌ನಲ್ಲಿ ಸೇರಿವೆ. ಅದಕ್ಕೆ ಹೇಳುತ್ತೇನೆ, ಇದು ಕರ್ನಾಟಕದ ಬಡ್ಜೆಟ್ ಅಲ್ಲ, ದಕ್ಷಿಣ ಕನ್ನಡ ಜಿಲ್ಲೆಯ ಬಡ್ಜೆಟ್ ಎಂದು.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ತಾವು ತಮಗೆ ಬೇಕಾದುದು ಮಾತ್ರ ನೋಡಿದ್ದೀರಿ. ಸಮುದ್ರ ಇರತಕ್ಕದ್ದು ದಕ್ಷಿಣ ಕನ್ನಡ ಜಿಲ್ಲೆ ಮತ್ತು ನಾರ್ತ್ ಕೆನರಾದಲ್ಲಿ. ಅದಕ್ಕೆ ಬೇಕಾಗುವಂಥ ವ್ಯವಸ್ಥೆಯಾಗಿದೆ. ಅದೇ ರೀತಿ ಬೇರೆಯದೆಲ್ಲ ನೋಡಿ.

ಶ್ರೀ ವಾಟಾಳ್ ನಾಗರಾಜ್ : ಕೋಲಾರಕ್ಕೆ ಸಮುದ್ರ ಬಂದಾಗ ಕೋಡೋಣ. ಸಮುದ್ರ ಇರುವುದು ಮಂಗಳೂರಿನಲ್ಲಿ, ಕಾರವಾರದಲ್ಲಿ. ಕೋಲಾರಕ್ಕೆ ಬೈರೇಗೌಡರು ಸಮುದ್ರವನ್ನು ತಂದಾಗ ಅವರಿಗೂ ಈ ವ್ಯವಸ್ಥೆಯನ್ನು ಕೊಡೋಣ.

ಶ್ರೀ ಎ. ಕೆ. ಅನಂತಕೃಷ್ಣ : ಮಾನ್ಯ ವಾಟಾಳ್ ನಾಗರಾಜ್ ಅವರ ವಿಚಾರವನ್ನು ನಾನು ಅನುಮೋದಿಸುತ್ತೇನೆ.

ಶ್ರೀ ಬಿ. ಎಂ. ಇದಿನಬ್ಬ: ನಾನು ಹುಲ್ಲು ಜೋಪಡಿಗಳಲ್ಲಿ ವಾಸಮಾಡುತ್ತಿರುವ ಗ್ರಾಮಾಂತರ ಪ್ರದೇಶದ ಜನರಿಗೆ ಹೆಂಚಿನ ಛಾವಣಿ ಒದಗಿಸುವ ಸಲುವಾಗಿ ಒಂದು ಕುಟುಂಬಕ್ಕೆ ಮೂರು ಸಾವಿರ ರೂಪಾಯಿಗಳ ನೆರವು ನೀಡಿ 1993-94ರಲ್ಲಿ ಅಂತಹ ಒಂದು ಲಕ್ಷ ಮನೆಗಳಿಗೆ ಈ ಸಹಾಯಧನ ಕಲ್ಪಿಸುವ ಕಾರ್ಯಕ್ರಮ ಹೊಸ ರೀತಿಯ ಆಶಾದಾಯಕವಾದ ಕಾರ್ಯಕ್ರಮ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದನ್ನು ನಿಮ್ಮ ಅಧಿಕಾರಿಗಳು ಸರಿಯಾಗಿ ಕಾರ್ಯರೂಪಕ್ಕೆ ತಂದರೆ ಈ ಮೂರು ಸಾವಿರ ರೂಪಾಯಿಗಳನ್ನು ಸರಿಯಾಗಿ ವೆಚ್ಚ ಮಾಡಿ ಅದಕ್ಕೆ ಹೆಂಚು ಹಾಕಿ ಒಳ್ಳೆಯ ರೀತಿಯಲ್ಲಿ ಕೊಟ್ಟರೆ ನಿಜಕ್ಕೂ ಬೆಂಕಿ ಅನಾಹುತದಿಂದ ಕಷ್ಟಪಡುವ ಜೋಪಡಿಯಲ್ಲಿರತಕ್ಕ ಜನರಿಗೆ, ಕೊಳಚೆ ಪ್ರದೇಶದಲ್ಲಿರುವ ಜನರಿಗೆ, ಗ್ರಾಮಾಂತರ ಪ್ರದೇಶಗಳಲ್ಲಿ ಇರುವ ಜನರಿಗೆ ಬಹಳ ಉಪಕಾರ ಮಾಡತಕ್ಕ ಕಾರ್ಯಕ್ರಮ ಎಂದು ಭಾವಿಸಿಕೊಂಡಿದ್ದೇನೆ. ಇನ್ನು ಅಲ್ಪಸಂಖ್ಯಾತರ ಅಭಿವೃದ್ಧಿ ಬಗ್ಗೆ ಆಯವ್ಯಯದಲ್ಲಿ ಸ್ವಲ್ಪ ಒಳ್ಳೆಯ ರೀತಿಯಲ್ಲಿ ಆಲೋಚನೆ ಮಾಡಿದ್ದಾರೆ. ಸ್ವಲ್ಪ ಹಣವನ್ನು ಹೆಚ್ಚು ಮಾಡಿದ್ದಾರೆ. ಅಲ್ಪ ಸಂಖ್ಯಾತರು ಎಂದು ಹೇಳಿದರೆ ಅವರನ್ನು ಯಾರೂ ಕೇಳುತ್ತಿಲ್ಲ. ಅವರಿಗೆ ಹಣವನ್ನು ಕೊಡದೇ ಇದ್ದರೆ ಏನು ಮಾಡುವುದಕ್ಕೆ ಸಾಧ್ಯ? ವಕ್ಫ್ ಕಮಿಟಿಗಾಗಲೀ, ಇನ್ನಿತರೇ ಯಾವುದೇ ಒಂದು ಕೆಲಸಕ್ಕಾಗಲೀ ಅವರಿಗೆ ಕೊಡತಕ್ಕ ಆ ವ್ಯವಸ್ಥೆಯನ್ನು ಸರಿಯಾಗಿ ಕೊಟ್ಟರೆ ಮಾತ್ರ ಒಳ್ಳೆಯ ರೀತಿಯಲ್ಲಿ ಕೆಲಸ ಆಗುತ್ತದೆ. ಇವತ್ತು ಈ ನಾಡಿನಲ್ಲಿ ಎರಡನೇ ಸ್ಥಾನದಲ್ಲಿರತಕ್ಕವರಲ್ಲಿ ಬಡವರೇ ಜಾಸ್ತಿ. ಅಲ್ಪ ಸಂಖ್ಯಾತರಲ್ಲಿ ಶ್ರೀಮಂತರು ಕೆಲವರೇ ಇರುವುದು. ಎಲ್ಲಾ ಬೀಡಿ ಕಟ್ಟುವವರು, ಕೂಲಿ ಕೆಲಸಗಾರರು, ಸಮುದ್ರದಲ್ಲಿ ಹೋಗತಕ್ಕವರು ಈ ರೀತಿಯ ಜನರಿಗೆ

ಸಹಾಯ ಮಾಡತಕ್ಕ ಕಾರ್ಯಗಳನ್ನು ಇಟ್ಟುಕೊಂಡಿದ್ದಾರೆ. ಇದು ಪರಿಪೂರ್ಣ ಎಂದು ಹೇಳುವುದಿಲ್ಲ. ಆದರೆ, ಮುಖ್ಯಮಂತ್ರಿಗಳು ಮನಸ್ಸು ಮಾಡಿರತಕ್ಕ ರೀತಿ, ಅವರು, ಕೈ ಹಾಕಿರತಕ್ಕ ರೀತಿ, ಅವರು ಯೋಚಿಸಿರತಕ್ಕ ರೀತಿ ಒಂದು ಪ್ರಗತಿದಾಯಕವಾಗಂತಹ ಹೆಜ್ಜೆ ಇಡುವ ಶಾಸ್ತ್ರೀಯ ದಾರಿ ತೋರಿಸಿಕೊಟ್ಟಿದ್ದಾರೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಕಲೆ ಬಗ್ಗೆ, ಸಿನೆಮಾ ಬಗ್ಗೆ, ಕನ್ನಡದ ಬಗ್ಗೆ ಈ ಆಯವ್ಯಯದಲ್ಲಿ ಏನೂ ನನಗೆ ಹೆಚ್ಚಿಗೆ ಕಾಣಲಿಲ್ಲ. ಸ್ವಲ್ಪ ಹೆಚ್ಚಿಗೆ ಕಾಣದೆ ನನಗೆ ಬಹಳ ದುಃಖವಾಗಿದೆ. ನಿನ್ನೆ ವಾಟಾಳ್ ನಾಗರಾಜ್ ಅವರು ಭಾಷಣ ಮಾಡುವಾಗ ಆ ಚಲನಚಿತ್ರ ಮಂದಿರಗಳಲ್ಲಿ ಕಳಪೆ ಚಿತ್ರಗಳಿಗೆ ನೀವು ಸಬ್ಸಿಡಿ ಕೊಡಬೇಡಿ ಎಂದು ಹೇಳಿದರು. ನಾನು ಹೇಳುವುದೂ ಹಾಗೆ. ಸಬ್ಸಿಡಿ ಕೊಟ್ಟು ನಾವು ಏಕೆ ಮಾಡಿಸಬೇಕು? ಆ ಚಲನಚಿತ್ರ ರಂಗದಲ್ಲಿ ಹಾಗೆ ಒಂದು ಅಶ್ಲೀಲವಾದ ಭಾಗಗಳಿಗೆ ಮನಸೋತು ಹಳ್ಳಿಗರು ಹಾಳಾಗತಕ್ಕ ಪರಿಸ್ಥಿತಿ ತಪ್ಪಿಸಬೇಕೆಂದು ವಾಟಾಳ್ ನಾಗರಾಜ್ ಅವರೂ ಕೂಡ ಬಹಳ ಒಳ್ಳೆಯ ರೀತಿಯಲ್ಲಿ ಹೇಳಿದ್ದಾರೆ. ನಿಜವಾಗಿ ನಾನು ಹೇಳುತ್ತಿದ್ದೇನೆ, ಕಳಪೆ ಚಿತ್ರಗಳಿಗೆ ಸಬ್ಸಿಡಿ ಕೊಡುವುದು ಬೇಡ. ಕನ್ನಡದ ಬಗ್ಗೆ . ಸ್ವಲ್ಪ ಹೆಚ್ಚು ಹಣವನ್ನು ಇಟ್ಟು ... ಏಕೆಂದರೆ, ಕರ್ನಾಟಕ ರಾಜ್ಯ ಆದಮೇಲೆ ಕರ್ನಾಟಕ ಆಗಿದೆ. ಇದು ಯಾರೂ ಉಂಬಳಿ ಕೊಟ್ಟದ್ದು ಅಲ್ಲ. ಭಾಷಾವಾರು ರಾಜ್ಯದ ಪ್ರಕಾರ ಕೇರಳ, ಆಂಧ್ರ, ಕರ್ನಾಟಕ, ಮಹಾರಾಷ್ಟ್ರ ಎಂದು ಸಿಕ್ಕಿದ್ದೂ ಅಲ್ಲದೆ, ಯಾರೂ ಕರ್ನಾಟಕ ಎಂದು ಉಂಬಳಿ ಕೊಟ್ಟದ್ದು ಎಂದು ಯಾರೂ ಭಾವಿಸುವುದು ಬೇಡ. ಭಾಷಾವಾರು ರಾಜ್ಯ ಆದಮೇಲೆ ಕರ್ನಾಟಕದ ಹಕ್ಕು ಬಾಧ್ಯತೆಯನ್ನು, ಕನ್ನಡ ಭಾಷೆಯನ್ನು, ಕನ್ನಡ ಸಾಹಿತ್ಯವನ್ನು, ಕನ್ನಡದ ಕಲಾವಿದರನ್ನು ಮೇಲೆತ್ತುವ ನಮ್ಮ ಅಗ್ರಮಾನ್ಯವಾದ ಒಂದನೇ ಕೆಲಸ. ಅದನ್ನೇ ವಾಟಾಳ್ ನಾಗರಾಜ್ ಅವರು ಬಹಳ ಚೆನ್ನಾಗಿ ಹೇಳಿದ್ದಾರೆ. ಬಹಳ ಸುಸೂತ್ರವಾಗಿ, ಬಹಳ ದೀರ್ಘವಾಗಿ, ಎರಡು ಗಂಟೆ ಮಾತನಾಡಿದ್ದಾರೆ. ನನಗೆ ಅಷ್ಟು ಅವಕಾಶ ಇಲ್ಲ. ಆದರೂ ಕೂಡ ಅನ್ನ ಬೆಂದಿದೆಯೋ ಎಂದು ನೋಡುವುದಕ್ಕೆ ಇಡೀ ಗಡಿಗೇ ಅನ್ನವನ್ನು ನೋಡುವುದು ಬೇಡ. ಎರಡು ಹರಳು ಹಿಚುಕಿ ನೋಡಿದರೆ ಬೆಂದಿದೆ ಎಂದಾದರೆ ಗಡಿಗೆ ಅನ್ನ ಬೆಂದಿದೆ ಎಂದು ಅರ್ಥ. ನಾನು ತೆಗೆದು ಹೇಳುವುದು ಒಂದೆರಡಾದರೂ ಕೂಡ ಅದರ ಬಗ್ಗೆ ಎಲ್ಲವೂ ಅದೇ ರೀತಿ ಗಡಿಗೆಯಲ್ಲಿ ಇರತಕ್ಕ ಅನ್ನ ಎಂದು ಭಾವಿಸಬಹುದು. ಅಥವಾ ವಾಟಾಳ್ ನಾಗರಾಜ್ ಅವರು ಹೇಳಿದ ಎಲ್ಲಾ ವಿಚಾರಗಳೂ ಅದರಲ್ಲಿ ಉಂಟು ಎಂದು ತಿಳಿದುಕೊಳ್ಳಬಹುದು. ಆದುದರಿಂದ ಈ ಕನ್ನಡಕ್ಕಾಗಿ ನಮ್ಮ ಸಾಹಿತಿಗಳು, ಕವಿಗಳು .... ''ರವಿ ಕಾಣದ್ದನ್ನು ಕವಿ ಕಂಡ'' ಎಂದು ಹೇಳುತ್ತಾರೆ. ಕುವೆಂಪು ಅವರು ಹೇಳುತ್ತಾರೆ,

> ಮೊಲೆವಾಲಿನೊಡಗೂಡಿ ಬಂದ ನುಡಿ, ತಾಯಿನುಡಿ
> ಕೊಲ್ಕೈಗೈದರಮ್ಮನನೆ ಕೊಲಿಸಿದಂತೆ
> ಏನು ಮಾತು?
> ಮೊಲೆವಾಲಿನೊಡಗೂಡಿ ಬಂದ ನುಡಿ, ತಾಯಿನುಡಿ
> ಕೊಲ್ಕೈಗೈದರಮ್ಮನನೆ ಕೊಲಿಸಿದಂತೆ
> ತಾಯಿಮುತ್ತು ಕೊಡುವಂತು ನಿಮ್ಮ ಕೆನ್ನೆಯಮೇಲೆ
> ಅದು ಪೋಣಿಸಿದ ಮುತ್ತಿನಂತೆ, ನಿಮ್ಮ ನಲ್ನುಡಿಯ ನದಿಯೊಂದು
> ನಲ್‌ನಿಡಿಯ ನುಡಿವೊಂದು ನಿಮ್ಮ ಹಸುಳೆಗಳನೆತ್ತಿ
> ಕನ್ನಡವೇ ಕಲಿಸುವುದು ತುಟಿಗೆ ಬಂದು

ಆದುದರಿಂದ, ಇಂತಹ ಒಂದು ಒಳ್ಳೆಯ ಭಾಷೆ ಬಗ್ಗೆ, ನಾವೇ ಕನ್ನಡಿಗರೇ ಕರ್ನಾಟಕ ಮಾತೆಯ ಮಕ್ಕಳು ನಾವು, ಅವಳ ಕುತ್ತಿಗೆಯನ್ನು ಹಿಡಿದು ಹಿಚುಕತಕ್ಕ ಪರಿಸ್ಥಿತಿ ಆದರೆ, ಒಂದು ಕಡೆ ನಾವು

ಕೇರಳಕ್ಕೆ ಹೋಗಬೇಕು. ದಕ್ಷಿಣಕ್ಕೆ ಹೋಗಬೇಕು. ಒಬ್ಬನೇ ಒಬ್ಬ ಕನ್ನಡ ಮಾತನಾಡುವವನು ಅಲ್ಲಿ ಕಾಣಿಸುವುದಕ್ಕೆ ಸಾಧ್ಯವಿಲ್ಲ. ಯಾರೊಬ್ಬನ ಕೈಯಲ್ಲೂ ಮಲೆಯಾಳಂ ಪತ್ರಿಕೆಯಲ್ಲದೆ ಬೇರೆ ಯಾವುದೂ ಕಾಣಲಿಕ್ಕೆ ಸಾಧ್ಯವಿಲ್ಲ. ಬಿ.ಎ., ಬಿ.ಕಾಂ., ಓದಿದವರು ಅವರೆಲ್ಲರೂ ಹಾಗೆಯೇ. ಅಸೆಂಬ್ಲಿಯಲ್ಲಿರತಕ್ಕ 145 ಜನ ಶಾಸಕರು ಅವರೆಲ್ಲರೂ ಮಲೆಯಾಳಂನಲ್ಲಿ ಮಾತನಾಡತಕ್ಕದ್ದು, ಸ್ಪೀಕರ್‌ರವರೂ ಕೂಡ. ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ ನಾನು ಭಾಷಾ ಅಭಿಮಾನದಿಂದ, ಭಾಷಾ ವ್ಯಾಮೋಹದಿಂದ ಮಾತನಾಡುತ್ತಾನೆಂದು ಯಾರೂ ಭಾವಿಸಬಾರದು. ನಮ್ಮ ಪಾಲಿನ ಹಕ್ಕು ಸಿಕ್ಕಿರುವಾಗ ಅದನ್ನು ಚಾಲೂ ಮಾಡಬೇಕಾದ್ದು ನಮ್ಮ ಕರ್ತವ್ಯ. ಇವತ್ತು ಎಲ್ಲಿಬೇಕಾದರೂ ಹೋಗಿ ಒಂದು ಮೂಲೆಯಲ್ಲಿ ನಿಂತುಕೊಳ್ಳಿ. ಅಲ್ಲಿ ಕೂಡಿರತಕ್ಕ ಜನ ಹೆಚ್ಚಿಗೆ ಮಾತನಾಡುವುದು, ತೆಲುಗು , ತಮಿಳು, ಕನ್ನಡ 5 ಪರ್ಸೆಂಟ್ ಸಹ ಇಲ್ಲ. ತಿರುಗಾಡಿ ನಾನು ನೋಡಿದ್ದೇನೆ. ನಮ್ಮ ಮಂಗಳೂರಿಗೆ ಬಂದು ನೋಡಿ, ಬೇರೆ ಬೇರೆ ಕಾರ್ನರ್‌ಗಳಲ್ಲಿ ಹೋಗಿ ನಿಂತು ನೋಡಿ. ಅಲ್ಲಿ ಕನ್ನಡ ಕಾಣುವುದು ಬಹಳ ಕಡಿಮೆ. ಎಲ್ಲಾ ಕಡೆ ಮಳೆಯಾಳಂ ಮಾತು. ಇವತ್ತಲ್ಲ ನಾಳೆ ಮಂಗಳೂರಿನಲ್ಲಿ ಎಲ್ಲಿ ಹೋದರೂ ಮಲೆಯಾಳಿಗಳದೇ ಮಾತು ಕೇಳಬೇಕು. ನಾನು ಏಕೆ ಹೇಳುತ್ತಿದ್ದೇನೆಂದರೆ ಅವರು ವೋಟರ್ ಲಿಸ್ಟ್‌ನಲ್ಲಿ ಹೆಸರು ಹಾಕಿಸಿಕೊಳ್ಳುತ್ತಾರೆ, ಚುನಾವಣೆಗೆ ನಿಲ್ಲುತ್ತಾರೆ ಎಲ್ಲಾ ಗೆದ್ದು ಬರುತ್ತಾರೆ. ಬಂದಮೇಲೆ ಇದು ನಮ್ಮದು ಎಂದು ಹೇಳುತ್ತಾರೆ. ಹೀಗಾದರೆ ನಮಗೆ ಭಾಷಾವಾರು ರಾಜ್ಯ ಬೇಕಾಗಿತ್ತೇ? ನಾವು ಮೊದಲು ಇದ್ದಹಾಗೆ ಇರಬೇಕಾಗಿತ್ತು. ನಮ್ಮ ಮನೆಯನ್ನು ನಾವು ಕಾಪಾಡಿಕೊಳ್ಳದಿದ್ದರೆ ಮತ್ತ್ಯಾರು ಕಾಪಾಡಿಕೊಳ್ಳಬೇಕೆಂದು ಹೇಳತಕ್ಕ ಭಾವನೆಯಲ್ಲಿ ಕನ್ನಡದ ಬಗ್ಗೆ ಕನ್ನಡ ಅಭಿವೃದ್ಧಿ ಪ್ರಾಧಿಕಾರವೆಂದು ಇದೆ. ಅದಕ್ಕೆ ಹೆಚ್ಚಿನ ಹಣವನ್ನು ಕೊಡಬೇಕು. ಹಣ ಕೊಟ್ಟು ಹೆಚ್ಚಿನ ಆಡಳಿತ ಶಕ್ತಿ ಕೊಡಬೇಕು. ಆಡಳಿತ ಶಕ್ತಿಯನ್ನು ಕೊಟ್ಟು ಮುಂದೆ ಕೆಲಸ ಮಾಡಿಯೆಂದು ಹೇಳಿ. ಇವತ್ತು ಸ್ವಲ್ಪ ಕೆಲಸ ಮಾಡಿದ್ದಾರೆ. ಈ ರಾಜ್ಯದಲ್ಲಿ 80 ಪರ್ಸೆಂಟ್ ಆಡಳಿತ ಭಾಷೆ ಕನ್ನಡ ಭಾಷೆಯಾಗಿದೆಯೆಂದು ಹೇಳುತ್ತಾರೆ. ಬಹುಶಃ ನಗರದಲ್ಲಿ ಆಡಳಿತ ಭಾಷೆ ಕನ್ನಡ ಆಗಿಲ್ಲ. ಅದರಲ್ಲಿ ಹೆಚ್ಚು ಕಲಿತಿರುವ ಐಎಎಸ್ ಆಫೀಸರುಗಳು ಅವರಿಗೆ ಮತ್ತು ಇನ್ನಿತರರಿಗೆ ಅದು ಮನ ಮುಟ್ಟಿಲ್ಲ. ನಾನು ಹೇಳುವುದು, ಕನ್ನಡದ ಬಗ್ಗೆ ಅಭಿಮಾನವನ್ನು ತಾಳುವಂತಹ ಕಾಲದಲ್ಲಿ ಕರ್ನಾಟಕದಲ್ಲಿ ನಾವು ಕನ್ನಡವನ್ನು ಬಳಸಬೇಕೆಂದರೆ ಅದು ವಿಧಾನಸೌಧದಿಂದಲೇ ಹೋಗಬೇಕು. ವಾಟಾಳ್ ನಾಗರಾಜ್ ಅವರ ಆದೇಶಗಳು ಕನ್ನಡದಲ್ಲಿ ಬರಬೇಕೆಂದು ಒಂದು ಅದ್ಭುತವಾದ ಕಾರ್ಯಕ್ರಮವನ್ನು ಅವರು ಮಾಡಿದರು. ಸ್ವಲ್ಪ ದಿವಸಗಳ ಕಾಲ ಅದು ಬಂತು. ಪುನಃ ಹಿಂದಿನ ರೀತಿಯಲ್ಲಿಯೇ ಇಂಗ್ಲೀಷ್‌ಗೆ ತಿರುಗಿದೆ ಅದೇನೋ ನನಗೆ ಅರ್ಥವಾಗುವುದಿಲ್ಲ ಹಾಗಾಗಿ ಇವರಿಗೆ ಚುಚ್ಚುತ್ತಾ ಇರಬೇಕೆಂದು ಕಾಣುತ್ತದೆ. ಆನೆಗೆ ಮಾವುತ ಚುಚ್ಚುತ್ತಾ ಇದ್ದರೆ ಮಾತ್ರ ಅದು ಸರಿಯಾಗಿ ಹೋಗುತ್ತದೆಂದು ಹೇಳುತ್ತಾರೆ. ಹಾಗೆ ಆಗಬಾರದು, ಏಕೆಂದರೆ ಇದು ನಮ್ಮದು. ಕವಿ ಪುಟ್ಟಪ್ಪನವರು ಹೀಗೆ ಹೇಳುತ್ತಾರೆ.

ಉತ್ತರದ ಕಾಶಿಯಲಿ ಕತ್ತೆಮಿಂದ್ಯೆತರಲು
ದಕ್ಷಿಣದ ದೇಶಕದು ಕುದುರೆಅಹುದೆ,
ನಾವು ಬಹಳ ತಿಳಿದವರು ಗಟ್ಟಿಗರು ಎಂದು ಹೇಳಬಹುದು. ಆದರೆ,

ಉತ್ತರದ ಕಾಶಿಯಲಿ ಕತ್ತೆಮಿಂದ್ಯೆತರಲು
ದಕ್ಷಿಣದ ದೇಶಕದು ಕುದುರೆಅಹುದೆ,
ತಾಯಿತ್ತ ಮೊಲೆಹಾಲು ನಿಮ್ಮ ಮೈಗೆ ಆಗದಿರೆ
ಹೆತ್ತವರೆ ಫಲಕಾರಿ ನೆತ್ತರಹುದೇ ॥

ಕವಿ ಕುವೆಂಪುರವರು ಹೇಳುತ್ತಾರೆ, ಆ ಭಾಷೆ, ನೀನು ಅಲ್ಲಿ ಹೋಗಿ ಇಲ್ಲಿ ಬಂದರೆ ಕತ್ತೆ ಅದು ಕುದುರೆಯಾಗುತ್ತದೆಯೇ? ಕತ್ತೆಯನ್ನು ಎಳೆದುಕೊಂಡು ಬಂದರೆ ಅದು ಕುದುರೆಯಾಗುವುದಿಲ್ಲ. ಅದೇ ರೀತಿ ಮತ್ತೊಂದು ಕವನ.

ರಾಜನುಡಿಯೊಂದು ದೇವನುಡಿಯೊಂದೊಂದು
ರಾಷ್ಟ್ರನುಡಿಯೊಂದೊಂದು

ಹತ್ತಿ ಜಗ್ಗಿ, ನಿಟಿ ನಿಟಿ ನಿಟಿಲೆಂದು ಮೂದಿಮೂಳೆ ಮುರಿಯುತಿದೆ
ಕನ್ನಡಮ್ಮನ ಬೆನ್ನುಗಳು ಕಿವಕ್ಕಿ, ಕೂಗಿಕೊಳ್ಳಲು ಕೂಡ ಬಲವಿಲ್ಲ
ಮಕ್ಕಳೇ ಬಾಯಿಮುಚ್ಚಿ ಹಿಡಿದಿಹರು ಕೆಲರು ಸುಗ್ಗಿ ॥

ನಾವೇ ಹಿಡಿದದ್ದು ತಾಯಿಯ ಕೊರಳಿಗೆ ಬಿಗಿಲು ಹಾಕಿ ನಾವೇ ಎಳೆಯುತ್ತಿದ್ದೇವೆ ಇದು ಸರಿಯಲ್ಲವೆಂದು ಕವಿ ಪುಟ್ಟಪ್ಪನವರು ಹೇಳುತ್ತಾರೆ. ಅದೇ ರೀತಿಯಲ್ಲಿ ಅನೇಕ ಕವಿಗಳು ಹೇಳುತ್ತಾರೆ. ರಾಜರತ್ನಂರವರು ಏನು ಹೇಳುತ್ತಾರೆಂದರೆ ಅದು ಈ ರೀತಿ ಇದೆ.

ನರಕಕ್ಕೆ ಇಳ್ಸಿ ನಾಲ್ಗೆ ಸೀಳ್ಸಿ
ಬಾಯಿಯೊಲಿಸಿ ಹಾಕಿದ್ರೂನೆ
ಮೂಗಿಸಲಿ ಕನ್ನಡ ಪದವಾಡುತ್ತೀನಿ
ನನ್ನ ಮನಸನ್ನು ನೀನು ಕಾಣೆ ॥

ಎಂತಹ ಮಾತು ನೋಡಿ.

ನರಕಕ್ಕೆ ಇಳ್ಸಿ ನಾಲ್ಗೆ ಸೀಳ್ಸಿ
ಬಾಯಿಯೊಲಿಸಿ ಹಾಕಿದ್ರೂನೆ
ಮೂಗಿಸಲಿ ಕನ್ನಡ ಪದವಾಡುತ್ತಿನಿ
ನನ್ನ ಮನಸನ್ನು ನೀನು ಕಾಣೆ

ಹೆಂಡ ಹೋಗಲಿ ಹೆಡ್ತಿ ಹೋಗಲಿ
ಎಲ್ಲ ಕೊಚ್ಚಿಕೊಂಡು ಹೋಗಲಿ
ಪರಪಂಚ ಇರೋತನಕ ಮುಂದೆ
ಕನ್ನಡ ಪದಗಳು ನುಗ್ಗಲಿ ॥

ಎಂದು ಜಿ.ಪಿ. ರಾಜರತ್ನಂರವರು ಬಹಳ ಹಿಂದೆ ಹೇಳಿದ್ದಾರೆ. ಇಂತಹ ಅನೇಕ ಕವಿಗಳು ಹೇಳಿರತಕ್ಕ ಮಾತುಗಳು ನಮ್ಮ ಕಣ್ಮುಂದೆ ಇರುವಾಗ, ಇಷ್ಟೆಲ್ಲಾ ಏಕೆ ಹೇಳುತ್ತೇನೆಂದರೆ ಕನ್ನಡಕ್ಕೆ ಸ್ವಲ್ಪ ಹೆಚ್ಚಿಗೆ ಹಣವನ್ನು ಇಡಬೇಕಾಗಿತ್ತು. ಆದರೂ ಮಾನ್ಯ ಮುಖ್ಯಮಂತ್ರಿಗಳು ಮನಸ್ಸು ಮಾಡಿದರೆ ಏನನ್ನು ಮಾಡಲಿಕ್ಕೆ ಸಾಧ್ಯವುಂಟು. ಕನ್ನಡ ಅಭಿವೃದ್ಧಿ ಪ್ರಾಧಿಕಾರ ಮತ್ತು ಕನ್ನಡ ಕಲಾವಿದರಿಗೆ ಎಷ್ಟೋ ಕಲಾವಿದರಿಗೆ ಊಟಕ್ಕೆ ಇಲ್ಲ.ಕಲಾವಿದರು ಬಹಳ ಕಷ್ಟದಲ್ಲಿದ್ದಾರೆ. ಬಿ. ಎಂ ಶ್ರೀಕಂಠಯ್ಯನವರು ಹೇಳಿದ್ದಾರೆ. - ''ಏರಲಿ ಹಾರಲಿ ಕನ್ನಡದ ಬಾವುಟ'' ಎಂದು ಹೇಳಿದ್ದಾರೆ. ಅದರ ಅರ್ಥವೇನು? ಏರಲಿ ಹಾರಲಿ ಕನ್ನಡ ಬಾವುಟ ಅಂದರೆ

ಎಲ್ಲವೂ ಮುಗಿಯಿತು. ಅದು ಏರಲಿ ಗಗನಕ್ಕೆ ಮುಟ್ಟಲಿ ಯಾವುದು? ಕನ್ನಡ ಬಾವುಟ ಅದು ಗಗನ ಮುಟ್ಟಿದರೆ ಅದನ್ನು ಕೆಳಗೆ ಎಳೆಯುವವರು ಯಾರೂ ಇಲ್ಲವೆಂದು ಹೇಳತಕ್ಕ ಭಾವನೆ. ಅಂತಹ ಕವನವನ್ನು ಅವರು ಬರೆದಿದ್ದಾರೆ. ಆದ್ದರಿಂದ ನಾನು ಹೇಳುವುದು ಕನ್ನಡದ ಬಗ್ಗೆ ಹೆಚ್ಚಿಗೆ ಆಸಕ್ತಿಯನ್ನು ಕೊಡಬೇಕು.

ಇನ್ನು ಪ್ರಕೃತಿ ವಿಕೋಪ ಇದರಲ್ಲಿ ಆದಂತಹ ಹಾನಿ ಅದು ನನಗೆ ಗೊತ್ತಿದೆ. ಎಲ್ಲಿ ಮಳೆ ಬರಲಿಕ್ಕೆ ಸಾಧ್ಯವಿಲ್ಲ ಎಲ್ಲಿ ತುಫಾನು ಬರಲಿಕ್ಕೆ ಸಾಧ್ಯವಿಲ್ಲ ಚಿತ್ರದುರ್ಗ, ಬಳ್ಳಾರಿ ಧಾರವಾಡ ಮತ್ತು ಕೋಲಾರ ಈ ಎಲ್ಲಾ ಕಡೆಗಳಲ್ಲೂ ಒಂದು ರೀತಿಯ ಪ್ರಕೃತಿ ವಿಕೋಪ ಆಗಿದೆ.

5.15 ಪಿ. ಎಂ.

ಅದೇ ರೀತಿಯಲ್ಲಿ, ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ, ಉತ್ತರ ಕನ್ನಡ ಜಿಲ್ಲೆಯಲ್ಲಿ ಕೂಡ ಪ್ರಕೃತಿ ವಿಕೋಪ ಆಗಿದೆ. ಇದರಿಂದ, ಬಹಳ ಹಾನಿಯಾಗಿದೆ. ಇದಕ್ಕೆ ಕೂಡ ಸರ್ಕಾರ ಸಾಕಷ್ಟು ಹಣವನ್ನು ಖರ್ಚು ಮಾಡಿ, ಅದನ್ನೂ ಕೂಡ ಒಳ್ಳೆಯ ರೀತಿಯಲ್ಲಿ ನೋಡುವುದಕ್ಕೆ ಸಾಧನೆ ಮಾಡಿದೆ. ನಮ್ಮ ಕಡೆ, ಸಮುದ್ರ ಕೊರೆತ, ನನ್ನ ಉಳ್ಳಾಲ ಕ್ಷೇತ್ರದಲ್ಲಿ ಹಾಗೂ ನಮ್ಮ ಪ್ರತಾಪಚಂದ್ರ ಶೆಟ್ಟರ ಕ್ಷೇತ್ರದಲ್ಲಿ ಕರಾವಳಿಯಲ್ಲಿ ಹಾಗೂ ಈ ಭಾಗದ ಎಲ್ಲಾ ಎಂ. ಎಲ್. ಎ. ಗಳ ಕ್ಷೇತ್ರಗಳಲ್ಲಿ ಈ ಸಮುದ್ರ ಕೊರೆತದಿಂದ ಇಡೀ ಊರಿಗೆ ಊರೇ ನಾಶವಾಗಿ ಹೋಗತಕ್ಕ ಪರಿಸ್ಥಿತಿ ಇದೆ. ಅದಕ್ಕೆ ತಡೆಗೋಡೆ ಕಟ್ಟಬೇಕೆಂದು ನಾವು ಪ್ರಯತ್ನ ಮಾಡುತ್ತಾ ಇದ್ದೇವೆ. ಅದಕ್ಕೆ ಹಣವನ್ನು ಕೊಡುತ್ತಾ ಇದ್ದಾರೆ. ಆದರೆ, ಅದೂ ಕೂಡ ಹಾಗೆ, ನಮ್ಮ ಅಧಿಕಾರಿಗಳು ಬಹಳ ನಿಧಾನ ಗತಿಯಿಂದ, ಕೆಲಸವನ್ನೇ ಮಾಡುವುದಿಲ್ಲ. ಉಳ್ಳಾಲದಲ್ಲಿ ಅರ್ಧಂಬರ್ಧ ಆಗಿದೆ. ಸರಿಯಾದಂಥ ರೀತಿಯ, ಒಳ್ಳೆಯ ರೀತಿಯ ಕಲ್ಲನ್ನು ತಂದು, ಒಳ್ಳೆಯ ರೀತಿಯಲ್ಲಿ ಗೋಡೆ ಕಟ್ಟಿ, ಸರಿಯಾದ ರೀತಿಯಲ್ಲಿ ಮಾಡಿದರೆ ಮಾತ್ರ, ಆ ತಲೆಗೋಡೆ ನಿಲ್ಲಲಿಕ್ಕೆ ಸಾಧ್ಯ. ಕಲ್ಲುಗಳನ್ನು ತಂದು ಹಾಕುವುದು ಅದು ಸಮುದ್ರ ಕೊರತಕ್ಕೆ ಹೋಗುವುದು. ಪುನಃ ಕಲ್ಲುಗಳನ್ನು ತಂದು ಹಾಕುವುದು ಅದು ಸಮುದ್ರ ಕೊರತಕ್ಕೆ ಹೋಗುವುದು. ಕಲ್ಲುಗಳನ್ನು ತಂದು ರಾಶಿ ಹಾಕುವುದು ಸಮುದ್ರಕ್ಕೆ ಹೋಗುವುದು. ಗುತ್ತಿಗೆದಾರನಿಗೆ ದುಡ್ಡು, ವರ್ಷ, ವರ್ಷವೂ ಗುತ್ತಿಗೆದಾರನಿಗೆ ದುಡ್ಡು. ಸಮುದ್ರಕ್ಕೆ ಹಾಕಿದ ಕಲ್ಲು, ಗುಡ್ಡೆಗೆ ಹಾಕಿದ ಮಣ್ಣು ಒಂದೇ ರೀತಿ ಎಂದು ಹೇಳುವುದನ್ನು ನಾವು ಕೇಳಿದ್ದೇವೆ. ಇದನ್ನು ನೋಡತಕ್ಕ ಅಧಿಕಾರಿಗಳು, ಅಲ್ಲಿ ಎಕ್ಸಿಕ್ಯುಟೀವ್ ಇಂಜಿನಿಯರ್ ಇದ್ದಾರೆ, ಅಸಿಸ್ಟೆಂಟ್ ಎಕ್ಸಿಕ್ಯುಟೀವ್ ಇಂಜಿನಿಯರ್ ಇದ್ದಾರೆ, ಅದಕ್ಕೆ ಒಂದು ದೊಡ್ಡ ಬಳಗವೇ ಉಂಟು. ಕೆಲಸ ಮಾಡುತ್ತಾರೆ, ಆದರೆ ಸಮುದ್ರ ಕೊರೆತಕ್ಕೆ ಉದಾಸೀನ ಮಾಡಿದರೆ, ಅಲ್ಲಿ ತಡೆಗೋಡೆ ಮಾಡುವುದರಲ್ಲಿ ಉದಾಸೀನ ಮಾಡಿದರೆ, ಇಡೀ ಊರಿಗೆ ಊರೇ ಹೋಗುತ್ತದೆ. ಉಳ್ಳಾಲದಲ್ಲಿ ಅದೇ ರೀತಿ ನಡೆಯುತ್ತಾ ಉಂಟು ಈ ಬಗ್ಗೆ ಸಂಬಂಧಪಟ್ಟ ಮಂತ್ರಿಗಳಿಗೂ ಸಹ ತಿಳಿಸುತ್ತಾ ಇದ್ದೇವೆ. ಈ ಬಗ್ಗೆ ಕೂಡ ಆಲೋಚನೆ ಮಾಡದೇ ಹೋದರೆ, ಮುಂದೆ ಬರತಕ್ಕಂಥ ಕಾಲದಲ್ಲಿ ಬಹಳ ದೊಡ್ಡ ಹಾಗಿ, ನಮ್ಮ ಬೊಕ್ಕಸಕ್ಕೆ ಹೆಚ್ಚಿನ ತೊಂದರೆ ಬರತಕ್ಕ ಪರಿಸ್ಥಿತಿ ಉಂಟು. ಇನ್ನು ನಮ್ಮಲ್ಲಿ ತೆಂಗು ಕೃಷಿಗೆ, ಒಂದೂವರೆ ಲಕ್ಷ ತೆಂಗು ಹಾಳಾಗಿ ಹೋಗಿದೆ. ಕಪ್ಪು ತಲೆ ಹುಳು ಬಂದು, ಕಲ್ಪವೃಕ್ಷ ಎಂದು ನಾವೇನು ಹೇಳುತ್ತೇವೆ, ಅದರಲ್ಲಿ ಜೀವನ ಮಾಡತಕ್ಕ ಜನ ಅನೇಕರಿದ್ದಾರೆ. ಎಲ್ಲಾ ಕೃಷಿ ತೆಂಗೂ ಹೋಗಿದೆ. ಅದಕ್ಕೆ ಕೂಡ ಹೆಚ್ಚಿನ ಹಣವನ್ನು ಕೊಟ್ಟು, ಅದಕ್ಕೆ ಕೊಡತಕ್ಕ ಔಷಧಿಯ ಬೆಲೆಯನ್ನು ಅರ್ಧಕ್ಕರ್ಧ ಕಡಿಮೆ ಮಾಡಬೇಕು. ಈ ರೀತಿಯಲ್ಲಿ ಮಾಡಿ, ತೆಂಗು ಕೃಷಿಗೆ ಬಂದಿರತಕ್ಕ ಕೊಳೆಯನ್ನು ತೆಗೆಯಬೇಕು, ಆ

ರೋಗವನ್ನು ತಪ್ಪಿಸಬೇಕು ಎಂದು ಕೇಳಿಕೊಳ್ಳುತ್ತಾ ಇದ್ದೇವೆ. ಅದೇ ರೀತಿಯಲ್ಲಿ ಇಲ್ಲಿಯೇ ಬೇರೆ ಕಡೆಯಲ್ಲಿಯೂ ಕೂಡ ತೆಂಗಿನ ರೋಗ , ಈ ಕಪ್ಪುತಲೆಯ ಹುಳದ ರೋಗ, ಈಚೆಕಡೆಯಲ್ಲಿ ಕೂಡ ಉಂಟು. ಹಾಸನದಲ್ಲೂ ಕೂಡ ಉಂಟು ಎಂಬುದನ್ನು ನಾವು ಕೇಳಿದ್ದೇವೆ. ಇದನ್ನು ಕೂಡ ಪರಿಹಾರ ಮಾಡುವಂಥ ವ್ಯವಸ್ಥೆ ಬರುವಂಥಾದ್ದು ಬಹಳ ಮುಖ್ಯ. ಇನ್ನು ಅನೇಕ, ವಸ್ತುಗಳಿಗೆ ಮಾರಾಟಕರ ತೆರಿಗೆಯನ್ನು ಇಳಿಸಿದ್ದಾರೆ. ಅನೇಕರು ಸ್ವಾಗತ ಮಾಡಿದ್ದಾರೆ, ಮಹಿಳೆಯರು ಸ್ವಾಗತ ಮಾಡಿದ್ದಾರೆ. ಬೇರೆ ಬೇರೆ ಕಡೆಗಳಲ್ಲಿ; ಅದೇ ರೀತಿಯಲ್ಲಿ ಅಲ್ಪಸಂಖ್ಯಾತರು ಕೆಲವರು ಸ್ವಾಗತ ಮಾಡಿದ್ದಾರೆ. ಇದನ್ನು ನಾವೆಲ್ಲರೂ ಪತ್ರಿಕೆಯಲ್ಲಿ ನೋಡಿದ್ದೇವೆ. ಅದೇ ರೀತಿಯಲ್ಲಿ ಇದರಲ್ಲಿ ಬಹಳ ಮುಖ್ಯ. 21 ವರ್ಷದ ವಯಸ್ಸಿನವರಿಗೆ ಪಾನನಿರೋಧ ಮಾಡದ ಹಾಗೆ ಮಾಡಬೇಕು ಎಂದು. ಇದು ಬಹಳ ಒಳ್ಳೆಯ ಕಾರ್ಯಕ್ರಮ. ಈ ದೇಶ ಉಳಿಯಬೇಕಾದರೆ , ಮದ್ಯಪಾನ ನಿಷೇಧ ಆದರೆ ಮಾತ್ರ ಈ ದೇಶ ಉಳಿಯುತ್ತದೆ. ಇವತ್ತಲ್ಲ, ನಾಳೆ, ನಾಳೆ ಅಲ್ಲ ನಾಡಿದ್ದು ಅದಕ್ಕಿಂತ ನಂತರ, ಒಂದಲ್ಲ ಒಂದು ದಿನ ಹಾನಿ ಬರುವುದಿದ್ದರೆ ಈ ಮದ್ಯಪಾನದಿಂದ ಮಾತ್ರ. ಮದ್ಯಪಾನ ಎಲ್ಲಿಯವರೆಗೆ ಇರುತ್ತದೆಯೋ, ಅಲ್ಲಿಯವರೆಗೆ ಪಾಪಕೃತ್ಯ ತಪ್ಪುವುದಿಲ್ಲ. ಮದ್ಯಪಾನ ಎಲ್ಲಿಯವರೆಗೆ ಇರುತ್ತದೋ ಅಲ್ಲಿಯವರೆಗೆ ಪಾಪದ ದುಡ್ಡು....

ಶ್ರೀ ಎ. ಕೆ. ಅನಂತಕೃಷ್ಣ : ಮಾನ್ಯ ಇದಿನಬ್ಬರವರೇ, ಉರ್ದು ಭಾಷೆಯಲ್ಲಿ ಒಂದು ಮಾತು ಹೇಳುತ್ತಾರೆ. ನಾಳೆಯಲ್ಲ ನಾಡಿದ್ದು, ನಾಡಿದ್ದಲ್ಲ ಆಚೆ ನಾಡಿದ್ದು ಅಲ್ಲ. ಕಲ್ಕ, ಆಜ್ ಕರೆ, ಆಜ್ಕ ಅಬ್‌ಕರೆ ಎಂದು ಹೇಳುತ್ತಾರೆ. ಆದ್ದರಿಂದ , ನೀವು ಇವತ್ತೇ ಪಾನನಿಷೇಧ ಮಾಡಬೇಕೆಂದು ಹೇಳುತ್ತೀರಾ?

ಶ್ರೀ ಬಿ. ಎಂ. ಇದಿನಬ್ಬ : ನಾನು ಹೇಳುವುದೂ ಅದೇ. ಪಾನನಿಷೇಧ ಮಾಡದೇ ಇದ್ದರೆ ಹಾನಿ ಬರುತ್ತದೆಂದು ಹೇಳುತ್ತಿದ್ದೇನೆ. ಇವತ್ತಲ್ಲ, ನಾಳೆ, ನಾಳೆಯಲ್ಲ ನಾಡಿದ್ದು ಹಾನಿ ಬರುತ್ತದೆ. ಆದ್ದರಿಂದ, ಈ ಮದ್ಯಪಾನ ನಿಷೇಧದ ಬಗ್ಗೆ ಮಹಾತ್ಮಗಾಂಧೀಜಿಯವರು ಸಹ ಹೇಳಿದ್ದುದುಂಟು. ಏಕೆಂದರೆ, ಎಲ್ಲಾ ಪಾಪಗಳಿಗೆ ಮೂಲ ಅದು. ಆದ್ದರಿಂದ ಅದನ್ನು ನಿಲ್ಲಿಸಿಬಿಡಿ. ಅದರಿಂದ ಮಕ್ಕಳು ಒಳ್ಳೆಯದಾಗುತ್ತಾರೆ, ಹೆಂಡತಿ ಒಳ್ಳೆಯದಾಗುತ್ತದೆ, ಮನೆ ಒಳ್ಳೆಯದಾಗುತ್ತದೆ. ಇವತ್ತು ನಾವು ಹಳ್ಳಿಗಳಿಗೆ ಕೊಡುತ್ತೇವೆ. ಹಳ್ಳಿಗಳ ದುಡ್ಡು ಎಲ್ಲಾ ಹೋಗುವುದು ಗುತ್ತಿಗೆಗೆ. ಈ ಬಡವರ ದುಡ್ಡು, ಈ ಪರಿಶಿಷ್ಟವರ್ಗದವರ ದುಡ್ಡು, ಈ ಪರಿಶಿಷ್ಟ ಜಾತಿಯವರ ದುಡ್ಡು, ಅವರು ಎಷ್ಟು ಸಂಪಾದನೆ ಮಾಡಿದರೂ ಅದು ಗುತ್ತಿಗೆಗೇ ಹೋಗುವಂಥಾದ್ದು. ಹಾಗಾದರೆ, ಅವರ ಹೆಂಡತಿ ಮಕ್ಕಳ ಅವಸ್ಥೆ ಎಂಥದ್ದು ಎಂಬುದನ್ನು ತಾವು ಆಲೋಚನೆ ಮಾಡಿ. ನಾವಿಲ್ಲಿ ಪರಿಶಿಷ್ಟವರ್ಗಕ್ಕೆ ಈ ಸಾರಿ ಒಂದು ಕೋಟಿ ರೂಪಾಯಿ ಇಟ್ಟಿದ್ದೇವೆ ಎಂದು ಹೇಳುತ್ತೇವೆ. ಅಲ್ಲಿ ಗುತ್ತಿಗೆಯಲ್ಲಿ ಅವನು ಕುಡಿದು, ಎರಡು ಕೋಟಿ ರೂಪಾಯಿ ಅಲ್ಲಿ ಹೋಗುತ್ತದೆ. ಆ ಇಡೀ ಊರಿನ ಪರಿಶಿಷ್ಟರ ಲೆಕ್ಕ ತೆಗೆದರೆ, ಎರಡು ಕೋಟಿ ರೂಪಾಯಿ ಅವರು ಗುತ್ತಿಗೆಗೆ ಕೊಡುತ್ತಾರೆ . ಇಲ್ಲಿ ನಾವು ಒಂದು ಲಕ್ಷ ಪರಿಹಾರ ಕೊಟ್ಟಿದ್ದೇವೆಂದು ಹೇಳುತ್ತೇವೆ; ಅದು ಸರಿಯಲ್ಲ. ಈ ಪರಿಹಾರ ಕೊಡುವಂಥಾದ್ದು ಬೇಡ, ಅವನಿಗೆ ಹೆಚ್ಚಿಗೆ ಕೊಡುವಂಥಾದ್ದೂ ಬೇಡ. ಈ ಗುತ್ತಿಗೆಯನ್ನೇ ನಿಲ್ಲಿಸಿಬಿಟ್ಟರೆ, ಮದ್ಯಪಾನ ನಿಷೇಧ ಮಾಡಿದರೆ ಒಳ್ಳೆಯದಲ್ಲವೇ. ಇದು ನನ್ನ ವೈಯಕ್ತಿಕ ಅಭಿಪ್ರಾಯ, ಹೆಚ್ಚಿನವರ ಅಭಿಪ್ರಾಯವನ್ನೂ ತೆಗೆದುಕೊಳ್ಳಿ. ಕೆಲವರು ಹೇಳುತ್ತಾರೆ, ಕಾರ್ಯರೂಪಕ್ಕೆ ಬರುವುದಕ್ಕೆ ಸಾಧ್ಯವಿಲ್ಲ ಎಂದು, ಸರ್ಕಾರ ನಡೆಸಲಿಕ್ಕೆ ಸಾಧ್ಯವಾಗಲಿಕ್ಕಿಲ್ಲ, ಹೆಚ್ಚಿಗೆ ವರಮಾನ ಬರಬೇಕಾಗುತ್ತದೆ, ಹೆಚ್ಚಿಗೆ ತೆರಿಗೆ ಬಂದರೆ ಮಾತ್ರ ನಡೆಸಲಿಕ್ಕೆ ಸಾಧ್ಯ.

ನಾನು ಹೇಳುವುದು, ಪಾಪದ ದುಡ್ಡಿನಿಂದ ಯಾವುದೂ ಮಾಡಿದರೂ, ಅದು ಪಾಪವೇ ಖಂಡಿತ ಪಾಪ. ಇದರಲ್ಲಿ ಸಂಶಯವಿಲ್ಲ. ಈ ಪಾಪದ ದುಡ್ಡನ್ನು ಆದಷ್ಟು ಕಡಿಮೆ ಮಾಡುವುದಕ್ಕೆ ನಾವು ಪ್ರಯತ್ನ ಮಾಡಿದರೆ, ಈ ದೇಶಕ್ಕೂ, ಈ ನಾಡಿಗೂ ಬಹಳ ದೊಡ್ಡ ಉಜ್ವಲ ಭವಿಷ್ಯ ಇದೆ.

ಮಹತ್ಮಾಗಾಂಧೀಜಿಯವರು ಮದ್ಯಪಾನ ನಿಷೇಧ ಯಾವಾಗ ಆಗುತ್ತದೆಯೋ ಆಗ ಎಲ್ಲರೂ ಸ್ವಾವಲಂಬಿಗಳಾಗಿ ಈ ದೇಶದ ಬಗ್ಗೆ ಚಿಂತನೆ ಮಾಡುತ್ತಾರೆ ಎಲ್ಲರೂ ಕೋಮು ಸೌಹಾರ್ದದಿಂದ ಪ್ರೀತಿಯಿಂದ ಇರುತ್ತಾರೆ. ಆಗ ದೇಶಕ್ಕೆ ಯಾವ ಗಂಡಾಂತರವೂ ಇಲ್ಲ ಎಂದು ಹೇಳಿದ್ದರು. ಇದರಲ್ಲಿ ಕೋಮುಸೌಹಾರ್ದಹ ವಿಷಯ ಕೂಡ ಬರೆದಿದ್ದಾರೆ. ಅದಕ್ಕೆ ಕೂಡ ತುಂಬಾ ಹಣ ಖರ್ಚುಮಾಡಿದ್ದೇವೆ ಮೊನ್ನೆ ಆದಂತಹ 74 ಜನ ತೀರಿ ಹೋಗಿದ್ದಕ್ಕೆ 50 ಸಾವಿರ ಇದ್ದದ್ದನ್ನು 2 ಲಕ್ಷ ಕೊಟ್ಟಿದ್ದೇವೆ ಅದೇ ರೀತಿ ಹಾನಿಯಾದವರಿಗೆ ಬೇಕಾದಷ್ಟು ಪರಿಹಾರವನ್ನು ಕೊಟ್ಟಿದ್ದೇವೆ ಇನ್ನು ಕೂಡ ಕೊಡತಕ್ಕಂಥ ಕಾರ್ಯಕ್ರಮ ಉಂಟು ಅಂತಹೇಳಿ ಈ ಆಯವ್ಯಯದಲ್ಲಿ ಕೂಡ ಹೇಳಿದ್ದಾರ. ಆದ್ದರಿಂದ ಯಾವುದೇ ಒಂದು ರಾಜ್ಯ ಯಾವುದೇ ಒಂದು ದೇಶ ಲೀಲಾಜಾಲವಾಗಿ ವೈಭವಕ್ಕೆ ಹೋಗಬೇಕಾದರೆ, ಉನ್ನತ ಶಿಖರಕ್ಕೆ ಹೋಗಬೇಕಾದರೆ, ಶ್ರೇಷ್ಟತೆಗೆ ಹೋಗಬೇಕಾದರೆ ಮೂಲಭೂತವಾದ ಒಂದೆರಡು ವಿಚಾರಗಳನ್ನು ನಾವು ಗಮನದಲ್ಲಿಟ್ಟು ಕೊಳ್ಳಬೇಕು. ಅದು ಯಾವುದು ಎಂದು ಹೇಳಿದರೆ, ಅದು ನಾನು ಮೊನ್ನೆ ಕೂಡ ಹೇಳಿದ್ದೇನೆ ಈ ದೇಶದಲ್ಲಿರತಕ್ಕಂಥ ಈ ಒಂದು ಅಪಾಯ, ಆ ಕೊರತೆ ಯಾವುದು ಇದೆ. ಆ ಕೋಮುಸಾಮರಸ್ಯದ ಕೊರತೆಯನ್ನು ನೀಗಿಸಿ, ಕೋಮು ಸೌಹಾರ್ದವನ್ನು ನಿರ್ಮಿಸಿ ನಾವು ಅಣ್ಣತಮ್ಮಂದಿರು ನಾವು ಏನು ಇಷ್ಟರವರೆಗೂ ಇರಲಿಲ್ಲವೋ ಇನ್ನು ಮುಂದೆ ಇರಬೇಕಲ್ಲವೋ ಪ್ರಳಯ ಕಾಲದವರೆಗೂ ಇರಬೇಕಲ್ಲವೋ ಇಲ್ಲಿಯೇ ಹುಟ್ಟಿದವರು ಇಲ್ಲಿಯೇ ಬದುಕುವವರು ಇಲ್ಲಿಯೇ ಸಾಯುವವರು ಎಲ್ಲಿಗೂ ಹೋಗುವುದಕ್ಕೆ ಆಗುವುದಿಲ್ಲ ಅರಬ್ಬಿ ಸಮುದ್ರಕ್ಕೆ ಹೋಗಿ ಬೀಳಲಿಕ್ಕೆ ಯಾರಿಗೂ ಸಾಧ್ಯವಾಗುವುದಿಲ್ಲ ಆದ್ದರಿಂದ ಅನ್ಯೋನ್ಯ ಪ್ರೀತಿಯಿಂದ ಅನ್ಯೋನ್ಯ ಸೌಹಾರ್ದದಿಂದ ಇದ್ದರೆ ಮಾತ್ರ ಈ ದೇಶಕ್ಕೆ ಭವಿಷ್ಯ. ಅದೂ ಕೂಡ ಆಯವ್ಯಯದಲ್ಲಿ ಈ ಕೋಮುಹಿಂಸೆಯಿಂದ ಆಗಿರತಕ್ಕಂಥ ಹಾನಿಗೆ ಯಾವ ಯಾವ ಖರ್ಚುಗಳನ್ನು ಮಾಡಿದ್ದೇವೆ ಇನ್ನು ಯಾವ ರೂಪದಲ್ಲಿ ಹೋಗುತ್ತೇವೆಂದು ಹೇಳತಕ್ಕಂಥಾದ್ದು ಕೂಡ ಇದೆ. ಆದ್ದರಿಂದ ನಾನು ಹೇಳುವಂಥಾದ್ದು ಬರೀ 47 ಕೋಟಿ ರೂಪಾಯಿ ಮಾತ್ರ ಹೆಚ್ಚಿಗೆ ಕರವನ್ನು ಹಾಕಿದ್ದಾರೆ!, ಬಹಳ ಕಡಿಮೆ ಹಾಕಿದ್ದಾರೆ. ಹಿಂದೆಲ್ಲಾ 250-280 ಕೋಟಿ ಹೆಚ್ಚಿಗೆ ಕರ ಹಾಕಿದ್ದು ಉಂಟು. ಈ ಭಾರಿ ಕರ ಹಾಕುವುದರಲ್ಲಿಯೂ ಕೂಡ ಜಾಗ್ರತೆ ಮಾಡಿ ಮುಖ್ಯಮಂತ್ರಿಗಳಾದಂತಹ ವೀರಪ್ಪಮೊಯಿಲಿಯವರು ಬಹಳ ಬುದ್ಧಿವಂತಿಕೆಯಿಂದ ಬಹಳ ಚಾಕುಚಕ್ಯತೆಯಿಂದ ಬಹಳ ಸಮತೋಲನದಿಂದ ಈ ಬಜೆಟ್ ತಯಾರಿಸಿದ್ದಾರೆ ಇನ್ನು ಇದಕ್ಕಿಂತ ಒಳ್ಳೆಯದು ತಯಾರಿಸಿದರೂ ಟೀಕಾಕಾರರು ಟೀಕೆ ಮಾಡುತ್ತಾರೆ. ಮೊನ್ನೆ ವಿರೋಧ ಪಕ್ಷದ ನಾಯಕರಾದ ದೇಶಪಾಂಡೆಯವರ ಭಾಷಣ ನಾನು ಕೇಳಿದೆ ಅವರು ಅನೇಕ ರೀತಿಯಲ್ಲಿ ನಮಗೆ ಬುದ್ಧಿವಾದ ಹೇಳಿದರು. ಬಜೆಟ್ ಸ್ವಲ್ಪ ಆಸೆ ಇಲ್ಲದ ಬಜೆಟ್ ಅಂತ ಅವರು ಹೇಳಲಿಲ್ಲ. ಆಸೆಯ ಲಕ್ಷಣಗಳು ಕಾಣುತ್ತಾ ಉಂಟು. ಆಸೆಯ ಅಭಿಪ್ರಾಯಗಳು ಅಲ್ಲಲ್ಲಿ ಕಾಣುತ್ತಾ ಉಂಟು. ಅದನ್ನು ಉಳಿಸಿಕೊಳ್ಳಿ ಎಂದು ಬುದ್ಧಿವಂತಿಕೆಯ ಮಾತನ್ನು ಕೂಡ ನಮ್ಮ ವಿರೋಧಪಕ್ಷದ ನಾಯಕರಾದ ದೇಶಪಾಂಡೆಯವರು ಹೇಳಿದರು. ಇನ್ನೊಬ್ಬ ಮಿತ್ರರಿಂದ ಸಿಂಧ್ಯರವರು ಮಾತನಾಡಲಿಕ್ಕೆ ಉಂಟು. ನೀವು ಕಿವಿಗೊಡಲಿಕ್ಕೆ ಉಂಟು ದೇಶಪಾಂಡೆಯವರು ಆ ರೀತಿಯಲ್ಲಿ ಹೇಳಿದ್ದಾರೆ ಅದು ಮಾತ್ರ ಅಲ್ಲ ನಮ್ಮ ಹಿಂದಿನ

ಮುಖ್ಯಮಂತ್ರಿಗಳಾದ ರಾಮಕೃಷ್ಣಹೆಗಡೆಯವರು ಈ ಬಜೆಟ್‌ನ ಬಗ್ಗೆ ಅವರು ಟೀಕೆ ಮಾಡಿದರೂ ಟೀಕೆ ಮಾಡಿ ಹೇಳುತ್ತಾರೆ ನಾನು ನೀರಾವರಿಗೆ ಇಟ್ಟಿರತಕ್ಕಂಥ ಹಣ ಮೆಚ್ಚುತ್ತೇನೆ. ಒಳ್ಳೆಯ ರೀತಿಯಲ್ಲಿ ಇಟ್ಟಿದ್ದಾರೆ ಎಂದು ಹೇಳಿದ್ದಾರೆ ಆದರೆ ಸತ್ಯವನ್ನು ಅಸತ್ಯ ಎಂದು ಯಾರಿಗೂ ಹೇಳಲಿಕ್ಕೆ ಸಾಧ್ಯವಿಲ್ಲ. ನೀರಾವರಿಗೆ ಕೂಡ ಬಹಳವಾದ ಹಣವನ್ನು ಇಟ್ಟಿದ್ದಾರೆ ಇನ್ನು ಸಹ ಅನೇಕರು ಮಾತನಾಡಲಿಕ್ಕೆ ಇದ್ದಾರೆ ಅಧ್ಯಕ್ಷರು ಆಗಾಗ ಹೇಳುತ್ತಿದ್ದಾರೆ. ಇಷ್ಟು ಅವಕಾಶವನ್ನು ಕೊಟ್ಟಿದ್ದಾರೆ ಕಡೆಗೆ ನಾನು ಈ ಆಯವ್ಯಯದ ಬಗ್ಗೆ ಬರದಿರತಕ್ಕಂಥ 6 ಚರಣದ ಒಂದು ಕವನವನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಈ ವರ್ಷದ ಆಯವ್ಯಯಪತ್ರದ ಭಾಷಣ
ಈ ವರ್ಷದ ಆಯವ್ಯಯಪತ್ರದ ಭಾಷಣ, ಅನೇಕ
ವಿಷಯಗಳಿಂದ ನಾಡಿಗೆ ಅದುಭೂಷಣ. ಹುಡುಕಿದವರಿಗೆ
ಅಲ್ಲಲ್ಲಿ ಸಿಕ್ಕುವುದು ಸಿಹಿ ಹೂರಣ., ಒಳ್ಳೆ ಪಂಚಕಜ್ಜಾಯ ಅಂತ.
ಮಹಿಳೆಯರಿಗೆ ಪರಿಶಿಷ್ಟರಿಗೆ ಹಿತವುಂಟು ಸಂಪೂರ್ಣ.
ಎಲ್ಲಾ ವಿಧಗಳಿಂದ ಆಯವ್ಯಯ ಕಾಯ್ದುಕೊಂಡಿದೆ ಸಮತೋಲನ,
ತೆರಿಗೆ ಹೊರೆಯನ್ನು ಕಡಿತ ಮಾಡಿದ್ದಕ್ಕೆ ಎಲ್ಲೆಲ್ಲೂ ಗುಣಗಾನ.
ಈ ವರ್ಷದ ಆಯವ್ಯಯ ಪತ್ರದ ಭಾಷಣ ಅನೇಕ ವಿಷಯಗಳಿಂದ ನಾಡಿಗೆ ಅದು
ಭೂಷಣ.

ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎ. ಕೆ. ಅನಂತಕೃಷ್ಣ (ಶಿವಾಜಿನಗರ) : ಸನ್ಮಾನ್ಯ ಅಧ್ಯಕ್ಷಿಣಿಯವರೆ, ಮಾನ್ಯ ಮುಖ್ಯ ಮಂತ್ರಿಯವರು ಮಂಡಿಸಿರುವ ಆಯವ್ಯಯ ಪಟ್ಟಿ ಏನಿದೆ ಅದನ್ನು ನಾನು ಬೆಂಬಲಿಸುತ್ತಾ , ನನ್ನ ಕೆಲವು ಅಭಿಪ್ರಾಯಗಳನ್ನು ಸೂಚಿಸಲು ಇಷ್ಟಪಡುತ್ತೇನೆ. ನಮ್ಮ ರಾಷ್ಟ್ರದ ಮೂಲಭೂತ ಸಿದ್ಧಾಂತವೆಂದರೆ, ಜಾತ್ಯಾತೀತತೆ, ಸಮಾಜವಾದ, ಪ್ರಜಾಪ್ರಭುತ್ವ ಮತ್ತು self reliance ಎಂದು ಏನು ಹೇಳುತ್ತೇವೆ? ಇದೆಲ್ಲಾ ಕೂಡ ಸಾಮಾಜಿಕ ಮತ್ತು ಆರ್ಥಿಕ ನ್ಯಾಯ, ರಾಷ್ಟ್ರದ ಏಕತೆ ಮತ್ತು ಭದ್ರತೆ, ಸ್ವಾತಂತ್ರ್ಯ ಇದನ್ನು ಅಂತರ ರಾಷ್ಟ್ರೀಯವಾಗಿ ಗಮನಿಸಿದರೆ non-alignment forces, multinational, monopoly imperialistsಗೆ ಇದು, ಮೂಲಭೂತ ವಿರೋಧ. ಇದರ ಒಂದು ಮೂಲಭೂತ ಸಿದ್ಧಾಂತದ ಮೇಲೆ ನಮ್ಮ ಆರ್ಥಿಕ ಸಾಮಾಜಿಕ ನೀತಿಯನ್ನು ನಾವು ತೀರ್ಮಾನ ಮಾಡಬೇಕಾಗಿದೆ. ಆ ಒಂದು ಎಲ್ಲೆಯೊಳಗೆ ಈ ಆಯವ್ಯಯ ಪಟ್ಟಿಯನ್ನು ನಾನು ಗಮನಿಸಿದ್ದೇ ಆದರೆ, ನನಗೆ ಮನಸ್ಸಿಗೆ ದುಃಖವಾಗುತ್ತದೆ. ಈ ಮುಖ್ಯ ಮೂಲಭೂತ ಅಂಶಗಳನ್ನು, ಸಿದ್ಧಾಂತಗಳನ್ನು ಸರ್ಕಾರ ಸ್ವಲ್ಪ ಕೈ ಬಿಟ್ಟಿದೆ. ಅದರಲ್ಲೂ ಈ ಪಟ್ಟಿಯಲ್ಲಿ ಸಮಾಜವಾದದ ಒಂದು ಶಬ್ದ ಕೂಡ ಇಲ್ಲ. ಎಲ್ಲಿ ಸಮಾಜವಾದದ ಒಂದು ಶಬ್ದ ಇಲ್ಲ, ಅದರ ಒಂದು ದಿಕ್ಕಿನಲ್ಲಿ ನಮ್ಮ ಆರ್ಥಿಕ ಮತ್ತು ಸಾಮಾಜಿಕ ನೀತಿಯನ್ನು ಬಹಳ ಗುರುತರವಾಗಿ ಸ್ಥಿರಪಡಿಸುವುದಿಲ್ಲವೋ ಆಗ ನಮ್ಮ ಸಮಾಜದಲ್ಲಿ ಜಾತ್ಯಾತೀತತೆ ಸ್ಥಿರವಾಗಿ ಇರುವುದಕ್ಕೆ ಸಾಧ್ಯವಿಲ್ಲ ಸಾಮಾಜಿಕ, ಆರ್ಥಿಕ ನ್ಯಾಯ ದೊರಕುವುದು ಬಹಳ ಕಷ್ಟವಾಗುತ್ತದೆ. ರಾಷ್ಟ್ರದ ಸಿದ್ಧಾಂತದ ಒಂದು ಗುರಿಯನ್ನು ಗಮನದಲ್ಲಿಟ್ಟುಕೊಂಡು ಮಾನ್ಯ ಮುಖ್ಯಮಂತ್ರಿಯವರು ಆಯವ್ಯಯ ಪಟ್ಟಿಯನ್ನು ನಮ್ಮ ಮುಂದೆ ಇಟ್ಟಿದ್ದಾರೆ. Economic liberalisation ಎಂದು ಏನು

ಹೇಳುತ್ತೇವೆ? ಅದಕ್ಕೆ ಹೆಚ್ಚು ಮಹತ್ವವನ್ನು ಕೊಟ್ಟಿದ್ದಾರೆ. ರಾಷ್ಟ್ರದ ನೀತಿಗೆ ಸರಿದೂಗಿಸುವಂಥ ರೀತಿಯಲ್ಲಿ ನೀತಿ ನಿಯಮಗಳನ್ನು ಅನುಸರಿಸಿಕೊಂಡು ಹೋಗಬೇಕಾದರೂ ಕೂಡ ಅದರಿಂದ ನಮ್ಮ ರಾಜ್ಯ ಮಟ್ಟದಲ್ಲಿ ನಮ್ಮ ನಿರುದ್ಯೋಗ, ಬಡತನ ಈ ವಿಷಯದಲ್ಲಿ ಯೋಚನೆ ಮಾಡಿದಾಗ ನಮಗೆ ಇರುವಂಥ ಒಂದು ಸ್ವಾತಂತ್ರ್ಯ ಏನಿದೆ ಅದನ್ನು ನಾವು ಸದುಪಯೋಗ ಮಾಡಿಕೊಂಡು, ನಮ್ಮ ಪ್ರಗತಿಶೀಲ ಕಾರ್ಯಕ್ರಮಗಳನ್ನು ಮುಂದುವರಿಸಿ ಕೊಂಡು ಹೋಗ ಬೇಕಾದುದು ಬಹಳ ಅವಶ್ಯಕವಾಗಿದೆಯೆಂದು ನಾನು ಭಾವಿಸುತ್ತೇನೆ. ಆರ್ಥಿಕ ನೀತಿ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು Privatisation ಬಗ್ಗೆ ಸಾಕಷ್ಟು ಮಾತುಗಳನ್ನು ಹೇಳಿದ್ದಾರೆ. ಎಲ್ಲಿಯವರೆಗೆ ಖಾಸಗೀಕರಣದ ಕಡೆ ಹೆಚ್ಚು ಹೆಚ್ಚು ಗಮನವನ್ನು ಹರಿಸಿ ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡುತ್ತೇವೆ? ಅಂಥ ಪ್ರಯತ್ನದಲ್ಲಿ ನಮ್ಮ ಬಡತನ, ನಿರುದ್ಯೋಗ, ಜಾತೀಯತೆ, ಮತೀಯತೆ, ಮತಾಂಧತೆ ಇವುಗಳನ್ನು ನಿರ್ಮೂಲನ ಮಾಡುವುದು ಸಾಧ್ಯವಾಗುವುದಿಲ್ಲ. ಕೇವಲ ಆ ಸಮಯಕ್ಕೆ ಮಾತ್ರ ಕೆಲವು ಸುಖ ಭೋಗಗಳನ್ನು ಅನುಭವಿಸುವುದಕ್ಕೆ ಸಾಧ್ಯವಾಗುತ್ತದೆ. ಅಂತಿಮವಾಗಿ ನಮ್ಮ ರಾಷ್ಟ್ರದ ಸ್ವಾತಂತ್ರ್ಯವಾಗಿರಲಿ, ವ್ಯಕ್ತಿ ಸ್ವಾತಂತ್ರ್ಯವಾಗಿರಲಿ, ಸಾಮಾಜಿಕ, ಆರ್ಥಿಕ , ನ್ಯಾಯ ವಿಷಯವೇ ಆಗಿರಲಿ, ಅದೆಲ್ಲಾ ಕನಸಾಗುತ್ತದೆ. ಈ ಖಾಸಗೀಕರಣದಲ್ಲಿ ಬಹಳ ದೊಡ್ಡ ಒಂದು ತೊಂದರೆ ಕೂಡ ಇದೆ. ನಮ್ಮ ಸಮಾಜದಲ್ಲಿ ಖಾಸಗಿ ಉದ್ಯೋಗವಾಗಿರಲಿ, ವ್ಯಾಪಾರಿಗಳೇ ಆಗಿರಲಿ ಅದೆಲ್ಲಾ ಮುಂದುವರಿದ ಜನಾಂಗಗಳ ಕೈಯಲ್ಲಿ ಮಾತ್ರ ಇದೆ. ಅದೇ ಜನಾಂಗದವರು ಮತ್ತಷ್ಟು ಮುಂದುವರೆಯುವುದಕ್ಕೆ ಸಾಧ್ಯವಾಗುತ್ತದೆ. ಹಿಂದುಳಿದವರು ಮತ್ತಷ್ಟು ಹಿಂದೆ ಹೋಗುವುದಕ್ಕೆ ದಾರಿಯಾಗುತ್ತದೆ. ಅಂಥ ಸಂದರ್ಭದಲ್ಲಿ ಬಡತನ, ಹಿಂದುಳಿಕೆ, ನಿರುದ್ಯೋಗವನ್ನು ನಾವು ಕಡಿಮೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಅಲ್ಪಸಂಖ್ಯಾತರ, ಹಿಂದುಳಿದವರ, ನಿಮ್ನ ವರ್ಗದವರ , ಹೆಣ್ಣುಮಕ್ಕಳ ವಿಷಯದಲ್ಲಿ ಇವರುಗಳ ಪ್ರಗತಿಯನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಮಾತನಾಡಬೇಕಾದರೆ, ನಮ್ಮ ಆರ್ಥಿಕ , ಸಾಮಾಜಿಕ ನೀತಿಯನ್ನು ನಿರೂಪಣೆ ಮಾಡಬೇಕಾದರೆ , ಈ ಖಾಸಗೀಕರಣ ಯಾರ ಕೈಗೊಂಬೆಯಾಗಿರುತ್ತದೆ? ಯಾರ ನಿಯಂತ್ರಣದಲ್ಲಿರುತ್ತದೆ? ಯಾವ ವಿಭಾಗದ ಜನತೆಯ ಕೈಯಲ್ಲಿರುತ್ತದೆ? ಎನ್ನುವುದನ್ನು ನಾವು ತೀವ್ರವಾಗಿ ಯೋಚನೆ ಮಾಡಿದ್ದೇ ಆದರೆ, ಈ ಹೆಣ್ಣು ಮಕ್ಕಳ, ನಿಮ್ನ ವರ್ಗದವರ, ಅಲ್ಪ ಸಂಖ್ಯಾತರ , ಹಿಂದುಳಿದಿರುವವರ ಪ್ರಗತಿ ಇವರೆಲ್ಲರಿಗೂ ತದ್ವಿರುದ್ಧವಾಗಿ ನಮ್ಮ ಸಮಾಜ ನಿರೂಪಗೊಳ್ಳುತ್ತದೆಂದು ಹೇಳಬೇಕಾಗುತ್ತದೆ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಯವರು ಸಾಧ್ಯವಾದಷ್ಟು ಮಟ್ಟಿಗೆ ಖಾಸಗೀಕರಣಕ್ಕೆ ಹೆಚ್ಚು ಪ್ರಾಧಾನ್ಯತೆ ಕೊಡದೆ ರಾಜ್ಯ ಮಟ್ಟದಲ್ಲಿ ಹೆಚ್ಚಾಗಿ ಆಗಿ ಈ ಆರ್ಥಿಕ ಕಾರ್ಯಕ್ರಮಗಳನ್ನು ಸರ್ಕಾರಿ ಆಡಳಿತ ಮಟ್ಟದಲ್ಲಿ ನಿಯಂತ್ರಣ ಇಟ್ಟುಕೊಂಡು ಕೆಲಸ ಮಾಡಬೇಕೆಂದು ಹೇಳುತ್ತೇನೆ. ಸಣ್ಣ ಉದಾಹರಣೆ ಹೇಳಬೇಕಾದರೆ ಎಲ್ಲಿಯವರೆಗೆ ಸರ್ಕಾರದ ಕೈಯಲ್ಲಿ ಕೈಗಾರಿಕೆಯಾಗಲೀ, ವ್ಯಾಪಾರವೇ ಆಗಲಿ ಇದ್ದರೆ,ಅದರ ಬಗ್ಗೆ ಈ ಸದನದಲ್ಲಿ ಮಾತನಾಡುವುದಕ್ಕೆ ಹಕ್ಕು ಇರುತ್ತದೆ, ಲೋಪದೋಷಗಳನ್ನು ಪ್ರಶ್ನೆ ಮಾಡುವುದಕ್ಕೆ ಅನುಕೂಲವಾಗುತ್ತದೆ, ತಿದ್ದಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ, ಖಾಸಗಿಯವರ ಕೈಯಲ್ಲಿದ್ದರೆ, ನಾವು ಅವರ ಬಗ್ಗೆ ಪ್ರಶ್ನೆ ಮಾಡುವುದಕ್ಕಾಗುವುದಿಲ್ಲ, ಅವರಲ್ಲಿ ಏನು ಶೋಷಣೆಯಾದರೂ ಕೂಡ ನಾವು ಮಾತನಾಡುವುದಕ್ಕಾಗುವುದಿಲ್ಲ. ರಾಜ್ಯಮಟ್ಟದಲ್ಲಿ ಸರ್ಕಾರದಿಂದ ಶೋಷಣೆಯಾದರೆ ನಾವು ಸರ್ಕಾರದ ವಿರುದ್ಧ ಮಾತನಾಡುವುದಕ್ಕಾಗುತ್ತದೆ. ಜನತೆಯ ಪ್ರತಿನಿಧಿಗಳಾಗಿ ಅವರ ಒಂದು ಕಲ್ಯಾಣಕ್ಕಾಗಿ ಮಾತನಾಡುವುದಕ್ಕಾಗುತ್ತದೆ. ಈಗ ಖಾಸಗೀಕರಣ ಜಾಸ್ತಿಯಾದರೆ ನಮ್ಮ ನಿಯಂತ್ರಣ ಹೋಗುತ್ತದೆ. ಈ ಸದನದ ಒಂದು ಶಕ್ತಿ ಕೂಡ ಕುಗ್ಗಿ ಹೋಗುತ್ತದೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಸಾಲದ ಹೊರೆ ಯಾವ ಮಟ್ಟಿಗೆ ಹೋಗುತ್ತಿದೆ ಎಂದರೆ, ರಾಜ್ಯ ಮಟ್ಟದ, ರಾಷ್ಟ್ರಮಟ್ಟದ ಸಾಲ ಅಲ್ಲದೆ ಅಂತರರಾಷ್ಟ್ರೀಯ ಮಟ್ಟದಲ್ಲಿ

ನಾವು ಸಾಲವನ್ನು ಜಾಸ್ತಿ ಮಾಡಿಕೊಳ್ಳುವಂಥ ಪ್ರಯತ್ನ ಆಗುತ್ತಿದೆ ಯಾವುದೇ ವಿಷಯ ಬಂದರೂ ವರ್ಲ್ಡ್ ಬ್ಯಾಂಕಿನ ಸಹಾಯ, ಇಂಟರ್‌ನ್ಯಾಷನಲ್ ಮಾನಿಟರಿ ಫಂಡಿನ ಸಹಾಯ, ಪರ ರಾಷ್ಟ್ರಗಳಿಂದ ಬರುವ ಸಹಾಯ, ಬಹು ರಾಷ್ಟ್ರಗಳಿಂದ ಬರತಕ್ಕಂಥ ಒಂದು ಆರ್ಥಿಕ ಶಕ್ತಿಯ ಸಹಾಯ ಈ ರೀತಿ ಮಾಡಿ ನಾವು ಎಲ್ಲಿ ಹೋಗಿದ್ದೇವೆಂದರೆ, ನಮ್ಮ ರಾಜ್ಯಮಟ್ಟದಲ್ಲಿ, ನಗರಗಳಲ್ಲಿ ಗುಡಿಸಲ ವಾಸಿಗಳು ಏನಿದ್ದಾರೆ, ಅದರ ನಿರ್ಮೂಲನ ಮಾಡುವುದೇ ಆಗಿರಲಿ, ನೈರ್ಮಲ್ಯೀಕರಣ ಮಾಡುವುದೇ ಆಗಿರಲಿ, ಅದನ್ನು ಕೂಡ ನಾವು ವರ್ಲ್ಡ್ ಬ್ಯಾಂಕಿನಿಂದ ಎಷ್ಟು ದುಡ್ಡು ಬರುತ್ತದೆಂದು ನಾವು ನೋಡುತ್ತೇವೆ. ಅಷ್ಟೇಕೆ, ಕುಡಿಯುವ ನೀರಿನ ಯೋಜನೆಗಳಿಗೂ ದುಡ್ಡು ಬರಬೇಕಾಗಿದೆ. ನಗರ ಸಭೆಗಳ ಕಾರ್ಯಕ್ರಮಗಳನ್ನು ಮುಂದುವರೆಸಬೇಕಾಗಿದ್ದರೆ ವರ್ಲ್ಡ್ ಬ್ಯಾಂಕಿನಿಂದ ನಾವು ಸಾಲವನ್ನು ತೆಗೆದುಕೊಂಡು ಬಂದು ಕೆಲಸವನ್ನು ಮಾಡಿಸುವಂಥ ಪರಿಸ್ಥಿತಿ ಬರುತ್ತಿದೆ. ಪಬ್ಲಿಕ್ ಲೆಟ್ರಿನ್ಸ್ ಕೂಡ ವರ್ಲ್ಡ್ ಬ್ಯಾಂಕಿನ ಸಾಲದಿಂದ ಮಾಡುವಂಥ ಕಾಲ ಬರುತ್ತಿದೆ. ನಮ್ಮ ಕೃಷಿ ಕೇಂದ್ರದಲ್ಲಿ ಈ ಡೆಂಕಲ್ ಡ್ರಾಫ್ಟ್ ಎಂದು ಏನು ಹೇಳುತ್ತಿದ್ದಾರೆ? ಅದನ್ನು ನಾವು ಒಪ್ಪಿಕೊಂಡಿದ್ದೇ ಆದರೆ ಕೇವಲ ನಮ್ಮ ಆರ್ಥಿಕ ಪರಿಸ್ಥಿತಿ ಅಧೋಗತಿ ಆಗುವುದು ಮಾತ್ರವಲ್ಲ ನಮ್ಮ ದೈನಂದಿನ ಬದುಕಿನಲ್ಲಿ ಬದುಕುವುದು ಮಾತ್ರವಲ್ಲ, ನಮ್ಮ ರಾಷ್ಟ್ರದ ಸ್ವಾತಂತ್ರ್ಯವನ್ನು ಕಳೆದುಕೊಳ್ಳುವಂಥ ಪರಿಸ್ಥಿತಿ ಬರುತ್ತದೆ. ಅಂಥ ಒಂದು ಸಂದರ್ಭವನ್ನು ನಾವು ನೋಡದೇ ಇರುವುದು ಒಳ್ಳೆಯದೆಂದು ನಾನು ಭಾವಿಸುತ್ತೇನೆ. ಆದ್ದರಿಂದ ನಾನು ಮೂಲಭೂತವಾಗಿ ವಿಷಯವನ್ನು ಪ್ರಾರಂಭದಲ್ಲಿ ಹೇಳಬಯಸುತ್ತೇನೆ, ನಮ್ಮ ರಾಜ್ಯ ಸರ್ಕಾರ, ನಮ್ಮ ಮುಖ್ಯ ಮಂತ್ರಿಯವರು, ಏನೇ ಆಗಿರಲಿ ಖಾಸಗೀಕರಣಕ್ಕೆ ಜಾಸ್ತಿ ಅವಕಾಶ ಮಾಡಿಕೊಡದೆ, ರಾಜ್ಯಸರ್ಕಾರದ ಒಂದು ನಿಯಂತ್ರಣದಲ್ಲಿ ಆರ್ಥಿಕ ಬೆಳವಣಿಗೆಗೆ ಸಾಕಷ್ಟು ಅವಕಾಶ ಮಾಡಿಕೊಂಡು ಹೋಗಬೇಕು. ಇಲ್ಲದಿದ್ದರೆ ನಮ್ಮ ಮುಂದಿನ ಪೀಳಿಗೆ ಉಸಿರಾಡುವುದಕ್ಕೆ ಸಾಧ್ಯವಿಲ್ಲದೆ ನಮ್ಮನ್ನು ಶಪಿಸುತ್ತಾರೆ. ಮಾನ್ಯ ರಾಮಯ್ಯನವರು ಒಂದು ನಿದರ್ಶನ ಹೇಳುತ್ತಿದ್ದರು ಕುಣಿಗಲ್ ಸ್ಟಡ್ ಫಾರಂ ವಿಷಯದಲ್ಲಿ ಮೊದಲು ಅದು ನಮ್ಮ ರಾಜ್ಯ ಸರ್ಕಾರದ ಕೈಯಲ್ಲಿತ್ತು, ಲೋಪದೋಷಗಳು ಏನೇ ಇರಲಿ ಅದು ನಮ್ಮದು, ಜನರ ಆಸ್ತಿಯಾಗಿತ್ತು, ಖಾಸಗಿಯವರ ಕೈಗೆ ಕೊಟ್ಟ ಮೇಲೆ ಅದನ್ನು ವಾಪಸ್ ಪಡೆಯಲು ಎಷ್ಟು ಕಷ್ಟ ಆಗುತ್ತದೆ, ಯಾವ ರೀತಿ ಅದರ ಆಡಳಿತವರ್ಗ ಕೆಲಸ ಮಾಡುತ್ತದೆ ಎಂದು ಗೊತ್ತಾಗುತ್ತದೆ ಮತ್ತು ವಾಪಸ್ ತೆಗೆದುಕೊಳ್ಳಬೇಕಾದರೆ ನಮ್ಮ ಕೈಗೆ ಎಷ್ಟು ದುಡ್ಡು ಬರುತ್ತದೆ. ಇದನ್ನೆಲ್ಲ ನಾವು ಆಲೋಚಿಸಿದರೆ ಅತ್ಯಧಿಕವಾದ ಖಾಸಗೀಕರಣದಿಂದ ನಮ್ಮ ಸಮಾಜ ಉದ್ಧಾರವಾಗುವುದಕ್ಕೆ ಸಾಧ್ಯವಿಲ್ಲ. ಕೇಂದ್ರ ಸರ್ಕಾರದವರು ಡಿಎ ಜಾಸ್ತಿ ಮಾಡುತ್ತಾ, ರಾಜ್ಯಮಟ್ಟದಲ್ಲಿ ಮತ್ತು ನಗರಪಾಲಿಕೆಗಳಲ್ಲಿ ಕೂಡ ಅದೇ ಡಿಎ ಪಾಲಿಸಿ ಅನುಸರಿಸಿ ಸಂಬಳ ಸಾರಿಗೆ ಜಾಸ್ತಿ ಮಾಡುವಂತಹ ಪದ್ಧತಿ ಆಗುತ್ತಿದೆ. ಅದರಿಂದ ನಮ್ಮ ಆರ್ಥಿಕ ಸ್ಥಿತಿಗತಿಗೆ ತೊಂದರೆಯಾಗುತ್ತದೆ ನಾವು ಉಳಿಯೋದು ಕಷ್ಟವಾಗುತ್ತಿದೆ. ಇದರ ಬಗ್ಗೆ , ಸರಕಾರಕ್ಕೆ ಮೊರೆ ಇಡುತ್ತಿದ್ದೇವೆ. ಇದನ್ನು ನಾನು 1965ರಿಂದಲೂ ಕೇಳುತ್ತಿದ್ದೇನೆ. ಪ್ರತಿ ಸಲ ಕೇಂದ್ರದಲ್ಲಿ ನಮ್ಮನ್ನು ಕೇಳದೆ ಜಾಸ್ತಿ ಮಾಡುತ್ತಾರೆ, ಅವರು ಮಾಡಿದ ತಕ್ಷಣ ನಾವು ಜಾಸ್ತಿ ಮಾಡಬೇಕಾಗುತ್ತದೆ. ನಮ್ಮಲ್ಲಿ ಆ ಶಕ್ತಿ ಇರುವುದಿಲ್ಲ, ನಾವು ತೀರ್ಮಾನ ಮಾಡುತ್ತಿದ್ದೇವೆ ಅಂದರೆ ನಗರಪಾಲಿಕೆ ನಗರಸಭೆಗಳೂ ಮಾಡಬೇಕಾಗುತ್ತದೆ. ಮಾಡುತ್ತ ಹೋಗಲು ನಮ್ಮ ಆರ್ಥಿಕ ಸ್ಥಿತಿ ಕಷ್ಟವಾಗಿ, ಪ್ರಗತಿದಾಯಕ ಕೆಲಸ ಮಾಡಬೇಕಾಗಿದ್ದರೆ ಅಲ್ಲಿ ಸಾಕಷ್ಟು ಹಣ ಇಲ್ಲವೆಂದು ಬಹಳ ಕಷ್ಟ ಆಗುತ್ತಿದೆ. ಅಂದ ಮೇಲೆ ಮತ್ತೆ ಮತ್ತೆ ನಾವು ಕೇಂದ್ರವನ್ನು ಕೇಳುತ್ತಾ ಹೋಗುತ್ತೇವೆ, ಅವರು ಮಾಡುವುದನ್ನು ಯಾವಾಗ ನಿಲ್ಲಿಸುತ್ತಾರೆ, ನಾವು ಕೇಳುತ್ತಾ ಹೋಗುವುದು ಯಾವಾಗ ಕೊನೆಗಾಣುತ್ತದೆ ಇದನ್ನು ನಾವು ಖಚಿತವಾಗಿ ಯೋಚನೆ ಮಾಡಬೇಕಾಗುತ್ತದೆ. ಆಮೇಲೆ ಅಂತಿಮವಾಗಿ ಕೇಂದ್ರ ಸರ್ಕಾರಕ್ಕೆ ಹೇಳಬೇಕಾಗುತ್ತದೆ. ನೀವು

ಏನೇ ಮಾಡಬೇಕಾದರೂ ನಮ್ಮನ್ನು ಕೇಳಿ ಮಾಡಬೇಕು, ಹಾಗೂ ನೀವು ಜಾಸ್ತಿ ಮಾಡಿದರೆ ಯಾವ ಹಂತದಲ್ಲಿ ನಮ್ಮ ನೌಕರರಿಗೆ ನಾವು ಜಾಸ್ತಿ ಮಾಡಬೇಕಾಗುತ್ತದೆ ಅಷ್ಟು ಹಣವನ್ನು ಸಬ್ಸಿಡೈಸ್ ಮಾಡಬೇಕಾಗುತ್ತದೆ ಎಂದು ಹೇಳಬೇಕಾಗುತ್ತದೆ. ಇಲ್ಲದಿದ್ದರೆ ಕೇಂದ್ರದ ಮೇಲೆ ಆಪಾದನೆ ಮಾಡುತ್ತಾ ಸರ್ಕಾರ ಬಡತನ ಎದುರಿಸಬೇಕಾಗುತ್ತದೆ.

ನಗರಪಾಲಿಕೆ ನಗರಸಭೆಗಳೂ ಅದೇ ಕೆಲಸ ಮಾಡಬೇಕಾಗಿ ಬರುತ್ತದೆ ಮತ್ತು ಅಭಿವೃದ್ಧಿ ಕಾರ್ಯಗಳನ್ನು ಮಾಡುವುದಕ್ಕೆ ಆಗುವುದಿಲ್ಲ. ಪದೇ ಪದೇ ಈ ಮಾತನ್ನು ಹೇಳುವುದು ಒಳ್ಳೆಯದಲ್ಲವೆಂದು ನನ್ನ ಭಾವನೆ. ಏನೋ ಒಂದು ಒಳ್ಳೆಯ ಉದ್ದೇಶದಿಂದ ಹೇಳುತ್ತಿದ್ದಾರೆ, ಅದೆಷ್ಟು ಮಟ್ಟಿಗೆ ಕಾರ್ಯಗತವಾಗುತ್ತದೆಯೋ ಗೊತ್ತಿಲ್ಲ. 93-94ರ ಸಾಲಿನಲ್ಲಿ ಏನು ಸಂಬಳ ಸಾರಿಗೆ ಕೊಡುತ್ತಿದ್ದೇವೆ ಅದನ್ನು ಶೇಕಡ 25ಕ್ಕೆ ಲಿಮಿಟ್ ಮಾಡುತ್ತೇವೆ ಎಂದು ಹೇಳಿದ್ದಾರೆ. ಇದನ್ನು ನಂಬುವುದಕ್ಕೆ ಸಾಧ್ಯವಿಲ್ಲ. ನಮ್ಮ ದೈನಂದಿನ ಜೀವನದಲ್ಲಿ ಬೆಲೆಯೇರಿಕೆ ಜಾಸ್ತಿಯಾಗುತ್ತ ಇರುವಾಗ ಸಂಬಳ ಸಾರಿಗೆ ಪಡೆಯುವ ಸಿಬ್ಬಂದಿವರ್ಗ ಜಾಸ್ತಿವೇತನ ಕೇಳಬೇಕಾದದ್ದು ಅತ್ಯವಶ್ಯಕ, ಅದನ್ನು ನಾವು ಕೊಡಬೇಕಾಗುತ್ತದೆ. ಅದನ್ನು ತಡೆಯುವುದಕ್ಕೆ ಆಗದಿದ್ದರೆ, ನಮ್ಮ ಆರ್ಥಿಕ ಪದ್ಧತಿ ಏನಿದೆ, ಅದನ್ನು ಈ ಸಂದರ್ಭಕ್ಕೆ ಅನುಗುಣವಾಗಿ ಬದಲಾವಣೆ ಮಾಡಿಕೊಳ್ಳಬೇಕಾಗುತ್ತದೆ, ನಮ್ಮ ಅಭಿಪ್ರಾಯಗಳನ್ನು ಬದಲಾವಣೆ ಮಾಡಿಕೊಳ್ಳಬೇಕಾಗುತ್ತದೆ. ಪ್ರಗತಿಶೀಲವಾದಂಥ ತೀರ್ಮಾನಗಳನ್ನು ಕೂಡ ಕೈಗೊಳ್ಳ ಬೇಕಾಗುತ್ತದೆ. ನಮ್ಮ ಸಿಬ್ಬಂದಿಗೆ ಕೊಡುವ ಸಂಬಳದಲ್ಲಿ ಖರ್ಚನ್ನು ಕಡಿಮೆ ಮಾಡುತ್ತೇವೆ, ಖರ್ಚು ಜಾಸ್ತಿ ಆಗುತ್ತಿರಬೇಕಾದರೆ ನಮ್ಮ ಆರ್ಥಿಕ ನೀತಿಗೆ ಅನುಗುಣವಾಗಿ ಮತ್ತಷ್ಟು ಎಂಪ್ಲಾಯ್‌ಮೆಂಟನ್ನು ಅಂದರೆ ನಿರುದ್ಯೋಗ ಸಮಸ್ಯೆ ಜಾಸ್ತಿ ಆಗುತ್ತದೆ.

ಇಂಥ ಒಂದು ಪರಿಸ್ಥಿತಿ ಬಂದಾಗ ನಾವು ಬಹಳ ತೀವ್ರವಾಗಿ ರಾಷ್ಟ್ರಮಟ್ಟದಲ್ಲಿ, ರಾಜ್ಯಮಟ್ಟದಲ್ಲಿ ಯಾವ ರೀತಿ ಹೊಂದಾಣಿಕೆಯನ್ನು ಇಟ್ಟುಕೊಂಡು ಹೋಗಬೇಕಾಗುತ್ತದೆ ಎಂಬುದನ್ನು ಯೋಚನೆ ಮಾಡಬೇಕಾದ್ದು ಅತ್ಯಾವಶ್ಯಕವಾಗಿದೆ ಎಂದು ಹೇಳುತ್ತೇನೆ. ನಮ್ಮಲ್ಲಿ ಇರುವುದಾದರೂ ಏನು? ನಮ್ಮ ರಾಷ್ಟ್ರದಲ್ಲಿರುವುದು ಹ್ಯೂಮನ್ ರಿಸೋರ್‌ಸಸ್ ಮ್ಯಾನ್‌ಪವರ್ ಈ ಮ್ಯಾನ್‌ಪವರ್‌ನ್ನು ನಾವು ಸರಿಯಾಗಿ ಉಪಯೋಗಿಸಿಕೊಂಡರೆ, ನಾವು ನಾಗರೀಕರಿಗೆ ಗೌರವಯುತ ಜೀವನವನ್ನು ನಡೆಸುವಂಥ ಒಂದು ಯೋಗ್ಯಮಟ್ಟದ ಒಂದು ಸ್ಥಾನಮಾನವನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ. ಆ ರೀತಿ ಮಾಡಬೇಕಾದರೆ, ನಾವು ಹೆಚ್ಚುಹೆಚ್ಚಾಗಿ ಅವರಿಗೆ ಸಕಾಲದಲ್ಲಿ ಉದ್ಯೋಗ ಮಾಡುವುದಕ್ಕೆ ಔದ್ಯೋಗ ಮಾಡುವುದಕ್ಕೆ ವ್ಯಾಪಾರ ಮಾಡುವುದಕ್ಕೆ, ಪ್ರತಿಯೊಂದು ಹಂತದಲ್ಲೂ ಕೂಡ ಅವರವರ ಕಾಲಮೇಲೆ ನಿಲ್ಲುವಂಥ ರೀತಿಯಲ್ಲಿ ಸಹಾಯ ಮಾಡಬೇಕಾಗುತ್ತದೆ. ಈ ಒಂದು ಕೆಲಸಕ್ಕೆ ನಮ್ಮಲ್ಲಿ ಸಾಕಷ್ಟು ಆರ್ಥಿಕ ಶಕ್ತಿಯನ್ನು ಸಂಪಾದಿಸಬೇಕಾಗಿ ಬರುತ್ತದೆ. ಆ ರೀತಿ ಆರ್ಥಿಕ ಶಕ್ತಿಯನ್ನು ನಾವು ಸಂಪಾದಿಸಿ ಕೊಳ್ಳಬೇಕೆಂದಾಗ ನಾವು ಯಾವ ಯಾವ ಭಾಗದಿಂದ ಇದುವರೆಗೂ ನಾವು ರಿಸೋರ್‌ಸಸ್ ಮೊಬಲೈಸೇಷನ್ಸ್ ಮಾಡುವುದಕ್ಕೆ ನಮಗೆ ಸಾಧ್ಯವಾಗಿಲ್ಲ, ಮಾಡುವುದಕ್ಕೆ ಮನಸ್ಸು ಮಾಡಿಲ್ಲ. ಯಾವ ಒಂದು ಬಂಡವಾಳಶಾಹಿ ಪದ್ಧತಿಯಿಂದ ಕೆಲವೇ ಒಂದು ಭಾಗಗಳು ಬೆಳೆದುಕೊಂಡು ಬರುತ್ತಿವೆ. ರಾಜ್ಯಾದ್ಯಂತ ರಾಷ್ಟ್ರಾದ್ಯಂತ ಏನು ಶೋಷಣೆ ಜಾಸ್ತಿ ಮಾಡುತ್ತಿದ್ದಾರೆ. ಆರ್ಥಿಕವಾಗಿ, ಸಾಮಾಜಿಕವಾಗಿಯೂ ಅಂಥ ಒಂದು ಭಾಗದ ಜನತೆಯ ಮೇಲೆ ಬಹಳಷ್ಟು ನಾವು ತೀವ್ರವಾದ ಒಂದು ಕ್ರಮವನ್ನು ವಹಿಸಬೇಕಾದಂಥ ಅವಶ್ಯಕತೆ ಇದೆ. ಅದನ್ನು ಮಾಡದೆ, ನಾವು ಈ ಸಣ್ಣ ಪುಟ್ಟ ಜನತೆಯ ವಿಷಯದಲ್ಲಿ ಭಿಕ್ಷೆ ಕೊಡುವ ರೀತಿಯಲ್ಲಿ ನಾವು ಕೆಲಸ ಮಾಡುತ್ತಾ ಹೋದರೆ ಅವರು ಭಿಕ್ಷುಕರಾಗಿರುತ್ತಾರೆ. ನಾವು ಒಂದು ಪಕ್ಷ ದಾನಿಗಳಾಗಿಯೇ ಇರುತ್ತೇವೆ. ಆದರೆ ಈ ಪಕ್ಷ ದಾನಿ ಎಂದು ತೋರಿಸಿಕೊಳ್ಳುವ್ವದು ನಮ್ಮ

ನಿಷ್ಠೆ ಮತ್ತು ದಕ್ಷತೆಗೆ ಸರಿಹೋದಂಥ ಸಾರ್ವಜನಿಕರ ಸೇವೆಗೆ ಅನುಕೂಲವಾಗುವುದಿಲ್ಲ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ನಾವು ಬಹಳ ಕಾಲದಿಂದ ಕೇಳುತ್ತಿದ್ದೇವೆ, ಟ್ಯಾಕ್ಸ್ ಹಾಕಲಿ, ಹಾಕದೇ ಹೋಗಲಿ ಜಾಸ್ತಿ ಮಾಡಲಿ, ಮಾಡದೇ ಹೋಗಲಿ ನಾವು ಏನೊಂದು ಟ್ಯಾಕ್ಸನ್ನು ಕಲೆಕ್ಟ್ ಮಾಡಬೇಕಾಗಿದೆ. ಅಂಥದ್ದರಲ್ಲಿ, ಲಿಕ್ಕರ್ ಸೇಲ್ಸ್‌ನಲ್ಲಿ ಇರುವ ಒಂದು ಲೂಪ್‌ಹೋಲ್ಸ್‌ನ್ನು ಪ್ಲಗ್ ಮಾಡುತ್ತೇವೆ ಎಂದು ಹೇಳಿ ಪ್ಲಗಿಂಗ್ ಆಫ್ ದಿ ಲೂಪ್‌ಹೋಲ್ಸ್‌ಗಿಂತ ಹೆಚ್ಚಾಗಿ ಆ ಸಾಕೆಟ್ಸ್ ಜಾಸ್ತಿ ಬೆಳೆಯುತ್ತಿದೆ. ಬ್ಯಾರೆಲ್ ಲೆವೆಲ್‌ನಲ್ಲಿ ಜಾಸ್ತಿ ಲೂಪ್‌ಹೋಲ್ಸ್ ಅದರ ಮೂಲಕ ಸೋರಿಹೋಗುತ್ತಿದೆ. ಅದನ್ನು ನಾವು ತಡೆಹಾಕುತ್ತಿಲ್ಲ. ಅದಕ್ಕೆ ಕಾರಣವಾದರೂ ಏನೆಂದರೆ ನಮ್ಮ ಅಧಿಕಾರವರ್ಗ, ಆಡಳಿತವರ್ಗ, ಮೇಲಿಂದ ಮುಖ್ಯಕಾರ್ಯದರ್ಶಿಯಿಂದ ಹಿಡಿದು ಅಂತಿಮವಾಗಿ ವಿಲೇಜ್ ಪಂಚಾಯಿತಿಯ ಅಕೌಂಟೆಂಟ್ ಏನು ಇರುತ್ತಾನೆ ಅಲ್ಲಿಯವರೆಗೂ ಕೂಡ ನಮ್ಮಲ್ಲಿ ಸೂಕ್ತ ದಕ್ಷತೆ ನಿಷ್ಠೆ, ಮತ್ತು ರಾಷ್ಟ್ರಪ್ರೇಮ, ಸಮಾಜಪ್ರೇಮ ಇದು ಬಹಳ ಕಡಿಮೆಯಾಗಿ ಹೋಗುತ್ತಿದೆ. ನಾವೇ ಹೇಳುತ್ತಿದ್ದೇವೆ. values are going down... ಮೌಲ್ಯ ಹೋಗುತ್ತಿದೆ ಎಂದು ಹೇಳುತ್ತಿದ್ದೇವೆ. ಮತ್ತು ಮೌಲ್ಯಾಧಾರಿತವಾಗಿ ನಾವು ಆಡಳಿತವನ್ನು ಕೊಡುತ್ತೇವೆ ಎಂದು ಮತ್ತೊಂದು ಕಡೆ ಹೇಳುತ್ತೇವೆ. ಆದ್ದರಿಂದ ನಾವು ತೀವ್ರವಾದ ಒಂದು ನಿಲುವನ್ನು ತೆಗೆದುಕೊಳ್ಳಬೇಕು ಎಲ್ಲಿ ಯಾವ ಹಂತದಲ್ಲಿ ಮೌಲ್ಯ ಹೋಗುತ್ತಿದೆ, ಕೆಳಗೆ ಹೋಗುತ್ತಿದೆ, ಯಾರಿಂದ ಹೋಗುತ್ತಿದೆ, ಅಂಥವರ ಮೇಲೆ ಒಂದು ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳುವಂಥ ಒಂದು ಧೈರ್ಯವನ್ನು ನಾವು ಪಡೆಯಬೇಕಾಗುತ್ತದೆ. ಅದರಲ್ಲೂ ನಾವು ರಾಜಕಾರಣಿಗಳಾಗಿ ಪೊಲಿಟಿಕಲ್‌ಪವರ್ ಅನ್ನು ವೀಲ್ಡ್ ಮಾಡುವಾಗ ಆ ಪೊಲಿಟಿಕಲ್ ವಿಲ್ ಎಂದು ಏನು ಹೇಳುತ್ತೇವೆ, ಆ ಪೊಲಿಟಿಕಲ್ ವಿಲ್‌ನ್ನು ದೃಢದಿಂದ ಉಪಯೋಗ ಮಾಡುವಂಥ ಒಂದು ಕೆಲಸವನ್ನು ಮಾಡಬೇಕು. ಕೇವಲ ನಾವು ಬಹಳ ಉದಾತ್ತ ಮನೋಭಾವದಿಂದ ಅಭಿಮಾನಪೂರಕವಾಗಿ, ಆಶಾದಾಯಕವಾಗಿ ಕೆಲವು ಮಾತುಗಳನ್ನು ಉಪದೇಶ ಮಾಡುವಂಥ ಮಾತುಗಳನ್ನು ಜನತೆಯ ಒಂದು ಮನಸ್ಸನ್ನು ಒಲಿಸಿಕ್ಕೊಳ್ಳುವಂಥ ರೀತಿಯಲ್ಲಿ ಸಂದೇಶವನ್ನು ಕೊಡುವಂಥ ಮಾತುಗಳನ್ನು ಪ್ರಯೋಜನವಾಗುವುದಿಲ್ಲ, ಎನ್ನುವ ಮಾತನ್ನು ಹೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಮನಸ್ಸು ಮಾಡಿದ್ದಾರೆ, ದಕ್ಷ ಆಡಳಿತವನ್ನು ಕೊಡುತ್ತೇವೆ, ನಿಷ್ಠಾವಂತ ಆಡಳಿತವನ್ನು ಕೊಡುತ್ತೇವೆ, ಸರಿಯಾದ ಸೇವೆಯನ್ನು ಮಾಡುತ್ತೇನೆ, ನಮ್ಮ ಮಂತ್ರಿಮಂಡಲ ಅದನ್ನು ಮಾಡುತ್ತದೆ ಎಂದು ಹೇಳಿದ್ದಾರೆ, ಇದು ಶ್ಲಾಘನೀಯವಾದ ಒಂದು ತೀರ್ಮಾನ. ನಾನು ಅದಕ್ಕೆ ಅಭಿನಂದಿಸುತ್ತೇನೆ. ಆದರೆ ಏನೊಂದು ಮಾತನ್ನು ಅವರು ಹೇಳುತ್ತಿದ್ದಾರೆ, ಹೇಳಿಕೆಗಳನ್ನು ಕೊಡುತ್ತಿದ್ದಾರೆ, ಅದನ್ನು ಕಾರ್ಯರೂಪಕ್ಕೆ ತರುವಂಥದರಲ್ಲಿ ಯಾವ ತರಹದ ಒಂದು ತೀವ್ರ ಕಾರ್ಯಕ್ರಮವನ್ನು ನಾವು ಹಾಕಿಕೊಳ್ಳಬೇಕಾಗಿದೆ. ಅದಕ್ಕೆ ಸೂಕ್ತವಾದಂಥ ಒಂದು ರಾಜಕೀಯ ಶಕ್ತಿಯನ್ನು ನಮ್ಮ ಕೈಗೆ ತೆಗೆದುಕೊಳ್ಳಬೇಕಾಗಿದೆ. ಆಡಳಿತ ಶಕ್ತಿಯನ್ನು ಅದಕ್ಕೆ ಸರಿಹೊಂದುವಂಥ ರೀತಿಯಲ್ಲಿ ನಾವು ಕೆಲಸವನ್ನು ಮಾಡಬೇಕಾಗಿದೆ.

5.45 ಪಿ. ಎಂ.

ಸರಿಯಾಗಿ ಮಂತ್ರಿಮಂಡಲದಲ್ಲಿ ಇರುವಂತಹ ಎಲ್ಲಾ ಮಂತ್ರಿಗಳೂ ನಿಷ್ಠೆಯಿಂದ, ದಕ್ಷತೆಯಿಂದ ಅವರ ತೀರ್ಮಾನದಂತೆ ಕೆಲಸ ಮಾಡಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಮಾಡುತ್ತಾರೆ ಅವರ ಜವಾಬ್ದಾರಿ, ಅದು ಅವರ ಹೇಳಿಕೆ. ಆದ್ದರಿಂದ ಇದಕ್ಕೂ ಅದಕ್ಕೂ ಸಂಬಂಧ ಇಲ್ಲ ಎನ್ನುವ ರೀತಿಯಲ್ಲಿ ಏನಾದರೂ ನಮ್ಮ ಮಂತ್ರಿಗಳು ಕೆಲಸ ಮಾಡುವುದಾದರೆ ನಮ್ಮಲ್ಲಿ 40 ಜನ ಅಲ್ಲ, 180 ಜನ ನಮ್ಮ ಪಕ್ಷದವರು ಸದಸ್ಯರುಗಳು ಯಾರು ಇದ್ದಾರೆ ಅಷ್ಟೂ ಜನ

ಮಂತ್ರಿಗಳಾದರೂ ಕೂಡ ಏನೂ ಕೆಲಸ ಆಗುವುದಿಲ್ಲ. Too many cooks spoil the broth ... ಎಂದು ಆಗುತ್ತಿದೆ.

ಆದರೆ ನಾವು ಒಂದು ನಿಷ್ಠಾವಂತ ದಕ್ಷವಾದಂತಹ ಒಂದು ಆಡಳಿತವನ್ನು ಕೊಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ತೀವ್ರವಾದಂತಹ ತೀರ್ಮಾನಕ್ಕೆ ನಾವು ಬರಬೇಕಾಗುತ್ತದೆ. ಮಾನ್ಯ ಮಂತ್ರಿಗಳು ಏನು ಹೇಳುತ್ತಿದ್ದಾರೆ, ರಾಜ್ಯಕ್ಕೆ ಏನು ಸಂದೇಶವನ್ನು ಕೊಡುತ್ತಿದ್ದಾರೆ ಈ ಸದನದಲ್ಲಿ ಏನು ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಅದೇ ಹಾದಿಯಲ್ಲಿ ಪ್ರಗತಿಶೀಲರಾಗಿ, ಕ್ರಿಯಾಶೀಲರಾಗಿ ತೀವ್ರತೆಯಿಂದ ಕೆಲಸ ಮಾಡಬೇಕು. ಅದು ಮಾಡುವುದಕ್ಕೆ ಏನು ಮಾಡಿದ್ದಾರೆ? ಅವರ ಶಕ್ತಿ, ಅವರ ಪ್ರಭಾವ ಅವರ ನಿಷ್ಠೆ, ಅವರ ದಕ್ಷತೆ ಇಲ್ಲಿ ಪ್ರದರ್ಶನ ಆಗಬೇಕೇ ವಿನಹ, ಇಲ್ಲಿ ಪ್ರದರ್ಶನ ಆದಾಗ ನಗರಾದ್ಯಾಂತ, ರಾಜ್ಯದಾದ್ಯಂತ ಜನತೆಗೆ ಮನುಷ್ಯರಿಗೆ ನೆಮ್ಮದಿ ಆಗುತ್ತದೆ. ಆ ಪ್ರದರ್ಶನ ಇಲ್ಲಿ ಆಗುತ್ತಾ ಇಲ್ಲ. ಅದು ಮಾಡಬೇಕು. ಮಾನ್ಯ ಮುಖ್ಯಮಂತ್ರಿಗಳು ಸರಿಯಾದ ಉಸ್ತುವಾರಿಯನ್ನು ಇಟ್ಟುಕೊಳ್ಳಬೇಕು. ಯಾರ‍್ಯಾರಿಗೆ ಯಾವ್ಯಾವ ಜವಾಬ್ದಾರಿಯನ್ನು ಕೊಟ್ಟಿದ್ದಾರೆ, ಆ ಜವಾಬ್ದಾರಿಯ ವಿಷಯದಲ್ಲಿ ತೀವ್ರವಾದ ಒಂದು ತರಬೇತಿಯನ್ನು ಮಾಡಬೇಕು. ರಾತ್ರಿ ಹಗಲು ಓದಬೇಕು. ರಾತ್ರಿ ಹಗಲು ಬರೆಯಬೇಕು. ರಾತ್ರಿ ಹಗಲು ಅವರು ಸಿಬ್ಬಂದಿ ಜೊತೆಯಲ್ಲಿ ಯೋಚನೆ ಮಾಡಬೇಕು, ಚಿಂತನೆ ಮಾಡಬೇಕು. ನಿಷ್ಠಾವಂತ ನಾಗರೀಕರು ಇದ್ದಾರೆ. ಅವರ ಖಾತೆಯಲ್ಲಿ ಸಂಬಂಧಪಟ್ಟಂತಹವರನ್ನು, ಸದಸ್ಯರಲ್ಲಿ ಯಾರು ಇದ್ದಾರೆ ಇವರು ಅವರುಗಳನ್ನು ಬರಮಾಡಿಕೊಂಡು ಕೆಲಸ ಮಾಡಬೇಕು. ಅವರಲ್ಲಿ ಹೋಗಿ ಕುಳಿತುಕೊಳ್ಳಬೇಕು, ಕುಳಿತುಕೊಂಡು ಕೆಲಸ ಮಾಡಬೇಕು. ಈ ರೀತಿ ಕೆಲಸ ಮಾಡಿದಾಗ ಮಾತ್ರ ನಾವು ಇಂತಹ ಒಂದು ಆಡಳಿತವನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ, ನಿಷ್ಠಾವಂತ ಆಡಳಿತವನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದೇ ಇದ್ದರೆ ಬರೀ ಪೊಳ್ಳು ವಾದ ಇದ್ದ ಹಾಗೆ ಆಗುತ್ತದೆ. ಈ ಕೆಲಸ ಮಾಡುವುದು ಬೇಡ ಎನ್ನುವ ಮಾತನ್ನು ಹೇಳುತ್ತೇನೆ. ನಾವು ನಮ್ಮ ಆಡಳಿತ ವಿಷಯದಲ್ಲಿ ವಿರೋಧ ಪಕ್ಷದವರು ಚಕಾರ ಎತ್ತುವುದಕ್ಕೆ ಅವಕಾಶ ಮಾಡಬಾರದು. ಸಣ್ಣ ಬೆರಳನ್ನೂ ತೋರಿಸುವುದಕ್ಕೆ ಅವಕಾಶ ಮಾಡಬಾರದು. ಈ ರೀತಿಯಲ್ಲಿ ಮಾಡಿದಾಗ ಮಾತ್ರ ನಾವು ಕೆಲಸ ಮಾಡುವುದಕ್ಕೆ ಆಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ನಾವು ಬಾಯಿಗೆ ಬಟ್ಟೆ ಹಾಕಿಕೊಂಡು ಕುಳಿತುಕೊಳ್ಳಬೇಕೇ? ವಿರೋಧ ಪಕ್ಷದವರು ನಮ್ಮ ಬಗ್ಗೆ ಏನೂ ಮಾತನಾಡುವುದಕ್ಕೆ ಅವಕಾಶ ಕೊಡಬಾರದು ಎಂದು ಹೇಳಿದಿರಿ. ನಾವು ನಮ್ಮ ಬಾಯಿಯನ್ನು ಹೊಲೆದುಕೊಂಡು ಕುಳಿತುಕೊಳ್ಳಬೇಕು ಎಂದು ಅನಂತ ಕೃಷ್ಣ ಹೇಳುತ್ತಾ ಇರುವುದು.

ಶ್ರೀ ಎ. ಕೆ. ಅನಂತಕೃಷ್ಣ : ಮಾನ್ಯ ವಾಟಾಳ್ ನಾಗರಾಜ್‌ರವರು ನಾನು ಹೇಳಿದ್ದನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಲಿಲ್ಲ ಎಂದರೆ ಹೇಗೆ? ಅವರು ನನ್ನ ಒಳ್ಳೆಯ ಸ್ನೇಹಿತರು. ನಾನು ಹೇಳಿದ್ದುದು ನಮ್ಮ ನಡವಳಿಕೆ ಯಾರೂ ನಮ್ಮ ಕಡೆ ಬೆರಳು ತೋರಿಸುವ ಹಾಗೆ ಇರಬಾರದು. ಚಕಾರ ಎತ್ತುವುದಕ್ಕೆ ಅವಕಾಶ ಇರಬಾರದು ಎಂದು ಹೇಳಿದ್ದೇನೆ. ಅದು ಆಗದ ಹಾಗೆ, ಅವರು ಚಕಾರ ಹೇಳದ ಹಾಗೆ ಇರಬೇಕು ಎಂದು ಹೇಳಿದೆ. ತಮಗೆ ವ್ಯಕ್ತಿ ಸ್ವಾತಂತ್ರ್ಯವಾಗಲಿ ಈ ಸದನದಲ್ಲಿ ಸ್ವಾತಂತ್ರ್ಯವಾಗಲಿ ಅದನ್ನು ಮುಟ್ಟುಗೋಲು ಹಾಕಬೇಕು ಎಂದು ಹೇಳಲಿಲ್ಲ. ನಾವು ಮಾಡದೇ ಇದ್ದಾಗ ನೀವು ಕೇಳಬೇಕಾಗುತ್ತದೆ. ಅದು ನಿಮ್ಮ ಕರ್ತವ್ಯ. ಆ ಕೆಲಸವನ್ನು ನೀವು ಮಾಡದೇ ಹೋದರೆ ನೀವು ಕರ್ತವ್ಯ ಲೋಪವನ್ನು ಮಾಡಿದ ಹಾಗೆ ಆಗುತ್ತದೆ. ಅದನ್ನು ನಾನು ಹೇಳುತ್ತಿದ್ದೇನೆ. ದಯವಿಟ್ಟು ನಾನು ಹೇಳುವುದನ್ನು ಕೇಳಿ. ನಿಮ್ಮ ಹಾಗೆ ನನಗೆ ಕನ್ನಡ ಮಾತನಾಡುವುದಕ್ಕೆ ಬರದೇ ಇರಬಹುದು. ಇಂಗ್ಲೀಷ್‌ನಲ್ಲಿ ಹೇಳಬೇಕು ಎಂದರೆ ಇನ್ನೂ

ಚೆನ್ನಾಗಿ ಹೇಳುತ್ತೇನೆ. ಆದರೆ ಕನ್ನಡದಲ್ಲಿ ಹೇಳಬೇಕು ಎಂದು ನೀವು ಹೇಳುವ ಕಾರಣದಿಂದ ಹೇಳುತ್ತಿದ್ದೇನೆ.

ಶ್ರೀ ವಾಟಾಳ್ ನಾಗಾಛ್ : ಜರ್ಮನ್ ಭಾಷೆಯಲ್ಲಿ ಮಾತನಾಡಿ, ನಮಗೆ ಏನಾಗಬೇಕು. ಜರ್ಮನ್ ಭಾಷೆಯಲ್ಲಿ ಹೇಳಿ ಯಾರು ಬೇಡ ಎನ್ನುತ್ತಾರೆ. ರಾಜ್ಯದ ಹಣೆಬರಹ. ಹೀಗೆ ಇರಬೇಕಾದರೆ ನಾವು ಏನು ಮಾಡುವುದಕ್ಕಾಗುತ್ತದೆ?

ಶ್ರೀ ನಾರಾಯಣ ಸ್ವಾಮಿ : ಮಾನ್ಯ ವಾಟಾಳರಿಗೆ ಭಯಪಟ್ಟು ಮಾತನಾಡಬೇಡಿ. ಕರ್ನಾಟಕ ರಾಜ್ಯಕ್ಕೆ ಭಯಪಟ್ಟು ಮಾತನಾಡಿ.

ಶ್ರೀ ಎ. ಕೆ. ಅನಂತಕೃಷ್ಣ : ಆಯವ್ಯಯಪಟ್ಟಿಯಲ್ಲಿ private investment in Government Enterprises .. ಎಂದು ಬಂದಿದೆ. ಕೇಂದ್ರದವರೂ ಕೂಡ ಅನೇಕ ಸಲ ಇರುವ ಇನ್‌ವೆಸ್ಟ್‌ಮೆಂಟನ್ನು ಖಾಸಗಿಯವರಿಗೆ ಬಿಟ್ಟುಕೊಡುವ ರೀತಿಯಲ್ಲಿ ಮಾಡುವುದಕ್ಕೆ ಯೋಚನೆ ಮಾಡುತ್ತಿದ್ದಾರೆ. ಆ ವಿಷಯ ನಾನು ಪ್ರಸ್ತಾಪ ಮಾಡುವುದಿಲ್ಲ. ಆದರೆ ನಾನು ನಮ್ಮ ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳುತ್ತೇನೆ. ನಮ್ಮ ರಾಜ್ಯ ಸರ್ಕಾರದ ಯಾವುದೇ ಒಂದು ಕೈಗಾರಿಕೆ ಇರಲಿ ಅವನ್ನು ನೀವು ನಿಭಾಯಿಸುವ ದಿಸೆಯಲ್ಲಿ ಸತತವಾಗಿ ಪ್ರಯತ್ನ ಮಾಡಬೇಕು. ಆ ಇಂಡಸ್ಟ್ರಿಯಲ್ ಮಿನಿಸ್ಟರ್ ಎಂದು ತಾವು ಯಾರಿಗೆ ಹೇಳುತ್ತೀರಿ, ತಾವು ಯಾರಿಗೆ ನೇಮಕ ಮಾಡಿದ್ದೀರಿ. ಸ್ಮಾಲ್ ಸ್ಕೇಲ್ ಇಂಡಸ್ಟ್ರಿ ಎಂದು ಮಾಡಿದ್ದೀರಿ ಅವರು ಈ ಕೈಗಾರಿಕೆ ಏನು ಎನ್ನುವುದನ್ನು ಮೊದಲು ಅಭ್ಯಾಸ ಮಾಡಬೇಕು. ರಾಜ್ಯ ಮಟ್ಟದಲ್ಲಿ ರಾಜ್ಯ ಸರ್ಕಾರದ ಒಂದು ಕೈಗಾರಿಕೆ ರಾಜ್ಯ ಸರ್ಕಾರದ ಪಬ್ಲಿಕ್ ಸೆಕ್ಟರ್‌ನಲ್ಲಿ ಇದೆ ಎಂದರೆ ಆ ಪಬ್ಲಿಕ್ ಸೆಕ್ಟರ್ ಏನು ಎನ್ನುವುದನ್ನು ತೀವ್ರವಾಗಿ ಅಭ್ಯಾಸಮಾಡಬೇಕು. ಯಾವ ತರಹ ಇದನ್ನು ಅಭ್ಯಾಸ ಮಾಡಿ ಹೇಗೆ ನಡೆಸಿದರೆ ಈ ರಾಜ್ಯ ಸರ್ಕಾರದ ಕೈಯಲ್ಲಿ ಅದರ ನಿಯಂತ್ರಣದಲ್ಲಿ ಈ ಕೈಗಾರಿಕೆ ಅಭಿವೃದ್ಧಿ ಹೊಂದುವುದಕ್ಕೆ ಸಾಧ್ಯವಾಗುತ್ತದೆ. ಯಾವುದು ನಷ್ಟ ಹೊಂದುತ್ತಿದೆ. ನಷ್ಟವನ್ನು ಅನುಭವಿಸುತ್ತಿದೆ. ಆ ನಷ್ಟದಲ್ಲಿ ಪಾರು ಆಗುವುದಕ್ಕೆ ಏನು ಮಾಡಬೇಕು ಎಂದು ಅದರ ಅಭ್ಯಾಸ ಮಾಡಬೇಕು. ಪ್ರೈವೆಟೈಸೇಷನ್ ಎಂದು ಹೇಳಿ ನಿಮ್ಮ ಕಿವಿಗೆ ಬಿದ್ದ ತಕ್ಷಣ ಅದನ್ನು ತಲೆಗೆ ಹಾಕಿಕೊಂಡ ತಕ್ಷಣ ಅದರ ವಿಷಯವಾಗಿ ತೀರ್ಮಾನ ಮಾಡುವುದು ತಮ್ಮ ಜವಾಬ್ದಾರಿಯನ್ನು ನೀವು ಕೈಬಿಟ್ಟ ಹಾಗೆ ಆಗುತ್ತದೆ ಎನ್ನುವ ಮಾತನ್ನು ಹೇಳುತ್ತಿದ್ದೇನೆ.

ಶ್ರೀ ವೈ. ಕೆ. ರಾಮಯ್ಯ : ಮಾನ್ಯ ಅಧ್ಯಕ್ಷರೆ, ನೀವು ಅವಕಾಶವನ್ನು ಕೊಡುವುದಾದರೆ ಒಂದೇ ಒಂದು ಮಾತನ್ನು ಹೇಳುತ್ತೇನೆ. ಈ ಸಾಲಿನಲ್ಲಿ ದುರದೃಷ್ಟವಶಾತ್ ಸಿ.ಪಿ.ಎಂ., ಸಿ.ಬಿ.ಐ.ನವರು ಯಾರೂ ಕುಳಿತುಕೊಂಡಿಲ್ಲ. ನಾನು 10 ವರ್ಷಗಳಿಂದ ನೋಡುತ್ತಿದ್ದೇನೆ. ಖಾಸಗೀಕರಣ ಮಾಡುವಂತಹ ಒಲವನ್ನು ಏನು ಮಾನ್ಯ ಮುಖ್ಯಮಂತ್ರಿಗಳು ತೋರಿದಾರೆ ಅದು ಸರಿಯಾದುದಲ್ಲ ಎನ್ನುವುದನ್ನು ಅವರು ಪ್ರಸ್ತಾಪ ಮಾಡುತ್ತಿದ್ದಾರೆ. ಆದರೆ ನಾನು ಮಾತನಾಡುವಾಗ ಇದು ಸರಿ ಏನೋ ಅಂತ ನನ್ನ ಭಾವನೆಗೆ ಬಂತು ನಾನು ಅದನ್ನು ಹೇಳಿದೆ ಸಾರ್ವಜನಿಕ ಉದ್ದಿಮೆಗಳಲ್ಲಿ ಇತ್ತೀಚಿನ ದಿವಸಗಳಲ್ಲಿ ನಡೆಯುತ್ತಿರುವಂತಹ ವ್ಯವಹಾರ, ಆಗುತ್ತಿರುವಂತಹ ನಷ್ಟ ಇದನ್ನು ಗಮನದಲ್ಲಿಟ್ಟುಕೊಂಡು ಇದನ್ನು ಸರಿಮಾಡಲಿಕ್ಕೆ ಸಾಧ್ಯವೇ ಅಲ್ಲ ಎನ್ನುವ ಪರಿಸ್ಥಿತಿ ಇರುವಾಗ ಖಾಸಗೀಕರಣಕ್ಕೆ ದೊರತಾದಂತಹ ಬೇರೆ ಮಾರ್ಗವನ್ನು ನಮ್ಮ ಸ್ನೇಹಿತರು ಯಾವುದನ್ನಾದರೂ ಸೂಚನೆ ಮಾಡುತ್ತಾರೋ ಎಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಎ. ಕೆ. ಅನಂತಕೃಷ್ಣ : ಅಲ್ಲಿಗೆ ಬರುತ್ತೇನೆ. ಬಂದಾಗ ಹೇಳುತ್ತೇನೆ. ನಾನು ಕೇವಲ opposition for opposition sake - ಆ ತರಹ ಮಾತನಾಡುವವನು ಅಲ್ಲ. ಸ್ವಲ್ಪ ಸಿದ್ಧಾಂತವನ್ನು ಅಭ್ಯಾಸ ಮಾಡಿದಂಥವನು. ಅದನ್ನು ನಾನು ಹೇಳುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ಸನ್ಮಾನ್ಯ ಅಧ್ಯಕ್ಷರೇ, ಸೋಪ್ ಫ್ಯಾಕ್ಟರಿಯಲ್ಲಿ ತಿಂಗಳುಗಳಿಗೆ ಒಂದು ಕೋಟಿ ರೂಪಾಯಿ ಲಾಸ್ ಆಗುತ್ತಿದೆ ಅದೇ ರೀತಿ ಕೆಎಸ್‌ಆರ್‌ಟಿಸಿ ಯಲ್ಲಿ ಲೂಟಿ ಆಗುತ್ತಿದೆ. ನಾನು ಮಾನ್ಯ ಹಿರಿಯ ಸದಸ್ಯರಾದಂತಹ ಅನಂತಕೃಷ್ಣರವರ ಹತ್ತಿರ ಕೇಳುವುದಕ್ಕೆ ಇಚ್ಛೆಪಡುವಂಥಾದ್ದು ಏನೆಂದರೆ ನೀವು ಖಾಸಗೀಕರಣವನ್ನು ಮಾಡುವುದು ಬೇಡ. ಆದರೆ, ನಿಮ್ಮ ಸರ್ಕಾರದಲ್ಲಿ ಪಬ್ಲಿಕ್ ಅಂಡರ್‌ಟೇಕಿಂಗ್ಸ್ ಯಾವ ಸ್ಥಿತಿಗೆ ಬಂದಿದೆ. ನಿಮಗೆ ಅವುಗಳನ್ನು ಲಾಭದಾಯಕವಾಗಿ ನಡೆಸುವಂತಹ ಶಕ್ತಿ ಇದೆಯೇ? ಸಾಮಾನ್ಯ ರೈತನಿಗೆ ನೆರವು ಕೊಡುವುದಕ್ಕೆ ಆಗದೆ ಇರುವಂತಹ ಈ ಕಾಲದಲ್ಲಿ ಸಾವಿರಾರು ಕೋಟಿ ಹಾಕಿ ಸೋಪ್ ಫ್ಯಾಕ್ಟರಿಯಲ್ಲಿ ಒಂದು ತಿಂಗಳಿಗೆ ಒಂದು ಕೋಟಿ ರೂಪಾಯಿ ಲಾಸ್ ಆಗುತ್ತಿದೆ. ಅದನ್ನು ತಡೆಯುವುದಕ್ಕೆ ಯಾವುದಾದರೂ ಪ್ರಾಮಾಣಿಕ ಪ್ರಯತ್ನ ಆಗಿದೆಯೇ? ನಾವು ಇಲ್ಲಿ ಕುಳಿತುಕೊಂಡು ಟೀಕೆಯನ್ನು ಮಾಡುತ್ತಿದ್ದೇವೆ. ಆದರೆ ನೀವು ಅಧಿಕಾರಕ್ಕೆ ಬಂದನಂತರ ಜನ ಅಧಿಕಾರವನ್ನು ಕೊಟ್ಟ ಮೇಲೆ ಇಲ್ಲಿ ಇಂತಹ ಸಾಧನೆಯನ್ನು ಮಾಡಿದ್ದೇವೆ, ಪಬ್ಲಿಕ್ ಅಂಡರ್ ಟೇಕಿಂಗ್ಸ್‌ಅನ್ನು ಲಾಭದಾಯಕವಾಗಿ ತರುವಂತಹ ಪ್ರಯತ್ನ ಮಾಡುತ್ತಿದ್ದೇವೆ., ಜನಜೀವನ ಅನುಕೂಲಕರವಾಗಿ ನಡೆಯುತ್ತಿದೆ ಎಂದು ಏನೇನೋ ಹೇಳಿದರೆ ಹೇಗಾಗುತ್ತದೆ?

ಶ್ರೀ ಎ. ಕೆ. ಅನಂತಕೃಷ್ಣ : ನಿಮಗೆ ಅವಕಾಶವನ್ನು ಕೊಟ್ಟಾಗ, ನೀವು ಭಾಷಣವನ್ನು ಮಾಡಿ. ನಾನು ಹೇಳುತ್ತಿರುವುದನ್ನು ನಿಮಗೆ ಕೇಳುವುದಕ್ಕೆ ತಾಳ್ಮೆ ಇಲ್ಲದ ಮೇಲೆ ನಿಮ್ಮ ಮಾತನ್ನು ನಾನು ಏತಕ್ಕೆ ಕೇಳಬೇಕು ಹೇಳಿ? ಸ್ವಲ್ಪ ತಾಳ್ಮೆ ಇರಬೇಕು. ನಾನು ನನ್ನ ಅಭಿಪ್ರಾಯವನ್ನು ಕೊಡುತ್ತಿದ್ದೇನೆ. ನಾನು ಸರ್ಕಾರದ ನಿಲುವು ಏನಿದೆ, ಬದಲಾವಣೆ ಏನು ಆಗುತ್ತಿದೆ ಅದರ ಪರವಾಗಿ ನಾನು ಮಾತನಾಡುತ್ತಿಲ್ಲ. ಮೂಲಭೂತವಾಗಿ ವಿರೋಧವಾಗಿಯೇ ಮಾತನಾಡುತ್ತಿದ್ದೇನೆ. ಆ ಪ್ರಶ್ನೆಯನ್ನು ನನಗೆ ಏತಕ್ಕೆ ಹಾಕುತ್ತೀರಾ? ನಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ನಾವು ಖಾಸಗೀಕರಣ ಮಾಡಿಬಿಡುತ್ತೇನೆ ಎಂದು ನಾವು ಹೇಳಿಲ್ಲ. ಸರ್ಕಾರದಲ್ಲಿರುವ ಉದ್ದಿಮೆಗಳನ್ನೆಲ್ಲಾ ಕೈಬಿಡುತ್ತೇವೆಂದು ಹೇಳಿಲ್ಲ. ಇವತ್ತು ಅದು ನಷ್ಟವನ್ನು ಅನುಭವಿಸುತ್ತಿಲ್ಲ. ಬಹಳ ಕಾಲದಿಂದಲೂ ನಷ್ಟವನ್ನು ಅನುಭವಿಸಿಕೊಂಡು ಬಂದಿದೆ. ಜನತಾಪಕ್ಷ, ಜನತಾದಳ ಮತ್ತು ತಾವು ಸೇರಿದಾಗಲೂ ನಷ್ಟಪಡುತ್ತಿದೆ ಅಂದ ಮೇಲೆ ನಾವೆಲ್ಲರೂ ಅದಕ್ಕೆ ಕಾರಣಕರ್ತರಾಗಿದ್ದೇವೆ. ಅದನ್ನು ನಾವು ಯಾವ ರೀತಿ ಸರಿಮಾಡುವುದಕ್ಕೆ ಸಾಧ್ಯ ಆಗುತ್ತದೆ ಎನ್ನುವ ನನ್ನ ಅಭಿಪ್ರಾಯ ಹೇಳುತ್ತಿದ್ದೇನೆ. ಖಾಸಗಿಯವರ ಕೈಗೆ ಹೋದ ಮೇಲೆ ನಮ್ಮ ನಿಯಂತ್ರಣ ಏನಿದೆ? ರಾಜ್ಯದ ನೆಲ ಕೊಡಬೇಕು, ರಾಜ್ಯದ ಶೆಡ್‌ಗಳು ಕೊಡಬೇಕು, ರಾಜ್ಯದ ಮಾರ್ಕೆಟಿಂಗ್ ಸವಲತ್ತು ಕೊಡಬೇಕು. ರಾಜ್ಯದ ಹಣ ಕೊಡಬೇಕು, ರಾಷ್ಟ್ರದ ಹಣವನ್ನೆಲ್ಲ ಕೊಡಬೇಕು, ಅವರೆಲ್ಲಾ ಶೋಷಣೆ ಮಾಡಿಕೊಳ್ಳುತ್ತಾ ಹೋಗುತ್ತಿರಬೇಕು. ನಮ್ಮ ಕೈಯಿಂದ ನಷ್ಟ ಆಷ್ಟಾಗಿಲ್ಲ. ಆದರೆ ಸಹಸ್ರಾರು ಕೋಟಿ ರೂಪಾಯಿಯನ್ನು ಬೇರೆಯವರ ಕೈಗೆ ಕೊಟ್ಟು ಈ ರಾಷ್ಟ್ರ ನಿರ್ನಾಮವಾಗಿಬಿಟ್ಟರೆ; ಆಗ ನಾವು ಯೋಗ್ಯರಾಗಿರುತ್ತೇವೆ. ಅವರು ಅಯೋಗ್ಯರಾಗುತ್ತಾರೆ. We have to look at the whole thing in the totality of our national life, in not just isolation.

ಈ ಕಡೆ ತಪ್ಪು ಮಾಡಿದವರನ್ನು ಬಿಡೋಣ. ಬೇರೆಯವರು ತಪ್ಪು ಮಾಡಿದಾಗ ಕೈಬಿಡೋಣ ಅಂತ ಅಲ್ಲ. What is the ultimate result whether it is privatisation or

nationalisation. Who is the ultimate victim? It is the commonman or how shall we say it is common man, future and progress of the country that is vital may be we made mistakes, may be we continued to make mistakes.

ನಾನು ಹೇಳುವುದು ಇಷ್ಟೆ. ರಾಜ್ಯ ಸರ್ಕಾರದಿಂದ ನಮ್ಮ ಇನ್‌ವೆಸ್ಟ್‌ಮೆಂಟ್ ಏನಿದೆ ಅದನ್ನು ನಾವು ಖಾಸಗೀಯವರಿಗೆ ಡಿಸ್‌ಇನ್‌ವೆಸ್ಟ್ ಮಾಡಿ ಅವರಿಗೆ ಇನ್‌ವೆಸ್ಟ್ ಮಾಡುವುದಕ್ಕೆ ಅನುಕೂಲ ಮಾಡಿದರೆ ಅವರು ಕೇವಲ 10 ಪರ್ಸೆಂಟ್ 15 ಪರ್ಸೆಂಟ್ ಇನ್‌ವೆಸ್ಟ್ ಮಾಡಿದರೂ ಎಂದರೆ ಇಡೀ ಉದ್ಯಮದ ಮೇಲೆ ಅವರ ನಿಯಂತ್ರಣ ಇರುತ್ತದೆ ನಮ್ಮದು ಇರುವುದಿಲ್ಲ. It is not necessary that they should have 51% shares, i.e, investment. ಇದು ಬಹಳ ಮೂಲಭೂತವಾಗಿರುವುದರಿಂದ ನಾನು ಹೇಳುತ್ತಿದ್ದೇನೆ. ಒಂದು ಮಾತು ಇದರಲ್ಲಿ ಹೇಳಿದ್ದಾರೆ. ನಮ್ಮ ರಾಜ್ಯದ ಉದ್ದಿಮೆಗಳು ಪ್ರಾರಂಭದಲ್ಲಿ ಪ್ರಮುಖ ಸ್ಥಾನ ಪಡೆದಿದ್ದು ಇವೊತ್ತು ಎಂಟನೇ ಸ್ಥಾನಕ್ಕೆ ಬಂದಿದೆ. ಇದಕ್ಕೆ ಕಾರಣವೇನು? ಕೇವಲ ಆ ಉದ್ದಿಮೆಗಳು ನಷ್ಟ ಪಡುತ್ತಿವೆ ಎಂಬ ಕಾರಣಕ್ಕೆಂದೆ? ನಾವು ಉದ್ದಿಮೆಗಳಲ್ಲಿ ಮೊದಲನೆಯ ಸ್ಥಾನಕ್ಕೆ ಯಾವತ್ತು ಬಂದಿದ್ದೇವೆ? ಯಾವ ಕಾರಣಕ್ಕಾಗಿ ಬಂದಿದ್ದೇವೆ? ಡಾ॥ ಸರ್. ಎಂ. ವಿಶ್ವೇಶ್ವರಯ್ಯನವರ ಕಾಲದಿಂದಲೂ ನಮ್ಮ ರಾಜ್ಯದಲ್ಲಿ ಬಹಳಷ್ಟು ದೊಡ್ಡ - ದೊಡ್ಡ ಉದ್ದಿಮೆಗಳೆಲ್ಲವೂ ರಾಜ್ಯ ಸರ್ಕಾರದ ನಿಯಂತ್ರಣದಲ್ಲಿತ್ತು. ಅವುಗಳನ್ನು ರಾಜ್ಯ ಸರ್ಕಾರ ಸ್ಥಾಪಿಸಿತ್ತು. ಅವುಗಳು ಬಂದು ವ್ಯವಸ್ಥಿತವಾದಂತಹ ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದವು. ಇದು ಆರ್ಥಿಕ ಮೂಲ ಸಿದ್ಧಾಂತ. ಆದುದರಿಂದ, ದಕ್ಷತೆಯಿಂದ, ನಿಷ್ಠೆಯಿಂದ, ರಾಷ್ಟ್ರಪ್ರೇಮದಿಂದ, ಜನತೆಯ ಮೇಲೆ, ಸಮಾಜದ ಮೇಲಿನ ಪ್ರೇಮ, ವಿಶ್ವಾಸದಿಂದ, ಅಭಿಮಾನದಿಂದ ಸರ್ವತೋಮುಖವಾದಂಥ ಪ್ರಗತಿಯನ್ನು ಸಾಧಿಸಬೇಕೆಂದು ಏನು ಉದ್ದಿಮೆಗಳನ್ನು ಪ್ರಾರಂಭ ಮಾಡಿ ಬೆಳೆಸಿಕೊಂಡು ಬಂದರು ಅದರಿಂದ ನಾವು ಪ್ರಥಮ ಸ್ಥಾನವನ್ನು ರಾಷ್ಟ್ರಮಟ್ಟದಲ್ಲಿ ಪಡೆದಿದ್ದೆವು. ಅವೆಲ್ಲವನ್ನೂ ಕೈಬಿಟ್ಟು ಮೌಲ್ಯಗಳು ಕುಸಿದ ನಂತರ, ನಾವು ಉದಾಸೀನರಾಗಿ ನಮ್ಮ ಸ್ವಾರ್ಥಕ್ಕೆ ಅಲ್ಲೊಂದು ಮ್ಯಾನೇಜ್‌ಮೆಂಟ್‌ಅನ್ನು ಕೈಗೆ ತೆಗೆದುಕೊಂಡಿದ್ದೆವು. ಇಲ್ಲದೆ ಬೇಕಾದವರಿಗೆ ಮ್ಯಾನೇಜ್‌ಮೆಂಟ್ ವಹಿಸಿದ್ದೇವೆ. ಅದು ಜಾತಿ ಹೆಸರಿನಲ್ಲೋ, ನಮ್ಮವರು ಎನ್ನುವ ಹೆಸರಿನಲ್ಲೋ, ಇಲ್ಲವೆ ಅವರನ್ನು ಇನ್ನೊಂದು ಕಡೆ ಹಾಕಿ ಕಳುಹಿಸಿಕೊಡೋಣ ಎನ್ನುವ ಕಾರಣಕ್ಕೋ ನಿರುತ್ಸಾಹಿಗಳನ್ನೆಲ್ಲಾ ಮೇಲಧಿಕಾರಿಗಳನ್ನಾಗಿ ಮಾಡಿದ್ದೇವೆ. ಯಾವುದೇ ರೀತಿಯಾದಂಥ ತರಬೇತಿ ಪಡೆಯದಂಥ ಒಬ್ಬ ಅಧಿಕಾರಿಗೆ ಅಲ್ಲಿ ಅಧಿಕಾರ ಕೊಟ್ಟು ಕೂರಿಸಿದ್ದೇವೆ. ಅದಕ್ಷರಾದಂಥ ಅಧಿಕಾರಿಗಳನ್ನು ಎಲ್ಲೆಲ್ಲಿ ಹಾಕಿದ್ದೇವೆಯೋ ಮತ್ತು ನಮ್ಮ ನಿಯಂತ್ರಣ ಅವರ ಮೇಲೆ ಏನು ಇರಬೇಕಾಗಿತ್ತೋ ಅದನ್ನು ಬಿಟ್ಟು ಮೇಲಿನ ಅಧಿಕಾರಿಗಳನ್ನು ಅವರ ಮೂಲಕ ನಮ್ಮ ಸ್ವಾರ್ಥಕ್ಕೆ, ನಮ್ಮ ಸ್ವಂತ ಜೀವನಕ್ಕೆ, ನಮ್ಮ ರಾಜಕಾರಣಕ್ಕೆ ದುರುಪಯೋಗಪಡಿಸಿಕೊಂಡು ಹೋಗಿದ್ದೇವೆ. ಆದುದರಿಂದ, ರಾಜ್ಯದ ಪ್ರಮುಖವಾದಂಥ ಉದ್ದಿಮೆಗಳೆಲ್ಲವೂ ಕುಸಿದು ಹೋಗಿವೆ. ಅದು ಕುಸಿಯುತ್ತಿರಬೇಕಾದರೆ ಯಾವ ಐಎಎಸ್ ಆಫೀಸರ್, ಐಪಿಎಸ್ ಆಫೀಸರ್, ಕೆಎಎಸ್ ಆಫೀಸರ್ ಯಾರು ಕಾರಣಕರ್ತರಾಗಿದ್ದರೋ ಅವರ ಮೇಲೆ ಯಾವುದೇ ರೀತಿಯಾದಂತಹ ಶಿಸ್ತಿನ ಕ್ರಮ ನಾವು ತೆಗೆದುಕೊಂಡಿಲ್ಲ. ಅವರು ಅದ್ಯಕ್ಷರಾಗಿ, ಲಂಚಕೋರರಾಗಿ, ಅಕ್ರಮವಾಗಿ ನಡೆದುಕೊಂಡಿದ್ದರೆ ಅವರಿಗೆ ಭಡ್ತಿ ಕೊಟ್ಟು ಬೇರೆ ಕಡೆಗೆ ಕಳುಹಿಸಿಕೊಟ್ಟಿದ್ದೇವೆಯೇ ವಿನಹ ಅವರ ಮೇಲೆ ನಾವು ಯಾವ ರೀತಿಯಾದಂತಹ ಕ್ರಮ ತೆಗೆದುಕೊಂಡಿಲ್ಲ, ಅವರ ಮೇಲೆ ಅಕೌಂಟಬಿಲಿಟಿ ಹಾಕಿಲ್ಲ, ಅವರನ್ನು ಜವಾಬ್ದಾರರನ್ನಾಗಿ ಮಾಡಿಲ್ಲ. ಬದಲಿಗೆ ಅವರನ್ನು ಆಯಕಟ್ಟಿನ ಒಳ್ಳೊಳ್ಳೆ ಸ್ಥಳಗಳಿಗೆ ಕಳುಹಿಸಿಕೊಡುತ್ತಾ ಬಂದಿದ್ದೇವೆ. ನಮ್ಮಲ್ಲಿ ಆಡಳಿತದ ಒಂದು ಪದ್ಧತಿ ಏನಿದೆ, ಆಡಳಿತ ವೈಖರಿ ಏನಿದೆ, ಯಾರು ಅನ್ಯಾಯ, ಅಕ್ರಮ ಮಾಡುತ್ತಾರೋ, ಅಶಿಸ್ತಿನಿಂದ ನಡೆದುಕೊಂಡು ಅದ್ಯಕ್ಷರಾಗಿ ಕೆಲಸ ಮಾಡುತ್ತಾರೋ, ಯಾರು ನಿಷ್ಠೆ, ಪ್ರಾಮಾಣಿಕವಾಗಿ ಕೆಲಸ

ಮಾಡುವುದಿಲ್ಲವೋ ರಾಜ್ಯಪ್ರೇಮ, ಸಮಾಜ ಪ್ರೇಮಕ್ಕೆ ಯಾರಿಗೆ ಸಂಬಂಧವಿಲ್ಲವೋ ಅಂಥವರನ್ನು ಅಲ್ಲಿಗೆ ಹಾಕಬಾರದು, ಅಂತಹ ಅಧಿಕಾರಿಗಳು ಅಲ್ಲಿ ಇದ್ದಾರೆಂದರೆ ಅವರನ್ನು ಸರಿಯಾದ ಶಿಕ್ಷೆಗೆ ಗುರಿಪಡಿಸಿ, ಸೂಕ್ತ ತರಬೇತಿ ಪಡೆದಂಥ ಅಧಿಕಾರಿಗಳನ್ನು ಅಲ್ಲಿ ಹಾಕಿ, ಆ ಉದ್ದಿಮೆಗಳ ಮೇಲೆ ನಾವು ನಿಯಂತ್ರಣವಿಟ್ಟು, ಸಮಯಕ್ಕೆ ಸರಿಯಾಗಿ ಕೆಲಸ ಮಾಡಿದ್ದೇ ಆದರೆ ಉದ್ದಿಮೆಗಳು ಮೇಲಕ್ಕೆ ಬರಲು ಸಾಧ್ಯವಿದೆ. ಏಕೆ ಸಾಧ್ಯವಾಗುವುದಿಲ್ಲ? ಜನತೆಯ ಸಾವಿರಾರು ಕೋಟಿ ರೂಪಾಯಿಗಳ ಸ್ವತ್ತನ್ನು ತೆಗೆದುಕೊಂಡು ಇಂತಹ ಅಧ್ಯಕ್ಷರಾದಂಥ ಅಧಿಕಾರಿಗಳಿಗೆ ಕೊಟ್ಟು, ಈ ಉದ್ದಿಮೆ ಸರಿಯಾಗಿಲ್ಲ, ಸರ್ಕಾರ ನಡೆಸುವುದಕ್ಕೆ ಸಾಧ್ಯವಿಲ್ಲ, ರಾಷ್ಟ್ರೀಕರಣ ಸರಿಯಾಗಿಲ್ಲವೆಂದು, ಈ ಒಂದು ಮೂಲ ಧ್ಯೇಯವನ್ನು ನಾವು ಕೂಡ ಕೈಬಿಡಬೇಕೆಂದರೆ ನಾವು ಬಹಳ ಅಮಾನುಷವಾದ ಕೆಲಸ ಮಾಡುತ್ತಿದ್ದೇವೆಂದು ಅನ್ನಿಸುತ್ತದೆ. ರಾಷ್ಟ್ರಪ್ರೇಮದಿಂದ ನಾವು ಕೆಲಸ ಮಾಡುತ್ತಿಲ್ಲ. ಸಮಾಜ ಪ್ರೇಮಿಗಳಾಗಿ ಕೆಲಸ ಮಾಡುತ್ತಿಲ್ಲವೆನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ನಮ್ಮಲ್ಲಿ ಅಂಥ ಸೂಕ್ತವಾದ ಅಧಿಕಾರಿಗಳು ಇಲ್ಲ ಎನ್ನುವುದಾದರೆ, ಆಡಳಿತಾಧಿಕಾರಿಗಳು ಇಲ್ಲವೆನ್ನುವುದಾದರೆ ಈ professionalisation, expertisation ಇಲ್ಲ ಎನ್ನುವುದಾದರೆ ಯಾವ ಸಮಾಜದಲ್ಲಿ ಈ professionalised, experts, Managers - ಜನರು ಸಾಕಷ್ಟು ಇದ್ದಾರೆ ಅವರನ್ನು ತಾವು on a contract basis, for a periods of 5 years, 10 years with adequate responsibility and accountability, ಅವರಿಗೆ ಕೆಲಸವನ್ನು ಕೊಟ್ಟು ಅವರಿಂದ ಕೆಲಸವನ್ನು ಮಾಡಿಸಿ. ಒಬ್ಬರಿಲ್ಲದಿದ್ದರೆ ನಾಲ್ಕು ಜನ ಅಂಥವರನ್ನು ಕರೆದುಕೊಂಡು ಬಂದು ಒಂದೊಂದು ಕಾರ್ಖಾನೆಗೆ, ಉದ್ದಿಮೆಗಳಿಗೆ ಅವರನ್ನು ನೇಮಕ ಮಾಡಿದರೆ ಯಾವುದಕ್ಕೆ ಆ ಉದ್ದಿಮೆ ಸರಿಯಾಗಿ ನಡೆಯುವುದಿಲ್ಲ ನೋಡಿ? ಖಾಸಗಿಯವರ ಕೈಯಲ್ಲಿಲ್ಲ. ಇದಕ್ಕಿಂತ ಹತ್ತು ಪಟ್ಟು ದೊಡ್ಡ ದೊಡ್ಡ ಉದ್ದಿಮೆಗಳು ಬೆಳೆದುಕೊಂಡು ಬರುತ್ತಿವೆ, ಅವರು ಮನುಷ್ಯರಲ್ಲವೆ? ಅವರೇನು ಉದ್ದಿಮೆಗಳನ್ನು ನಡೆಸತಕ್ಕ ಅಧಿಕಾರಿಗಳಲ್ಲವೆ? ನಮಲ್ಲಿ ಏಕೆ ಆ ರೀತಿ ನಡೆಸುವುದಕ್ಕಾಗುವುದಿಲ್ಲ? ನಮ್ಮಲ್ಲಿ ಸಮಯ ಬಂದಾಗ ಹಣವನ್ನು ಕೊಡುತ್ತೀರಿ, ಸಮಯ ಬಂದಾಗ ಗ್ಯಾರೆಂಟಿಯನ್ನು ಕೊಟ್ಟು ಬ್ಯಾಂಕಿನಿಂದ ಸಾಲವನ್ನು ಕೊಡಿಸತಕ್ಕ ಶಕ್ತಿ ಇದೆ, ನಮ್ಮ ಸರ್ಕಾರದ ಮೇಲೆ, ಈ ಉದ್ದಿಮೆಗಳ ಮೇಲೆ ನಿಯಂತ್ರಣವನ್ನಿಟ್ಟುಕೊಳ್ಳಲು ಈ ಸದನವಿದೆ, ಜನರ ಒಂದು ನೀತಿ ಇದ್ದರೂ ಸಹ ಏಕೆ ಆ ಮನಸ್ಸನ್ನು ಸೋಲಬೇಕಾಗಿದೆ. ಹ ರಿಹರ ಪಾಲಿ ಫೈಬರ್ಸ್ ಇರಲಿ, ಮೈಸೂರ್ ಸಿಮೆಂಟ್ ಇರಲಿ, ನಾವು ಅಲ್ಲಿನ ವಾಯುಮಾಲಿನ್ಯದ ವಿಷಯವಾಗಿರಲಿ ಅಥವಾ ಬೇರೆ ಯಾವುದೇ ವಿಷಯವಾಗಿರಲಿ ಅದನ್ನು ಗಮನಿಸತಕ್ಕವರಾಗಿದ್ದೇವೆ.

ಶ್ರೀ ಹೆಚ್. ಏಕಾಂತಯ್ಯ : ತಾವು ಯಾರಿಗೆ ಇದನ್ನು ಹೇಳುತ್ತಿದ್ದೀರಿ? ಇಲ್ಲಿ ಅಧಿಕಾರಿಗಳಿಲ್ಲ, ಮಂತ್ರಿಗಳಿಲ್ಲ, ಏನಾದರೂ ನನಗೆ ಹೇಳುತ್ತಿದ್ದೀರೋ ಅಥವಾ ಅಧ್ಯಕ್ಷರಿಗೆ ಹೇಳುತ್ತಿದ್ದೀರೋ?

ಶ್ರೀ ಎ. ಕೆ. ಅನಂತಕೃಷ್ಣ : ಹಿರಿಯ ಮಂತ್ರಿಗಳಿದ್ದಾರೆ.

Sri. H. Ekanthaiah : Are you satisfied?

Sri. A.K. Ananthkrishna : Whether I am satisfied or not, I want to make my point clear. I am satisfied in making my points clear.

ಶ್ರೀ ಬಿ. ಎಸ್. ಯಡಿಯೂರಪ್ಪ : ಚಪಲವನ್ನು ತೀರಿಸಿಕೊಳ್ಳಲು ಹೇಳುತ್ತಿದ್ದಾರೆ.

ಶ್ರೀ ಎ. ಕೆ. ಅನಂತಕೃಷ್ಣ : ನಾನು ಚಪಲ ತೀರಿಸಿಕೊಳ್ಳಲು ಶ್ರೀರಾಮ್, ಜೈರಾಮ್ ಎಂದು ಹೋಗುತ್ತಿಲ್ಲ. ನಾನು ನನ್ನ ರಾಷ್ಟ್ರಪ್ರೇಮದಿಂದ, ಸಮಾಜ ಪ್ರೇಮದಿಂದ, ಇಡೀ ರಾಷ್ಟ್ರದ ದೃಷ್ಟಿಯಿಂದ ಮಾತನಾಡುತ್ತಿದ್ದೇನೆ. ನನಗೆ ಆ ರೀತಿಯ ಚಪಲ ಚಟಗಳೇನೂ ಇಲ್ಲ, ನಾನು ತತ್ವಶೀಲನಾಗಿ ಮಾತನಾಡುತ್ತಿದ್ದೇನೆ, ಅದನ್ನು ನೀವು ನಂಬಿದರೆ ನಂಬಿ ಬಿಟ್ಟರೆ ಬಿಡಿ. ನೀವು ಕನ್ನಡ ಕನ್ನಡ ಎಂದು ಏಕೆ ಒಬ್ಬರೇ ಮಾತನಾಡುತ್ತೀರಿ, ನಿಮ್ಮ ಕಡೆ ಎಷ್ಟು ಜನರಿದ್ದಾರೆ? ನಿಮ್ಮ ಹಿಂದೆ ನಾಟಕವಾಡುವ ಜನರು ಜಾಸ್ತಿ ಇದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ನಾನೊಬ್ಬನೇ ಸಾಕಲ್ಲವೇ ನಿಮಗೆಲ್ಲಾ ವಿಚಾರಿಸಿಕೊಳ್ಳಲು;

ಶ್ರೀ ಎ. ಕೆ. ಅನಂತಕೃಷ್ಣ : ನನ್ನ ತತ್ವದ ದೃಷ್ಟಿಯಲ್ಲಿ ನಾನು ಒಬ್ಬನೇ ಇದ್ದೇನೆ. ಪರವಾಗಿಲ್ಲ. ಇವತ್ತಲ್ಲಾ ನಾಳೆಯಾದರೂ ಕೂಡ ನನ್ನ ದಾರಿಗೆ ಬಂದೇ ಬರ್ತೀರಿ. ನೀವು ಇಲ್ಲದಿದ್ದರೆ ಸಾರ್ವಜನಿಕರು ಬರುತ್ತಾರೆ, ನಾನು ಇಲ್ಲಿ ಶಾಶ್ವತವಾಗಿ ಗುತ್ತಿಗೆ ತೆಗೆದುಕೊಂಡು ಕುಳಿತುಕೊಂಡಿಲ್ಲ, ನಮ್ಮ ಜಾಗಕ್ಕೆ ಬೇರೆಯವರು ಬರುತ್ತಾರೆ, ನಮ್ಮ ಅಭಿಪ್ರಾಯ ನಮ್ಮ ಸಿದ್ಧಾಂತವನ್ನು ಒಪ್ಪಿಕೊಳ್ಳುವವರು ಬರುತ್ತಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ಸಿಂಧ್ಯಾರವರು ಈ ರೀತಿ ಹೇಳಿ ಹೇಳಿ ಅರ್ಧ ರಾಜ್ಯಗಳು ಈ ದೇಶದಿಂದ ಕಿತ್ತುಕೊಂಡು ಹೋಗಿದೆ, ಈಗಲಾದರೂ ಸ್ವಲ್ಪ ಮಾರ್ಪಾಟು ಮಾಡಿಕೊಳ್ಳಿ. ಎಂದು ಹೇಳುತ್ತಿದ್ದಾರೆ.

ಶ್ರೀ ಎ. ಕೆ. ಅನಂತಕೃಷ್ಣ : ಮಾನ್ಯ ಸಿಂಧ್ಯರವರು ನನ್ನ ಜೊತೆ ತರ್ಕ ಮಾಡಿಲ್ಲ. ಅವರ ಪರವಾಗಿ ತಾವು ವಕಾಲತ್ತನ್ನು ವಹಿಸಬೇಕಾದ ಅವಶ್ಯಕತೆ ಇಲ್ಲ.

(ಶ್ರೀ ಶಿವಾನಂದ ಕೌಜಲಗಿಯವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ನಮ್ಮ ರಾಜ್ಯದ ಹಿಡಿತದಲ್ಲಿರತಕ್ಕ ಉದ್ದಿಮೆಗಳಿಗೆ ಯಶಸ್ವಿಯನ್ನು ಕೋರತಕ್ಕ ಅಭಿಪ್ರಾಯ ಇದ್ದರೆ, ಸಾಕಷ್ಟು ಪ್ರಮಾಣದಲ್ಲಿ ಯುವಕರನ್ನು, ವಿದ್ಯಾವಂತರನ್ನು ತರಬೇತಿ ಕೊಡುವುದು, ತಯಾರು ಮಾಡುವುದು ಬಹಳ ಅವಶ್ಯಕತೆ ಇದೆ. ಹಾಗೆ ಮಾಡಿದರೆ ಇವತ್ತಲ್ಲದಿದ್ದರೂ ಇನ್ನು 2-3 ವರ್ಷಗಳಲ್ಲಿ ಆಡಳಿತ ವರ್ಗಗಳು ಯುವಕರನ್ನು ಉದ್ದಿಮೆಗಳಲ್ಲಿ ತೆಗೆದುಕೊಳ್ಳಲು ಸಾಧ್ಯವಾಗುತ್ತದೆ. ನಮ್ಮ ಸಿದ್ಧಾಂತ ಇವರಿಗೆ ತಿಳಿಸಿದ್ದೇ ಆದರೆ ಅವರು ನಡೆಸಿಕೊಂಡು ಹೋಗುವುದಕ್ಕೆ ಆಗುತ್ತದೆ. ಇಲ್ಲಿ ಒಂದು ಮಾತನ್ನು ಹೇಳಿದ್ದಾರೆ. ಇವತ್ತು ನಮ್ಮ ರಾಜ್ಯಮಟ್ಟದಲ್ಲಿ ...

ಶ್ರೀ ಜೆ. ಸಿ. ಮಾಧುಸ್ವಾಮಿ : ಇದು ಪಾಲಿಸಿ ಮ್ಯಾಟರ್. ನಮಗೆ ಒಂದು ಅನುಮಾನ ಎಂದರೆ ನಿಮ್ಮ ಪಾರ್ಟಿ ಮೀಟಿಂಗ್‌ನಲ್ಲಿ ತೀರ್ಮಾನಮಾಡಿಕೊಂಡು ಈ ತೀರ್ಮಾನಕ್ಕೆ ಬಂದಿರೋ, ಏಕೆಂದರೆ ನೀವು ಇಲ್ಲಿ ಸರ್ಕಾರದ ವಿರುದ್ಧ ಮಾತನಾಡುತ್ತಿದ್ದೀರಿ.

ಶ್ರೀ ಎ. ಕೆ. ಅನಂತಕೃಷ್ಣ : ಮಾನ್ಯ ಅಧ್ಯಕ್ಷರೇ, ಇದು ಅವರಿಗೆ ಸಂಬಂಧಪಟ್ಟಿದ್ದಲ್ಲ. ನಿಮಗೆ ಕೇಳುವುದಕ್ಕೆ ತಾಳ್ಮೆ ಇಲ್ಲದಿದ್ದರೆ ಸುಮ್ಮನಿರಿ. ನನ್ನ ಪಾರ್ಟಿ ಮೀಟಿಂಗ್ ವಿಚಾರವನ್ನು

ಹೇಳತಕ್ಕ ಅಧಿಕಾರ ತಮಗೆ ಇಲ್ಲ. ನಿಮ್ಮ ಪಾರ್ಟಿ ವಿಚಾರಕ್ಕೆ ಸಂಬಂಧಪಟ್ಟಂತೆ ಮಾತನಾಡಲು ನಿಮಗೆ ನಾವು ಯಾರೂ ಪವರ್ ಆಫ್ ಅಟಾರ್ನಿಯನ್ನು ಕೊಟ್ಟಿಲ್ಲ.

(ಗೊಂದಲ)

ಶ್ರೀ ಜೆ. ಸಿ. ಮಾಧುಸ್ವಾಮಿ : ಸರ್ಕಾರದ ಪಾಲಿಸಿ ಬಗ್ಗೆ ಇಲ್ಲಿ ಮಾತನಾಡಬೇಕಾದರೆ ನೀವು ಇದನ್ನು ಪಾರ್ಟಿ ಮೀಟಿಂಗ್‌ನಲ್ಲಿ ಪ್ರಸ್ತಾಪ ಮಾಡಿದಿರಾ, ಇಲ್ಲವೇ?

(ಗೊಂದಲ)

ಶ್ರೀ ಎ. ಕೆ. ಅನಂತಕೃಷ್ಣ : ನೀವು ಅದನ್ನು ಕೇಳುವಂಥ ಅವಶ್ಯಕತೆ ಇಲ್ಲ. ನೀವು ನಮ್ಮ ಪಕ್ಷದ ಸದಸ್ಯರಲ್ಲ.

(ಗೊಂದಲ)

ಶ್ರೀ ಎ. ಕೆ. ಅನಂತಕೃಷ್ಣ : ನೀವು ಅದನ್ನು ಡಿಫರ್ ಮಾಡುವುದಾದರೆ ಆದುವರೆಗೆ ಮಾತನಾಡಿ.

ಶ್ರೀ ಕೆ. ಸೋಮಪ್ಪ ಸುವರ್ಣ : ಮಾನ್ಯ ಅನಂತಕೃಷ್ಣರವರು ತಮ್ಮ ಅಭಿಪ್ರಾಯವನ್ನು ಮಂಡಿಸುತ್ತಿದ್ದಾರೆ.

(ಗೊಂದಲ)

ಶ್ರೀ ಎ. ಕೆ. ಅನಂತಕೃಷ್ಣ : ಖಾಸಗೀಕರಣದ ಪರವಾಗಿ ತಾವು ಎಷ್ಟರಮಟ್ಟಿಗೆ ಇದ್ದೀರೆಂಬುದನ್ನು ತಾವು ಪ್ರದರ್ಶನ ಮಾಡುತ್ತಿದ್ದೀರಿ.

ಶ್ರೀ ಜೆ. ಸಿ. ಮಾಧುಸ್ವಾಮಿ : ನಾನು ಅದಕ್ಕೆ ವಿರೋಧ. ನಾನು ನಿಮ್ಮ ಜೊತೆಗೆ ಮಾತನಾಡುತ್ತಿದ್ದೇನೆ.

ಶ್ರೀ ಎ. ಕೆ. ಅನಂತಕೃಷ್ಣ : ಖಾಸಗಿಯವರ ಪರವಾಗಿ ಚರ್ಚೆ ನಡೆಸುತ್ತಿದ್ದೀರಿ.

ಶ್ರೀ ಜೆ. ಸಿ. ಮಾಧುಸ್ವಾಮಿ : ಮೈಸೂರು ಸಿಮೆಂಟ್ಸ್ ಲಾಸ್ ಆಗಿರತಕ್ಕದ್ದು ಗೊತ್ತಿದೆ.

(ಗೊಂದಲ)

ಶ್ರೀ ಎ. ಕೆ. ಅನಂಕತೃಷ್ಣ : ಮಾನ್ಯ ಅಧ್ಯಕ್ಷರೇ, ನಾನು ಮಾತನಾಡಲು ಅವಕಾಶ ಕೊಡಿ.

(ಗೊಂದಲ)

ಶ್ರೀ ಎ. ಕೆ. ಅನಂತಕೃಷ್ಣ : ನಾನು ನನ್ನ ಅಭಿಪ್ರಾಯವನ್ನು ಹೇಳುತ್ತಿದ್ದೇನೆ. ಮಾನ್ಯ ಅಧ್ಯಕ್ಷರೇ, ತಾವು ನನಗೆ ರಕ್ಷಣೆಯನ್ನು ಕೊಡಬೇಕು.

ಛೇರ್ಮನ್ : ನೀವು ಅವರಿಗೆ ಈಲ್ಡ್ ಆಗಬೇಡಿ.

ಶ್ರೀ ಎ. ಕೆ. ಅನಂತಕೃಷ್ಣ : ನನ್ನ ವಾಕ್ ಸ್ವಾತಂತ್ರ್ಯಕ್ಕೆ, ನನ್ನ ಅಭಿಪ್ರಾಯ ಸ್ವಾತಂತ್ರ್ಯಕ್ಕೆ ತಾವು ರಕ್ಷಣೆ ಕೊಡಬೇಕು. ಅವರು ನನ್ನನ್ನು ಕೇಳುವುದಕ್ಕೆ ಏನು ಸಂಬಂಧವಿದೆ.

ನನ್ನ ಮಾತನ್ನು ಕೇಳುವುದಕ್ಕೆ ಅವರಿಗೆ ಇಷ್ಟವಿಲ್ಲದಿದ್ದರೆ ಸುಮ್ಮನೆ ಕುಳಿತುಕೊಳ್ಳಬೇಕು. ಮಾನ್ಯ ರಾಮಯ್ಯನವರು, ಮಾನ್ಯ ದೇಶಪಾಂಡೆಯವರು, ಇನ್ನೂ ಬೇರೆ ಮಾನ್ಯ ಸದಸ್ಯರು ಮಾತನಾಡುವಾಗ ನಾನು ಅಡ್ಡ ಬರಲಿಲ್ಲ.

ಛೇರ್ಮನ್ : ಯಾರೂ ಬರುವುದಿಲ್ಲ. ನಿಮ್ಮ ಭಾಷಣ ಮುಂದುವರಿಸಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅನಂತಕೃಷ್ಣರವರಿಗೆ ನಾವು ಬೆಂಬಲವನ್ನು ಕೊಡುತ್ತಿದ್ದೇವೆ. ನೀವೆಲ್ಲಾ ಏತಕ್ಕೆ ನಮ್ಮನ್ನು ವಿರೋಧ ಮಾಡುತ್ತಿದ್ದೀರಿ.

ಶ್ರೀ ಎ. ಕೆ. ಅನಂತಕೃಷ್ಣ : ನೀವು ಕೈ ಎತ್ತಿ ಕುಳಿತುಕೊಳ್ಳಿ. ಆದರೆ ಬಾಯಿ ಬಿಡಬೇಡಿ.

ಛೇರ್ಮನ್ : ಬೇಗನೆ ಮುಗಿಸಿ.

ಶ್ರೀ ಎ. ಕೆ. ಅನಂತಕೃಷ್ಣ : ನಾನು ಇನ್ನೂ ಪ್ರಾರಂಭದಲ್ಲೇ ಇದ್ದೇನೆ. ಇದನ್ನು ಮಾತನಾಡಲು 8 ದಿವಸ ಅಭ್ಯಾಸ ಮಾಡಿದ್ದೇನೆ. ಇನ್ನೂ ಪೀಠಿಕೆ ಹಂತದಲ್ಲೇ ಇದ್ದೇನೆ. ನಮ್ಮ ಮಾನ್ಯ ಮುಖ್ಯಮಂತ್ರಿಗಳು ಇಷ್ಟೊಂದು ಪುಟಗಳಲ್ಲಿ ಪ್ರಿಯಾಂಬಲ್ ಕೊಟ್ಟಿದ್ದಾರೆ. ಅವರು ಏನೇನು ಹೇಳಿದ್ದಾರೆ ಅದರ ಬಗ್ಗೆ ಚರ್ಚೆ ಮಾಡಬೇಕೆಂದು ನಮ್ಮ ಮುಂದಿಟ್ಟಿದ್ದಾರೆ. ನಮ್ಮ ಅಭಿಪ್ರಾಯವನ್ನು ಕೊಟ್ಟ ಮೇಲೆ ಅವರು ಉತ್ತರ ಕೊಡುವುದಕ್ಕೆ ಮತ್ತು ಅದನ್ನು ಬದಲಾವಣೆ ಮಾಡಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಆದ್ದರಿಂದ ನಾನು ಮಾತನಾಡಲು ಪೂರ್ಣ ಅವಕಾಶ ಕೊಡಿ. ನಮ್ಮ ರಾಜ್ಯದಲ್ಲಿ ಕೈಗಾರಿಕೋದ್ಯಮವನ್ನು ಜಾಸ್ತಿಮಾಡು-ವುದಕ್ಕೋಸ್ಕರ, ಪ್ರಗತಿಯನ್ನು ಸಾಧಿಸುವುದಕ್ಕೋಸ್ಕರ, ಹೊರ ರಾಜ್ಯಗಳಿಂದ....,

ಶ್ರೀ ಬಿ. ಎಸ್. ಯಡಿಯೂರಪ್ಪ : ಪಾಯಿಂಟ್ ಆಫ್ ಆರ್ಡರ್. ಮಾನ್ಯ ಅಧ್ಯಕ್ಷರೇ, ಸಿ. ಎಲ್. ಪಿ. ಮೀಟಿಂಗ್‌ನಲ್ಲಿ ಈ ರೀತಿ ಪಾಲಿಸಿ ವಿಷಯವನ್ನು ಮಾತನಾಡಿದರೆ ಪರಸ್ಪರ ಬಡಿದಾಡುತ್ತಾರೆ. ಆದರೆ ಅವರು ಇಲ್ಲಿ ಮಾತನಾಡುವುದನ್ನೆಲ್ಲಾ ಕೇಳಿಕೊಂಡು ಕುಳಿತುಕೊಳ್ಳಬೇಕೆಂದರೆ ಹೇಗೆ ಸಾಧ್ಯ? ಆದ್ದರಿಂದ ನಾವು ಕೇಳುತ್ತಿದ್ದೇವೆ. ಇದನ್ನೆಲ್ಲಾ ನೀವು ಅಲ್ಲಿ ಮಾತನಾಡಿದಿರಾ? ಇಲ್ಲಿ ಒಪ್ಪಿದ್ದಾರೆಯೇ?

ಶ್ರೀ ಎ. ಕೆ. ಅನಂತಕೃಷ್ಣ : ಮಾನ್ಯ ಅಧ್ಯಕ್ಷರೇ, ಇವರು ಬಹಳ ಹಿರಿಯ ಸದಸ್ಯರು. ನಾನು ಹೊಸಬ. ಪಾಯಿಂಟ್ ಆಫ್ ಆರ್ಡರ್‌ಅನ್ನು ರೈಸ್ ಮಾಡಬೇಕಾದರೆ ಯಾವುದಾದರೊಂದು ಡಿಸ್‌ಆರ್ಡರ್ ಇರಬೇಕು. ಏನಾದರೂ ದಾರಿ ತಪ್ಪಿ ಹೋಗಿರಬೇಕು. ನಾನೇನಾದರೂ ತಪ್ಪು ಮಾಡಿದ್ದೇನೆಯೇ? ಏತಕ್ಕೆ ಈ ರೀತಿ ಪಾಯಿಂಟ್ ಆಫ್ ಆರ್ಡರ್ ? ನನಗೆ ಏತಕ್ಕೆ ಅಡಚಣೆ ಮಾಡುತ್ತಾರೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅನಂತಕೃಷ್ಣರವರು ಏನು ಹೇಳುತ್ತಿದ್ದಾರೆ. ಇದು ಕಾಂಗ್ರೆಸ್ ಪಕ್ಷಕ್ಕೆ ಹೊಸದೇನೂ ಅಲ್ಲ. ಹಿಂದೆ 10 ಪಾಯಿಂಟ್ ಪ್ರೋಗ್ರಾಮ್‌ನಲ್ಲಿ ಮಾನ್ಯ ಚಂದ್ರಶೇಖರ್‌ರವರು, ಕೃಷ್ಣಕಾಂತರವರು, ಮೋಹನ್‌ಧಾರಿಯ ರವರು ಇನ್ನೂ ಅನೇಕರು ಜಿಂಜರ್ ಗ್ರೂಪ್ಸ್ ಎಂದು ಯುವಕರೆಲ್ಲಾ ಸೇರಿ ಹೊಸದಾಗಿ ತಮ್ಮ ಪ್ರೋಗ್ರಾಂಸ್ ಪಕ್ಷದಲ್ಲಿ ತಂದು, ಇಂಪ್ಲಿಮೆಂಟ್ ಮಾಡುವುದಕ್ಕೆ ಪ್ರಯತ್ನ

ಮಾಡಿದರು. ಅದೇ ರೀತಿ ಪ್ರೋಗ್ರೆಸಿವ್ ಪಾಲಿಸಿ ಯಾವುದೇ ಇದ್ದರೂ ಸರ್ಕಾರ ಅದರ ಬಗ್ಗೆ ಪರಿಶೀಲಿಸಿ ಯಾವುದು ಸರಿ ಇರುತ್ತದೆ ಅದನ್ನು ಒಪ್ಪಿಕೊಳ್ಳುತ್ತದೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ಮಾನ್ಯ ಮುಖ್ಯಮಂತ್ರಿಗಳು ಪಾಲಿಸಿ ಡಿಸಿಷನ್ ಅನ್ನು ನಿಮ್ಮ ಪಾರ್ಟಿಯಿಂದ ತೆಗೆದುಕೊಂಡು ಇಲ್ಲಿ ಬಜೆಟನ್ನು ಮಂಡನೆ ಮಾಡಿದ್ದಾರೋ, ಹೇಗೆ? ಏಕೆಂದರೆ ಮಾನ್ಯ ಸದಸ್ಯರು ಇಲ್ಲಿ ಬಜೆಟ್ ವಿರುದ್ಧ ಮಾತನಾಡುತ್ತಿದ್ದಾರೆ. ಇದು ಎಷ್ಟರಮಟ್ಟಿಗೆ ಸರಿ ಎಂಬುದು ನಮಗೆ ಅನುಮಾನ ಬಂದಿದೆ.

ಶ್ರೀ ಎ. ಕೆ. ಅನಂತಕೃಷ್ಣ : ಮಾನ್ಯ ವಿರೋಧಪಕ್ಷದ ನಾಯಕರಿಗೆ, ಮಾನ್ಯ ಸ್ನೇಹಿತರಿಗೆ ಅರ್ಥವಾಗಿರಬೇಕು. ನಾನು ಹೇಳುತ್ತಿರುವುದು, ನಾನು ಏನೇನು ಸಿದ್ಧಾಂತವನ್ನು ಹೇಳುತ್ತಿದ್ದೇನೆ, ಅದರ ಬಗ್ಗೆ ಮಾನ್ಯ ಮಂತ್ರಿಗಳಿಗೆ ಅವಕಾಶ ಇದೆ ಎಂದು ಹೇಳುತ್ತಿದ್ದಾರೆ. ಅದರ ಬಗ್ಗೆ ಏತಕ್ಕೆ ಅಡ್ಡ? ಈಗ ಬೇರೆ ಬೇರೆ ರಾಜ್ಯಗಳ ಮತ್ತು ಅಂತರ ರಾಷ್ಟ್ರಗಳ ಕೈಗಾರಿಕಾ ಉದ್ಯಮಿಗಳಿಗೆ ನಮ್ಮ ರಾಜ್ಯದಲ್ಲಿ ಅವಕಾಶವಿದೆ. ಅವರೆಲ್ಲರೂ ಇಲ್ಲಿ ಬಂದು ಉದ್ಯಮಗಳನ್ನು ಪ್ರಾರಂಭಿಸಬಹುದು. ಅವರಿಗೆ ಸಾಲ ಸೌಲಭ್ಯಗಳನ್ನು ಕೊಡುತ್ತೇವೆಂದು ಹೇಳಿ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಅದಕ್ಕೆ ನಾನು ಅವರಿಗೆ ಬಹಳ ಸವಿನಯಪೂರ್ವಕವಾಗಿ, ಒತ್ತಾಯಪೂರ್ವಕವಾಗಿ ಹೇಳುತ್ತಿದ್ದೇನೆ. ನಮ್ಮ ರಾಜ್ಯದಲ್ಲಿ ಈ ಉದ್ಯಮಗಳನ್ನು ಮಾಡುವಂಥ ಜನ ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಅವರಿಗೆ ಏನು ಕಡಿಮೆಯಾಗಿದೆ ಎಂದರೆ ಈ ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟಿನಲ್ಲಿ, ಒಂದೊಂದು ಕಾರ್ಪೊರೇಷನ್‌ನಲ್ಲಿ ಕೆ.ಐ.ಡಿ.ಸಿ.ಯಲ್ಲಿ ಬೃಹತ್ ಪ್ರಮಾಣದಲ್ಲಿ ಲಂಚವನ್ನು ಕೊಟ್ಟು ಲೈಸೆನ್ಸ್ ಪಡೆದು ಉದ್ಯಮಗಳನ್ನು ಪ್ರಾರಂಭ ಮಾಡಲು ಸಾಧ್ಯವಿಲ್ಲದೆ ಹೋಗಿದೆ. ಅವರು ಮೊದಲು ಎದುರಿಸುವಂಥ ಅಡಚಣೆ ಇದು. ಇದು ನನ್ನ ಬಹಳ ಸ್ನೇಹಿತರ ಅನುಭವ. ಅದಕ್ಕೂ ವಿರೋಧ ಮಾಡುತ್ತಾರೆಂದರೆ ನಾನು ಅದಕ್ಕೆ ಜವಾಬು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ನಮ್ಮ ರಾಜ್ಯದ ಯುವಕರು ಪ್ರಾರಂಭದಲ್ಲಿಯೇ ಒಂದು ಹೆಜ್ಜೆಯನ್ನು ಮುಂದಕ್ಕೆ ಇಡಲಾಗದ ಒಂದು ಸನ್ನಿವೇಶ ಇದೆ ಮತ್ತು ಸಾಲ ಕೇಳುವಂಥ ಸಂದರ್ಭ ಬಂದಾಗಲೂ ಕೂಡ ಯಾವ ಹೊರ ರಾಜ್ಯಗಳಿಂದ ಬಂದಂಥವರಿಗೆ ಎಷ್ಟು ತ್ವರಿತವಾಗಿ ಸಾಲವನ್ನು ಕೊಡುತ್ತಾರೋ, ಅಷ್ಟೇ ಕಷ್ಟಕೊಟ್ಟು, ಅಷ್ಟೇ ನಿಧಾನವಾಗಿ ನಮ್ಮವರಿಗೆ ಸಾಲ ಕೊಡುವುದಕ್ಕೆ ಮುಂದಕ್ಕೆ ಬರುವುದಿಲ್ಲ. ಇದು ಪ್ರಾರಂಭದಲ್ಲಿ ಕೈಗಾರಿಕಾ ಡಿಪಾರ್ಟ್‌ಮೆಂಟ್ ಏನಿದೆ ಇಂಡಸ್ಟ್ರಿಯಲ್ ಡಿಪಾರ್ಟ್‌ಮೆಂಟ್ ಆ ಡಿಪಾರ್ಟ್‌ಮೆಂಟ್‌ನಲ್ಲಿ ಮೊದಲ ಹೆಜ್ಜೆಗೆ ಅವನಿಗೆ ತೊಂದರೆ ಹಾಗೂ ಹೀಗೂ ಮಾಡಿ ಯಾರ ಯಾರ ಪ್ರಭಾವದಿಂದಲೋ ಒಂದು ಲೈಸೆನ್ಸ್‌ನ್ನು ತೆಗೆದುಕೊಂಡರೆ ಈ ಫೈನಾನ್ಸ್ ಕಾರ್ಪೊರೇಷನ್‌ನಲ್ಲಿ ಕೆ.ಐ.ಡಿ.ಸಿ.ಯಲ್ಲಿ , ಕೆ.ಎಸ್.ಎಸ್.ಐ.ಡಿ.ಸಿಯಲ್ಲಿ ಇಂಥ ಕಡೆ ಆ ಯುವಕರು ಪ್ರಗತಿಯನ್ನು ಸಾಧಿಸುವುದು ಬಹಳ ಕಷ್ಟ. ರಾಜ್ಯಸರ್ಕಾರವೂ ಕೂಡ ಅವರಿಗೆ ಸಹಾಯ ಮಾಡುವುದಿಲ್ಲ. ರಾಜ್ಯಮಟ್ಟದಲ್ಲಿರುವ ಬ್ಯಾಂಕ್, ರಾಷ್ಟ್ರೀಕರಣಮಾಡಿರುವ ಬ್ಯಾಂಕ್, ಬೇರೆ ಬ್ಯಾಂಕ್‌ಗಳಾಗಿರಲಿ ಅವರು ನೇರವಾಗಿ ಹೇಳುತ್ತಾರೆ, ದಯವಿಟ್ಟು ತಾವು ಲಾಲಿಸಬೇಕು. ನಮ್ಮವರಿಗೆ ಏನು ಮಾಡಲಿಕ್ಕೆ ಆಗುತ್ತದೆ, ಯಾರೋ ಮಾರ್ವಾಡಿಯೋ ಸಿಂಧಿಯೋ, ಪಂಜಾಬಿಯೋ ಇನ್ನಾರಾದರೂ ಬಂದು ಮಾಡಿಕೊಂಡು ಹೊಗುತ್ತಾರೆ, ಪ್ರಗತಿಯನ್ನು ಸಾಧಿಸುತ್ತಾರೆ. ನಿಮ್ಮ ಕೆಯಲ್ಲಿ ಎಲ್ಲಿ ಮಾಡುವುದಕ್ಕ ಆಗುತ್ತದೆ? ಕೊಟಿದುದ್ದೆಲ್ಲಾ ಹಾಳಾಗುತ್ತದೆಂದು ಹೇಳಿ ಪ್ರಚಂಡವಾದ ಮೊದಲನೆಯಪೆಟ್ಟು ನಮ್ಮ ಕನ್ನಡಿಗರೇ ಇರುವಂಥ ಆಡಳಿತವರ್ಗದವರು ಈ ರಾಷ್ಟ್ರೀಕರಣ ಮಾಡಿದಂಥ ಬ್ಯಾಂಕ್‌ಗಳಲ್ಲಿ ಹೇಳುತ್ತಾರೆ., ಇವೆಲ್ಲ ಮೂಲಕಾರಣ. ಇದನ್ನು ನಮ್ಮ ರಾಜ್ಯಸರ್ಕಾರ ಕಣ್ಣು ತೆರೆದು ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳಬೇಕು. ನಮ್ಮ ಪ್ರಗತಿಶೀಲ ಔದ್ಯೋಗಿಕ

ಯುವಕರು ಯೊರಿದ್ದಾರೆ, ಅವರನ್ನು ಗುರುತಿಸಬೇಕು, ಗುರುತಿಸುವುದಕ್ಕೆ ಸಾಧ್ಯವಿಲ್ಲ ವೆಂದರೆ ತಾವು ಅವರಿಗೆ ಬರಮಾಡಿಕೊಳ್ಳಲು ಸಾಕಷ್ಟು ಪಬ್ಲಿಸಿಟಿಯನ್ನು ಕೊಟ್ಟು ಅವರು ಬಂದಾಗ ನಮ್ಮ ನೆಲದ ಮಕ್ಕಳೆಂದು ಹೇಳಿ ಅವರಿಗೆ ನೀವು ಒಳ್ಳೆಯ ಸದ್ಭಾವನೆಯಿಂದ ಅವಕಾಶ ಕೊಟ್ಟದ್ದೇ ಆದರೆ ಯಾರು ಹೊರಗಡೆಯಿಂದ ಬಂದವರಿಗೆ ಏನೇನು ಅವಕಾಶಗಳನ್ನು ಮಾಡಿಕೊಡುತ್ತೇವೆಂದು ಹೇಳುತ್ತಿದ್ದಿರೋ ಆ ಅವಕಾಶಗಳನ್ನು ಸವಲತ್ತುಗಳನ್ನು ಇವರಿಗೆ ಕೊಟ್ಟದ್ದೇ ಆದರೆ ನಮ್ಮ ರಾಜ್ಯದ ಕನ್ನಡಿಗರು, ಯುವಕರು ಮುಂದೆ ಬಂದು ಕೆಲಸವನ್ನು ಮಾಡಿ, ಅವರು ಬೆಳೆಯುವುದಕ್ಕೆ, ರಾಜ್ಯದ ಉದ್ಯಮಗಳು ಬೆಳೆಯುವುದಕ್ಕೆ ಪ್ರಗತಿಯನ್ನು ಸಾಧಿಸಲು ಸಾಧ್ಯವಾಗುತ್ತದೆ. ಹೊರ ರಾಜ್ಯಗಳಲ್ಲಿ ಅಂತರ ರಾಷ್ಟ್ರಮಟ್ಟದಲ್ಲಿಯೂ ಕೂಡ ಅವರು ಸಾಕಷ್ಟು ಪ್ರಮಾಣದಲ್ಲಿ ಕಾಂಪಿಟೇಷನ್ ಮಾಡಲಿಕ್ಕೆ ಸಾಧ್ಯವಾಗುತ್ತದೆ. ಇದನ್ನು ಮೂಲಭೂತವಾಗಿ ನಾವು ಅರ್ಥ ಮಾಡಿಕೊಳ್ಳಬೇಕು. ನಮ್ಮವರು ನಮಗೆ ಲಂಚ ಕೊಡುವುದಿಲ್ಲ, ನಮಗೆ ಪ್ರಯೋಜನವಿಲ್ಲ, ಎನ್ನುವ ಒಂದು ಅಭಿಪ್ರಾಯಕ್ಕೆ ಜವಾಬ್ದಾರಿ ಸ್ಥಾನದಲ್ಲಿರತಕ್ಕಂಥವರು ಬಂದುಬಿಟ್ಟ ಮೇಲೆ ನಮ್ಮ ನಮ್ಮ ನಾಗರೀಕರು ಎಲ್ಲಿ ಮುಂದೆ ಬರುವುದಕ್ಕೆ. ಸಾಧ್ಯವಾಗುತ್ತದೆ? ಅದಕ್ಕಾಗಿಯೇ ನಮ್ಮ ರಾಜ್ಯಮಟ್ಟದಲ್ಲಿ ನಮ್ಮ ನಗರಕ್ಕೆ ಉದ್ದಿಮೆಗಳ ಬೆಳವಣಿಗೆಗೆ ನಮ್ಮವರ ಕೈಯಲ್ಲಿ ಸಾಧ್ಯವಾಗುತ್ತಿಲ್ಲ. ನಮ್ಮ ಆಡಳಿತ ವರ್ಗದವರು ಯಾರು ಯಾರು ಇಂಥ ಉದ್ದಿಮೆಗಳಲ್ಲಿದ್ದಾರೆ; ಅವರು ಮನಸ್ಸು ಮಾಡಿಕೊಂಡೇ ಅಲ್ಲಿ ಹೋಗಿ ಕುಳಿತು ಕೊಳ್ಳುತ್ತಾರೆ, ಆದ್ದರಿಂದ ಇದು ಬೆಳೆಯುವುದಿಲ್ಲ, ಇದು ನಷ್ಟದಲ್ಲಿ ಹೋಗುತ್ತದೆ. ನನ್ನ ಕೈಯಲ್ಲಿ ಮಾಡುವುದಕ್ಕಾಗುವುದಿಲ್ಲ. ನನಗೆ ಅಲ್ಲಿ ಜಾಗವಿಲ್ಲವೆಂದು ಇಲ್ಲಿ ಕಳುಹಿಸಿದ್ದಾರೆ, ಏನೋ ಒಂದು ಕಡೆ ಇರುತ್ತೇನೆ, ಒಂದು ಕಾರು ಕೊಟ್ಟಿದ್ದಾರೆ, ಮನೆ ಕೊಟ್ಟಿದ್ದಾರೆ, ಮತ್ತೊಂದು ಕೊಟ್ಟಿದ್ದಾರೆ ಎಂದು ಹಾಗೆ ಕಾಲ ತಳ್ಳುತ್ತಾರೆ. ನಮ್ಮವರು ಯಾರಾದರೂ ಮಂತ್ರಿಗಳಾಗಿ ಬಂದರೆ, ಮುಖ್ಯಮಂತ್ರಿಗಳಾಗಿ ಬಂದರೆ ಬೇರೆ ಕಡೆಗೆ ವರ್ಗಾವಣೆ ಮಾಡಿಕೊಳ್ಳೋಣ ಎನ್ನುವ ಭಾವನೆ ಬೆಳೆದುಕೊಂಡು ಬಂದಂಥ ಒಂದು ಕೆಟ್ಟ ಸಂಪ್ರದಾಯ, ವಾತಾವರಣ ನಮ್ಮ ರಾಜ್ಯದಲ್ಲಿ ಇದೆ ಎಂದು ಘಂಟಾಘೋಷವಾಗಿ ಹೇಳುತ್ತೇನೆ. ಈ ವಿಷಯವನ್ನು ನಮ್ಮ ಮಂತ್ರಿಮಂಡಲ ಬಹಳ ತೀವ್ರದಿಂದ ಅರ್ಥಮಾಡಿಕೊಂಡು ಸರಿಪಡಿಸುವಂಥ ಒಂದು ಕೆಲಸವನ್ನು ಮಾಡಬೇಕೆಂದು ನಾನು ಇವತ್ತು ಹೇಳುತ್ತಿದ್ದೇನೆ.

6. 15 ಪಿ. ಎಂ.

ಈ ಎನ್. ಆರ್. ಐ. ಇನ್‌ವೆಸ್ಟ್‌ಮೆಂಟ್ ; ಈ ಎನ್. ಆರ್. ಐ. ಗೆ ಕನ್ನಡಿಗರು ಬಂದರೆ ಅವರಿಗೆ ಅದೇ ಗತಿ. ಅದೇ ಬೇರೆ ಜನರು ಬಂದರೆ ಅವರಿಗೆ ಸಾಕಷ್ಟು ಸವಲತ್ತು ಕೊಡುತ್ತಾರೆ. ಬಹಳ ಬೇಗ ಕೆಲಸ ಮಾಡುತ್ತಾರೆ. ಅದು ನನಗೆ ಗೊತ್ತಿದೆ. ಆದ್ದರಿಂದ ಈ ಎನ್. ಆರ್. ಐ. ಅನ್ನುವಾಗ ಅಂತರಾಷ್ಟ್ರೀಯ ಮಟ್ಟದಲ್ಲಿ ಪ್ರಪಂಚದಲ್ಲಿ ಎಲ್ಲೆಲ್ಲಿ ಕನ್ನಡಿಗರು ಇದ್ದಾರೆ ಅವರನ್ನು ಗುರುತಿಸಿ, ಅವರೆಲ್ಲ ನಮ್ಮ ರಾಜ್ಯಕ್ಕೆ ಬಂದು ಉದ್ದಿಮೆಗಳನ್ನು ಬೆಳೆಸುವಂಥ ಕೆಲಸವನ್ನು ಮಾಡಬೇಕೆಂದು ಹೇಳುತ್ತೇನೆ. ನನಗೆ ಗೊತ್ತಿದೆ, ಬೇರೆ ರಾಷ್ಟ್ರಗಳಲ್ಲಿ ಕನ್ನಡಿಗರು ದೊಡ್ಡ ದೊಡ್ಡ ಸಂಸ್ಥೆಗಳ ಆಡಳಿತ ವರ್ಗದಲ್ಲಿ ಪ್ರಮುಖವಾಗಿ ಕೆಲಸ ಮಾಡುತ್ತಿದ್ದಾರೆ. ರಾಷ್ಟ್ರೀಯ ಸರ್ಕಾರಗಳಲ್ಲಿ ಕೂಡ ಕೆಲಸ ಮಾಡುತ್ತಿದ್ದಾರೆ. ಅಲ್ಲಿ ಹೆಸರನ್ನು ಪಡೆದವರು, ಖ್ಯಾತಿ ಪಡೆದವರು, ಆಡಳಿತ ವರ್ಗದಲ್ಲಿ ಪ್ರಮುಖವಾಗಿ ಕೆಲಸ ಮಾಡಿದವರು ನಮ್ಮ ಸಣ್ಣ ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳನ್ನು ನಡೆಸಿಕೊಂಡು ಹೋಗುವುದಕ್ಕೆ ಸಾಧ್ಯವಿಲ್ಲವೆ? ಅವರು ಏತಕ್ಕೆ ಬರುತ್ತಿಲ್ಲ? ಏತಕ್ಕೆ ನೀವು ಅವರನ್ನು ಬರಮಾಡಿಕೊಳ್ಳುತ್ತಿಲ್ಲ? ಏತಕ್ಕೆ ಕೇವಲ ಎನ್. ಆರ್. ಐ. ಎಂದು ಹೇಳುತ್ತೀರಿ? ನಮ್ಮಲ್ಲಿ ವಾಪಸ್ಸು ಬಂದು ಕೆಲಸ ಮಾಡಿ ಎಂದು ಹೇಳಿ. ಅವರು ಉತ್ಸಾಹದಿಂದ ಬರುವಂಥ ರೀತಿಯಲ್ಲಿ ಏತಕ್ಕೆ ಕೆಲಸ ಮಾಡುತ್ತಿಲ್ಲ? ಇದನ್ನು

ರಾಷ್ಟ್ರಮಟ್ಟದಲ್ಲಿ ಮಾಡಬೇಕೇ, ರಾಜ್ಯ ಮಟ್ಟದಲ್ಲಿ ಮಾಡಬೇಕೇ? ಬ್ರೈನ್‌ಡ್ರೈವ್ ಎಂದು ಹೇಳುತ್ತಿದ್ದೀರಲ್ಲ ನಮ್ಮ ಮಕ್ಕಳು ಬ್ರೈನ್‌ಡ್ರೈವ್‌ನಲ್ಲಿ ಹೋಗುತ್ತಿದ್ದಾರೆಯೇ? ನಮ್ಮ ಬ್ರೈನ್ ಹೋಗುತ್ತಿದೆ. ನಮ್ಮ ಬ್ರೈನ್ ಬೇರೆ ರಾಜ್ಯಗಳ, ಬೇರೆ ರಾಷ್ಟ್ರಗಳ ಪ್ರಗತಿಯನ್ನು ಜಾಸ್ತಿ ಮಾಡುವುದಕ್ಕೆ ಗುಲಾಮಗಿರಿ ಮಾಡುತ್ತಿದ್ದಾರೆ. ಇಲ್ಲ, ಖಾಸಗಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಇದನ್ನು ಅರ್ಥ ಮಾಡಿಕೊಳ್ಳಬೇಕಾಗಿದೆ. ಅದನ್ನು ಮಾಡುವುದು ಬಿಟ್ಟು ನಮ್ಮ ಸರ್ಕಾರ ಗತಿ ಇಲ್ಲದಿರುವ ಕೈಗಾರಿಕೆಗಳನ್ನು ನಡೆಸುತ್ತಿದೆ ; ಅವನ್ನು ಕೈಬಿಡೋಣ. ರಾಜ್ಯ ಮಟ್ಟದಲ್ಲಿ ಮಾಡುವಂಥ ಕೆಲಸ ಇದ್ದರೆ ಪರ ರಾಜ್ಯಗಳಿಂದ ಪರ ರಾಷ್ಟ್ರಗಳಿಂದ ಬರಮಾಡಿಕೊಳ್ಳೋಣ. ಇದು ನ್ಯಾಯವಾದುದಲ್ಲ. ಇದು ರಾಜ್ಯ ಮಟ್ಟದಲ್ಲಿ ಕರ್ನಾಟಕದ ಪ್ರೇಮಿಯಾಗಿ ಕನ್ನಡಿಗರ ಮೇಲೆ ಅಭಿಮಾನ ಇಟ್ಟುಕೊಂಡು ಮಾಡುವ ಕೆಲಸ ಅಲ್ಲವೆಂಬ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇದು ನನ್ನ ಅಭಿಪ್ರಾಯಕ್ಕಿಂತ ಅದನ್ನು ಪಕ್ಕದಲ್ಲಿಟ್ಟು ಹೇಳುತ್ತೇನೆ. ಕೆ.ಎಸ್.ಐ.ಡಿ.ಸಿ., ಕೆಎಸ್‌ಎಫ್‌ಸಿ.ಗೆ ಹತ್ತು ಕೋಟಿಯಿಂದ 15.85 ಕೋಟಿ, 15 ಕೋಟಿಯಿಂದ 30 ಕೋಟಿ ಕೊಟ್ಟಿದ್ದೇವೆಂದು ಹೇಳಿದ್ದಾರೆ. ಇದನ್ನು ನೋಡಿದರೆ ನಾವು 8ನೇ ಸ್ಥಾನದಲ್ಲಿದ್ದೇವೆ. ಮೊದಲನೆಯದು ಅಥವಾ 4ನೇ ಸ್ಥಾನಕ್ಕೆ ಬರಬೇಕಾದರೆ ಎಷ್ಟು ಸಾವಿರ ಕೋಟಿಯಿಂದ ನಾವು ಬೆಳೆಯುವುದಕ್ಕೆ ಸಾಧ್ಯವಾಗುತ್ತದೆ ಎಂದು ಯೋಚಿಸಬೇಕಾಗಿದೆ. ಇಂಗ್ಲೀಷ್‌ನಲ್ಲಿ It is a peanut ಎಂದು ಹೇಳುತ್ತಾರೆ. ಅಂದರೆ ಕಡಲೆಕಾಯಿಯಷ್ಟು ಬೆಲೆ ಇದೆ ಎಂದು. ಇಷ್ಟು ಸಣ್ಣ ಪ್ರಮಾಣದಲ್ಲಿ ನಾವು ಉದ್ದಿಮೆಗಳನ್ನು ಬೆಳೆಸುತ್ತೇವೆ. ನಮ್ಮ ಆರ್ಥಿಕಮಟ್ಟವನ್ನು ಬೆಳೆಸಿಕೊಂಡು ಹೋಗುತ್ತೇವೆ, ರಾಷ್ಟ್ರಮಟ್ಟದಲ್ಲಿ ಮೇಜರ್ ಕಾಂಪಿಟೇಷನ್ ಆಗುತ್ತೇವೆ ಎಂಬುದಾದರೆ ಇಷ್ಟು ಸಣ್ಣ ಪ್ರಮಾಣದಲ್ಲಿ ನಾವು ಬಂಡವಾಳ ಕೊಡುವುದು ಪ್ರಯೋಜನವಿಲ್ಲದ ಮಾತು. ಎಷ್ಟು ಕೊಡುತ್ತಿದ್ದೇವೋ ಅಷ್ಟು ಸೋರಿಹೋಗಿ ಹಾಳಾಗಿ ಹೋಗುತ್ತಿದೆ ಎಂಬ ಮಾತನ್ನು ಹೇಳಬಯಸುತ್ತೇನೆ. ''ವಿಶ್ವ''ಯೋಜನೆ ಬಹಳ ಒಳ್ಳೆಯ ಭಾವನೆಯಿಂದ ಮಾಡಿದ್ದುದು. ವಿಶ್ವೇಶ್ವರಯ್ಯನವರ ಹೆಸರಿನಲ್ಲಿ ಒಳ್ಳೆಯ ಯೋಜನೆಯನ್ನು ರಾಜ್ಯದ ಮುಂದೆ ಇಟ್ಟಿದ್ದಾರೆ. ಒಳ್ಳೆಯ ರೀತಿಯಲ್ಲಿ ಪ್ರಾರಂಭ ಮಾಡಿದ್ದಾರೆ. ಯಾರ್‍ಯಾರ ಟೀಕೆ ಯಾವ ರೀತಿ ಬಂದರೂ ಕೂಡ ನಾನು ಹೇಳುತ್ತಿದ್ದೇನೆ, ಇದು ಒಂದು ಒಳ್ಳೆಯ ಉದ್ದೇಶದಿಂದ ಸಿದ್ಧಾಂತದಿಂದ ಪ್ರಾರಂಭ ಮಾಡಿದ್ದುದು. ಇದನ್ನು ನಾವು ವಿರೋಧಿಸುವುದಾದರೆ ವಿಶ್ವೇಶ್ವರಯ್ಯನವರ ಸಿದ್ಧಾಂತಗಳನ್ನು ವಿರೋಧ ಮಾಡಿದಂತೆ. ಮಹಾತ್ಮ ಗಾಂಧಿಯವರ ತತ್ವಗಳನ್ನು ವಿರೋಧ ಮಾಡಿದಂತೆ. ರಾಷ್ಟ್ರಮಟ್ಟದಲ್ಲಿ ಸ್ವಾತಂತ್ರ್ಯಕ್ಕೆ ಮೊದಲು ಮತ್ತು ತದನಂತರ ಯಾರು ಪ್ರಯತ್ನ ಮಾಡಿದ್ದಾರೆ ಅವರೆಲ್ಲರ ತತ್ವ ಸಿದ್ಧಾಂತಗಳನ್ನು ವಿರೋಧ ಮಾಡಿದಂತೆ ಆಗುತ್ತದೆ. ಸರಿಯಾದ ರೀತಿಯಲ್ಲಿ ಕೆಲಸ ಮಾಡುತ್ತಿಲ್ಲವೆಂದರೆ, ಸರಿಯಾಗಿ ಕೆಲಸ ಮಾಡಿ ಎಂದು ಹೇಳಬೇಕಾಗುತ್ತದೆಯೇ ವಿನಹಃ ಸಿದ್ಧಾಂತವನ್ನು ಕಾರ್ಯಕ್ರಮವನ್ನು ವಿರೋಧ ಮಾಡುವುದು ಸೂಕ್ತವಲ್ಲವೆಂದು ಹೇಳುತ್ತೇನೆ. ಈ ಸಂದರ್ಭದಲ್ಲಿ ಒಂದು ಮಾತನ್ನು ಸಲಹೆ ರೂಪದಲ್ಲಿ ಮುಖ್ಯಮಂತ್ರಿಗಳಿಗೆ ಹೇಳಬಯಸುತ್ತೇನೆ. ನಾವು ಯಾವುದೇ ಒಂದು ಕೆಲಸ ಮಾಡಿದರೂ ಕೂಡ, ಉದ್ದಿಮೆಗಳು ಏನು ಮಾಡಿದರೂ, ಯಾವ ಕೈಯಲ್ಲಿ ಕೆಲಸ ಮಾಡಿಸಿದರೂ ಕೂಡ ನಮ್ಮಲ್ಲಿ Marketing is a fundamental aspect. ನಾವು ಮಾರ್ಕೆಟಿಂಗ್ ರೀಸರ್ಚ್ ಮಾಡುವುದಿಲ್ಲ. ಮಾರ್ಕೆಟಿಂಗ್ ಪೊಟೆನ್‌ಷಿಯಲ್ ಯೋಚನೆ ಮಾಡುವುದಿಲ್ಲ. ಮಾರ್ಕೆಟಿಂಗ್ ಯಾರ ಕೈಯಲ್ಲಿ ಸಾಧ್ಯ ಯಾವ ರೀತಿ ಸಾಧ್ಯವಿದೆ ಎಂದು ಮಾಡುತ್ತಿಲ್ಲ. ಅದನ್ನು ಮಾಡದೆ, ಮಾರ್ಕೆಟಿಂಗ್ ಬಗ್ಗೆ ಮೊದಲು ಯೋಚನೆ ಮಾಡದೆ ನಾವು ಉದ್ದಿಮೆಗಳನ್ನು ಪ್ರಾರಂಭಿಸುವುದು ಅದು ಒಂದು ಕಾರಣ.

ನಮ್ಮ ಉದ್ದಿಮೆಗಳೆಲ್ಲಾ ಹೀನಸ್ಥಿತಿಗೆ ಬರುವುದಕ್ಕೆ ಮತ್ತು ನಮ್ಮ ಆರ್ಥಿಕ ಪರಿಸ್ಥಿತಿ ಅಷ್ಟೇ ಕೆಳಮಟ್ಟಕ್ಕೆ ಹೋಗುವುದಕ್ಕೆ ಕಾರಣ. ನಾವು ಮೊಟ್ಟಮೊದಲನೆಯದಾಗಿ ಮಾರ್ಕೆಟಿಂಗ್ ಪೊಟೆನ್‌ಷಿಯಲ್, ಫೀಸಿಬಿಲಿಟಿ ಅದನ್ನು ನಾವು ಮಾಡಬೇಕಾಗಿದೆ. ಅದನ್ನು ಮಾಡುವ

ಸಂದರ್ಭದಲ್ಲಿ ಪ್ರೊಫೆಸರ್ ಮಾರ್ಕೆಟಿಂಗ್ ಕನ್‌ಸಲ್ಟೆಂಟ್ಸ್ ಎಂದು ರಾಷ್ಟ್ರಮಟ್ಟದಲ್ಲಿ ಸಾಕಷ್ಟು ಇದ್ದಾರೆ . ಅಂತರರಾಷ್ಟ್ರೀಯ ಮಟ್ಟದಲ್ಲಿ ವ್ಯಾಪಾರ ಮಾಡಬೇಕಾಗಿದ್ದರೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಮಾರ್ಕೆಟಿಂಗ್ ಕನ್ಸಲ್ಟೆಂಟ್ಸ್ ಇದ್ದಾರೆ. ಅವರನ್ನು ಬರಮಾಡಿಕೊಳ್ಳಬೇಕು. ಅವರ ಮೂಲಕ ಸಲಹೆ ಪಡೆದುಕೊಳ್ಳಬೇಕು. ಪಡೆದು ನಮ್ಮಲ್ಲಿ ಉದ್ದಿಮೆಗಳನ್ನು ಪ್ರಾರಂಭ ಮಾಡುವುದು, ಉತ್ಪತ್ತಿ ಮಾಡುವ ಕೆಲಸ, ಮಾರ್ಕೆಟಿಂಗ್ ಮಾಡುವ ಕೆಲಸ ಮಾಡಬೇಕು. ಅದನ್ನು ಮಾಡದೇ ಇರುವ ಕಾರಣದಿಂದಾಗಿ ನಾವು ಬಹಳ ತೊಂದರೆಗೀಡಾಗಿದ್ದೇವೆಂದು ಹೇಳುತ್ತಿದ್ದೇನೆ. ಸೆಲ್ಫ್ ಎಂಪ್ಲಾಯ್‌ಮೆಂಟ್ ವಿಚಾರವೂ ಅಷ್ಟೇ. ಮಾರ್ಕೆಟಿಂಗ್ ಬಗ್ಗೆ ತೀವ್ರ ಗಮನ ಕೊಡದೇ ಹೋದರೆ ಸಾಧ್ಯವಿಲ್ಲ ಎಂದು ಹೇಳುತ್ತಿದ್ದೇನೆ. ಈಗಾಗಲೇ ಪಬ್ಲಿಕ್ ಎಂಟರ್‌ಪ್ರೈಸಸ್ ಬಗ್ಗೆ ಸಾಕಷ್ಟು ಹೇಳಿದ್ದೇನೆ, ನಮ್ಮಲ್ಲಿರತಕ್ಕ ಕರಪ್ಷನ್, ಫೇವರಿಟಿಸಂ, ನೆಪೋಟಿಸಂ, ಮಾಲ್‌ಪ್ರಾಕ್ಟೀಸ್ ಮತ್ತು ಅದ್ಯಕ್ಷತೆ. ನಿಷ್ಠೆರಹಿತವಾದ ಆಡಳಿತಗಾರರನ್ನು ಹಾಕಿರುವ ಕಾರಣದಿಂದ 'ನಾವು ಇಷ್ಟು ಏಟು ತಿನ್ನುತ್ತಿದ್ದೇವೆ. ಅದನ್ನು ಬದಲಾವಣೆ ಮಾಡುವುದಕ್ಕೆ ಖಾಸಗೀ ಕ್ಷೇತ್ರದಿಂದ ಪ್ರೊಫೆಷನಲ್ಸ್‌ನ್ನು ಟೈಮ್‌ಬೌಂಡ್ ಪ್ರೋಗ್ರಾಮ್ ಹಾಕಿಕೊಟ್ಟು 5 ವರ್ಷಕ್ಕೋ, 10 ವರ್ಷಕ್ಕೋ ಕಾಂಟ್ರಾಕ್ಟ್ ಬೇಸಿಸ್ ಮೇಲೆ ಅವರನ್ನು ಕೆಲಸಕ್ಕೆ ತೆಗೆದುಕೊಂಡು ಅವರ ಮೂಲಕ ಕೆಲಸ ಮಾಡಿಸಿದರೆ ನಮ್ಮ ಕೈಗಾರಿಕೆಗಳನ್ನು ಮತ್ತೆ ಆರೋಗ್ಯಕರಣ ಮಟ್ಟಕ್ಕೆ ತಂದು ನಮ್ಮ ಆರ್ಥಿಕ ಪರಿಸ್ಥಿತಿ ಪ್ರಗತಿ ಸಾಧಿಸುವುದಕ್ಕೆ ಸಾಧ್ಯವಾಗುತ್ತದೆಯೆನ್ನುವ ಮಾತನ್ನು ನಾನು ಬಹಳ ನಂಬಿಕಾಪೂರ್ವಕವಾಗಿ ಹೇಳುತ್ತಿದ್ದೇನೆ. ನಾನು ಇನ್ನೂ ಪ್ರಾರಂಭದ ಹಂತದಲ್ಲಿಯೇ ಇದ್ದೇನೆ. ಮಾತನಾಡುವುದು ಬಹಳ ಇದೆ. ದಯವಿಟ್ಟು ನನಗೆ ಬಿಡಿ ಮತ್ತು ಈಗ ನಾವು ಮತ್ತೊಂದು ತಪ್ಪು ಮಾಡುತ್ತಿದ್ದೇವೇನೆಂದರೆ, ನಮ್ಮ ಕಾರ್ಮಿಕ ಮಂತ್ರಿಗಳು ಇದನ್ನು ಗಮನಿಸಬೇಕು. ನಮ್ಮ ಕಾರ್ಮಿಕ ಮಂತ್ರಿಗಳು ಇಲ್ಲಿ ಇದ್ದಾರೋ ಇಲ್ಲವೋ?

ಶ್ರೀ ವಾಟಾಳ್ ನಾಗರಾಜ್ : ಕಾರ್ಮಿಕ ಮಂತ್ರಿಗಳೂ ಇಲ್ಲ, ಸೀಮೆಎಣ್ಣೆ ಮಂತ್ರಿಗಳೂ ಇಲ್ಲ, ಸಕ್ಕರೆ ಮಂತ್ರಿಗಳೂ ಇಲ್ಲ. ಇಬ್ಬರೇ ಇಬ್ಬರು ಘನವಾದ ಮಂತ್ರಿಗಳು ಕುಳಿತಿದ್ದಾರೆ. ನಾವು ನೋಡಿಕೊಂಡು ಕುಳಿತಿದ್ದೇವೆ ಅಷ್ಟೇ.

ಶ್ರೀ ಎ. ಕೆ. ಅನಂತಕೃಷ್ಣ : ಅಧ್ಯಕ್ಷರೇ, ನಾನು ನಾಳೆ ಮುಂದುವರಿಸುವುದಕ್ಕೆ ಅವಕಾಶ ಕೊಡಿ. ನಾವು ಕಾರ್ಮಿಕರ ವಿಷಯದಲ್ಲಿ ಬಹಳ ಮೊಸಳೆ ಕಣ್ಣೀರು ಬಿಡುತ್ತೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ನೀವು ಹೇಳಿದ ಎಲ್ಲಾ ಸಲಹೆಗಳನ್ನು ಮುಂದೆ ಇಂಪ್ಲಿಮೆಂಟ್ ಮಾಡಬೇಕಾದವರು ಈ ಕಡೆ ಕುಳಿತಿದ್ದೇವೆ. ಅಲ್ಲಿ ಇರುವವರು ಮಾಡುವುದಿಲ್ಲ ಎಂದು ನೀವು ನಮಗೆ ಹೇಳಿ. ನಾವು ಕೇಳುತ್ತೇವೆ.

ಶ್ರೀ ಎ. ಕೆ. ಅನಂತಕೃಷ್ಣ : ನೀವು ಅಲ್ಲಿಂದಲೇ ನನಗೆ ಬೆಂಬಲ ಕೊಡಿ. ಅಲ್ಲಿಂದ ಬೆಂಬಲ ಕೊಟ್ಟರೆ ನಮ್ಮ ಮುಖ್ಯಮಂತ್ರಿಮಂಡಲ ನನ್ನ ಅಭಿಪ್ರಾಯಕ್ಕೆ ಒಪ್ಪಿಗೆ ಕೊಟ್ಟು ನಿಮ್ಮ ಬೆಂಬಲಕ್ಕೆ ಅವರು ಒಪ್ಪಿಕೊಳ್ಳುತ್ತಾರೆ. ಈಗ ನಾವು ಕಾರ್ಮಿಕರ ವಿಷಯದಲ್ಲಿ ಸಾಕಷ್ಟು ಕಾನೂನು ಪ್ರಕಾರ ಅನುಕಂಪ ತೋರಿಸುತ್ತೇವೆ. ಅವರ ಮೇಲೆ ವಿಶ್ವಾಸವನ್ನು ತೋರಿಸುತ್ತೇವೆ. ಅವರ ಒಂದು ಶಕ್ತಿ ವಿಷಯದಲ್ಲಿ, ಯೋಚನೆ ಮಾಡಿ ತೀರ್ಮಾನ ಹೇಳುತ್ತೇವೆ. ಆದರೆ ಈ ಕಾರ್ಖಾನೆಗಳು ಎಲ್ಲಿ ನಶಿಸಿ ಹೋಗುತ್ತಿವೆ ಅಂತಹ ಕಡೆ ಕಾರ್ಮಿಕರನ್ನು, ಸಂಘಟಿತ ಕಾರ್ಮಿಕ ಸಂಸ್ಥೆಗಳನ್ನು, ಅವರ ನಾಯಕರನ್ನು ಬರಮಾಡಿಕೊಂಡು ನೀವು ಕೆಲಸ ಮಾಡುತ್ತಿರುವ ಕ್ಷೇತ್ರದಲ್ಲಿ ಕಷ್ಟ ಪಡುತ್ತಿದ್ದೇವೆ, ಕಾರ್ಖಾನೆಯನ್ನು ಮುಂದುವರಿಸಬೇಕಾದರೆ ನಿಮ್ಮ ಜವಾಬ್ದಾರಿ ಏನು, ನೀವು ಏನು ಮಾಡುತ್ತೀರೆಂದು ಹೇಳಿ ಅವರನ್ನು ಬರಮಾಡಿಕೊಂಡು

ಸರಿಯಾದ ರೀತಿಯಲ್ಲಿ ಜವಾಬ್ದಾರಿಯುತವಾಗಿ ನಿಷ್ಠೆಯಿಂದ, ದಕ್ಷತೆಯಿಂದ ಕೇಳಿದ್ದೇ ಆದರೆ ಅವರೂ ಆಗ ಜವಾಬ್ದಾರಿ ಹೊತ್ತು ನಮ್ಮ ಜೊತೆ ಸಹಕಾರ ಕೊಡುವುದಕ್ಕೆ ಅವಕಾಶವಾಗುತ್ತದೆ. ಅದಕ್ಕೇ ವರ್ಕರ್ಸ್ ಪಾರ್ಟಿಸಿಪೇಷನ್ ಫ್ರಮ್ ಫ್ಲೋರ್ ಟು ದಿ ಮ್ಯಾನೇಜ್‌ಮೆಂಟ್ ಲೆವಲ್ ಎಂದು ಹೇಳುತ್ತಾರೆ. ನಮ್ಮಲ್ಲಿ ಹೇಳುವುದು ಎಂದರೆ, ನಮ್ಮಲ್ಲಿ ಫ್ಲೋರ್ ಲೆವಲ್‌ನಲ್ಲಿ ಅಲ್ಲಿ ಇಲ್ಲಿ ಸಣ್ಣಪುಟ್ಟದ್ದರಲ್ಲಿ ಅವರನ್ನು ಉಪಯೋಗಿಸುವ ಹಾಗೆ ಮಾಡಿ ಮೇನೇಜ್‌ಮೆಂಟ್ ಲೆವಲ್‌ನಲ್ಲಿ ಅವರಿಗೆ ಯಾವ ಒಂದು ಜವಾಬ್ದಾರಿ ಸ್ಥಾನ ಕೊಟ್ಟು ಅವರನ್ನು ಜವಾಬ್ದಾರಿಯಿಂದ ಇರುವಂತೆ ಮಾಡಬೇಕಾಗಿದೆ ಆ ಕೆಲಸವನ್ನು ಮಾಡುತ್ತಿಲ್ಲ. ಅದನ್ನು ನಂಬುತ್ತಿಲ್ಲ. ನಾವು ಸಮಾಜವಾದ ಘೋಷಣೆ ಮಾಡುತ್ತೇವೆ. ಕಾರ್ಮಿಕರ ಪರವಾಗಿ ಮಾತನಾಡುತ್ತೇವೆ. ಕಾರ್ಮಿಕರನ್ನು ಉಪಯೋಗಿಸಿಕೊಳ್ಳುತ್ತೇವೆ. ಕಾರ್ಮಿಕರನ್ನು ನಂಬುವುದಿಲ್ಲ. ಹಾಗೆಯೇ ಗ್ರಾಹಕರನ್ನು ನಾವು ಆಕರ್ಷಿಸುತ್ತೇವೆ. ನಾವು ಉತ್ಪತ್ತಿ ಮಾಡಿದ್ದೆಲ್ಲಾ ಗ್ರಾಹಕರು ಉಪಯೋಗಿಸಬೇಕೆಂದು ಹೇಳುತ್ತೇವೆ. ಆದ್ದರಿಂದ, ನಮ್ಮ ಕಾರ್ಖಾನೆಗಳು ಬೆಳೆಯಬೇಕು. ಅದರಿಂದ ಜನತೆಯ ಒಂದು ಸಂಪತ್ತು ಬೆಳೆಯಬೇಕೆಂದು ಹೇಳುತ್ತೇವೆ. ಆದರೆ, ಗ್ರಾಹಕರ ಪ್ರತಿನಿಧಿಗಳನ್ನು ಆ ಕಾರ್ಖಾನೆಗಳಲ್ಲಿ, ಉದ್ಯಮಗಳಲ್ಲಿ ನಾವು ಪ್ರತಿನಿಧಿಯಾಗಿ ಉಪಯೋಗಿಸುತ್ತಿಲ್ಲ.

ಆದ್ದರಿಂದ ನಮ್ಮ ನಾಗರೀಕರ ಮಧ್ಯೆ ಗ್ರಾಹಕರ ಪ್ರತಿನಿಧಿಯಾಗಿರತಕ್ಕವರು ಒಳ್ಳೆಯ ಒಂದು ಅಭಿಪ್ರಾಯಗಳನ್ನು ಕೊಡುವುದು ಮತ್ತು ದಕ್ಷ ಆಡಳಿತಕ್ಕೆ ಸಹಾಯ ಮಾಡುವಂತಹವರು ಇದ್ದಾರೆ. ಕಾರ್ಮಿಕ ಪ್ರತಿನಿಧಿಗಳು ಇದ್ದಾರೆ. ಅವರನ್ನು ಉಪಯೋಗಿಸಿಕೊಳ್ಳುವುದು ಅವಶ್ಯಕತೆ ಇದೆ. ಎಲ್ಲಿಂದ ಸಾಲ ಪಡೆಯುತ್ತಾರೆ. ಅಲ್ಲಿ ಎಂದರೆ, ಬ್ಯಾಂಕುಗಳಲ್ಲಿ, ಫೈನಾನ್ಸ್ ಕಾರ್ಪೋರೇಷನ್‌ನಲ್ಲಿ, ಅವರ ಪ್ರತಿನಿಧಿಗಳು ಕೂಡ ಇರಬೇಕೆಂದು ನಾವು ಹೇಳುತ್ತೇವೆ. ಆ ಪ್ರತಿನಿಧಿಗಳು ಯಾರೂ ಕೆಲಸ ಮಾಡುವುದಿಲ್ಲ. ಅವರು ಅಲ್ಲಿ ಹೋಗುತ್ತಾರೆ ಮನೆಗೆ ವಾಪಸ್ಸು ಬರುತ್ತಾರೆ. ಬೋರ್ಡ್ ಮೀಟಿಂಗ್‌ನಲ್ಲಿ ಸ್ವಂತ ಕೆಲಸ ಮಾಡಿಕೊಂಡು ಮತ್ತೆ ಅಲ್ಲೇ ಬಿಡುತ್ತಾರೆ. ಅಲ್ಲದಿದ್ದರೆ ಫೈನಾನ್ಸ್ ಕಾರ್ಪೋರೇಷನ್ ಡೈರೆಕ್ಟರ್‌ಗಳು ಇರುತ್ತಾರೆ, ಕೆಎಎಲ್‌ಡಿಬಿ ಡೈರೆಕ್ಟರ್ ಇರುತ್ತಾರೆ. ಐಡಿಬಿಐ ಡೈರೆಕ್ಟರ್ ಇರುತ್ತಾರೆ, ಎಲ್ಲಾ ತರಹ ಡೈರೆಕ್ಟರ್‌ಗಳು ಐಸಿಎ ಡೈರೆಕ್ಟರ್‌ಗಳು ಇರುತ್ತಾರೆ, ಇವರೆಲ್ಲಾ ಇದ್ದು ಇನ್ನೂ ಉದ್ಯಮಗಳು ಕ್ಷೀಣವಾಗುತ್ತಿವೆ. ಅಂದರೆ ಅವರ ಮೇಲೆ ಏನು ಜವಾಬ್ದಾರಿ? ಅವರ ಮೇಲೆ ಶಿಸ್ತಿನ ಕ್ರಮ ಜರುಗಿಸುತ್ತೇವೆಯೇ? ಅವರ ಮೇಲೆ ನೀವು ಯಾವ ರೀತಿಯಿಂದ ಅಕೌಂಟೆಬಿಲಿಟಿ ಫಿಕ್ಸ್ ಮಾಡುವ ಬಗ್ಗೆ ತೀವ್ರವಾಗಿ ನಾವು ಯೋಚನೆ ಮಾಡಬೇಕಾಗಿದೆ. What is happening today is lack of control., lack of desire to put things in order,

ನಶಿಸಿ ಹೋಗುತ್ತಿವೆ ಎನ್ನುವ ಭಾವನೆ ಬಂದಾಗ ಆ ಕೂಸನ್ನು ಹಾಗೆಯೇ ಕೊಂದು ಹಾಕಬೇಕಾಗಿತ್ತು ಎನ್ನುವ ಕರ್ತವ್ಯ ಭಾವನೆ ನಮ್ಮಲ್ಲಿ ಮೂಡದಿರುವುದರಿಂದ ಉದ್ಯಮಗಳು ರೋಗಪೀಡಿತವಾಗುವುದಕ್ಕೆ ಕಾರಣವಾಗುತ್ತಿವೆ. ರೋಗಪೀಡಿತವಾದ ತಕ್ಷಣ ಅದನ್ನು ಊರಿಂದ ಆಚೆಗೆ ಹಾಕೋಣ ಯಾರಾದರೂ ಅದನ್ನು ಕಾಪಾಡಿಕೊಂಡು ಹೋಗಲಿ ಎನ್ನುವ ಭಾವನೆ ಬೆಳೆದಿದೆ ಎನ್ನುವ ಮಾತನ್ನು ನಾನು ಹೇಳುತ್ತಿದ್ದೇನೆ. 2136.89 ಕೋಟಿ ರೂಪಾಯಿಗಳನ್ನು ನಾವು ಈ ಉದ್ಯಮಗಳಲ್ಲಿ ಹಾಕಿದ್ದೇವೆ. ಖಾಸಗೀಕರಣ ಮಾಡಿ 2136 ಕೋಟಿ ರೂಪಾಯಿ ನಮ್ಮ ಕ್ಯಾಶ್ ಇನ್‌ವೆಸ್ಟ್‌ಮೆಂಟ್ ಅಲ್ಲಿದೆ. ಆದರೆ ಅಲ್ಲಿರುವ ಭೂಮಿ, ಆ ಕಾರ್ಖಾನೆಯ ಕಟ್ಟಡಗಳು, ಅಲ್ಲಿರುವ ಮೆಷಿನರಿ ಇವೆಲ್ಲಾ ನಾವು ಲೆಕ್ಕ ತೆಗೆದುಕೊಂಡರೆ ಅದು 8-10 ಪಟ್ಟು ಜಾಸ್ತಿ ಆಗುತ್ತದೆ. ಖಾಸಗಿಯವರಿಗೆ ಕೊಟ್ಟ ತಕ್ಷಣ ಅವರು ಏನು ಮಾಡುತ್ತಾರೆ? ಅದನ್ನು ಅಲ್ಲಿಗೆ ಬಂದ್ ಮಾಡಿ ರಿಯಲ್ ಎಸ್ಟೇಟ್ ವ್ಯಾಪಾರಕ್ಕೆ ಇಳಿದು ಅದರಿಂದ ಬರುವ ದುಡ್ಡಿನಲ್ಲಿ ಲಾಭದಲ್ಲಿ ನಿಮಗೊಂದಿಷ್ಟು ಕೊಟ್ಟು ಉಳಿದದ್ದು, ಅವರ ಮನೆಗೆ ತೆಗೆದುಕೊಂಡು

ಹೋಗುತ್ತಾರೆ. ಇದನ್ನು ನೀವು ತೀವ್ರವಾಗಿ ಯೋಚನೆ ಮಾಡಬೇಕಾಗಿದೆ. ಎಂಇಐ ವಿಷಯ ನಿಮಗೆ ಗೊತ್ತಿದೆ. ಎಂಇಐಯನ್ನು ತೆಗೆದುಕೊಳ್ಳುವುದಕ್ಕೆ ಜನ ತಯಾರಾಗಿದ್ದಾರೆ. ಏಕೆಂದರೆ ಅದರ ಆಸ್ತಿಪಾಸ್ತಿ ಜಾಸ್ತಿಯಿದೆ. 1ರಿಂದ 10 ಪಟ್ಟು ದುಡ್ಡು ಬರುತ್ತದೆ. ಅದನ್ನು ತೆಗೆದುಕೊಳ್ಳುತ್ತಾರೆ. ಮಿನರ್ವಮಿಲ್ ತೆಗೆದುಕೊಳ್ಳುತ್ತಾರೆ, ರಾಜಾ ಮಿಲ್ ತೆಗೆದುಕೊಳ್ಳುತ್ತಾರೆ. ಹಾಗೆಯೇ ನಾಳೆ ಕೆಎಸ್‌ಆರ್‌ಟಿಸಿ ಕೊಡುತ್ತೇವೆಂದರೆ, ಕೆಎಸ್‌ಆರ್‌ಟಿಸಿ ಆಸ್ತಿಪಾಸ್ತಿಗಳಿವೆ ಅವನ್ನೆಲ್ಲಾ ಮಾರಿಕೊಂಡು ಹೋಗುವುದಕ್ಕೆ ಅನುಕೂಲ ಮಾಡಿಕೊಳ್ಳುತ್ತಾರೆ. ಆದ್ದರಿಂದ ನಾನು ತಮ್ಮಲ್ಲಿ ಕಳಕಳಿಯಿಂದ ಹೇಳುವುದೇನೆಂದರೆ ...

ಶ್ರೀ ಹೆಚ್. ಏಕಾಂತಯ್ಯ : ಏಕೆ ಅಲ್ಲಿಗೆ ನಿಲ್ಲಿಸಿದಿರಿ. ವಿಧಾನಸೌಧವನ್ನು ತೆಗೆದುಕೊಳ್ಳುತ್ತಾರೆಂದು ಹೇಳಿ.

ಶ್ರೀ ಎ. ಕೆ. ಅನಂತಕೃಷ್ಣ : ನನ್ನ ಮಾತು ಕೇಳದಿದ್ದರೆ ಅಂತಿಮದಲ್ಲಿ ವಿಧಾನಸೌಧವನ್ನು ಮಾರಿಕೊಳ್ಳುವ ಪರಿಸ್ಥಿತಿ ನಿಮ್ಮಿಂದಲೂ ಆಗುತ್ತದೆ. ದಯವಿಟ್ಟು ನಾನು ಹೇಳುವುದನ್ನು ಕೇಳಿ. ತಾವು ಮಾಡಿದ ಕೆಲಸ ನಾವು ಮಾಡಿದ್ದಲ್ಲ. ನಿಮ್ಮ ಆಡಳಿತದಲ್ಲಿ ಒಂದಲ್ಲ ಒಂದು ದುರ್ನಡತೆಗಳಿಂದ ದುರಾಡಳಿತದಿಂದ ಇಲ್ಲಿಗೆ ಬಂದಿದ್ದೇವೆ, ಅದನ್ನು ಏತಕ್ಕೆ ಜ್ಞಾಪಿಸುತ್ತೀರಿ? ಹಿಂದೆ ಮಾಡಿದ್ದನ್ನು ನಾವು ಮುಂದುವರಿಸುತ್ತಿದ್ದೇವೆ. ನಾವು ಮಾಡಿದ್ದನ್ನು ಇನ್ನೊಬ್ಬರು ಮುಂದುವರಿಸುತ್ತಾರೆ. ನಾನು ಯಾರನ್ನು ಡಿಫೆಂಡ್ ಮಾಡಿ ಮಾತನಾಡುತ್ತಿಲ್ಲ.

ಶ್ರೀ ಪಿ. ಜಿ. ಆರ್. ಸಿಂಧ್ಯ : ಆಡಳಿತ ಉತ್ತಮವಾಗಿದೆ ತಾವು ಮಾತನಾಡಿ.

ಶ್ರೀ ಎ. ಕೆ. ಅನಂತಕೃಷ್ಣ : ಆಳಲಿ ಬಿಡಿ. ಉತ್ತಮವಾಗಿದ್ದರೆ ಅದನ್ನು ನೀವು ಖಂಡಿಸಿ ಮಾತನಾಡಿ. ಆದ್ದರಿಂದ ನಾನು ಹೇಳುವುದು 2 ಸಾವಿರ ಕೋಟಿ ರೂಪಾಯಿಗಳು ನಿಮ್ಮ ಕೈಗೆ ಬಂದರೆ ಖಾಸಗೀಕರಣ ಮಾಡಿ ಎಷ್ಟು ದಿನ ಬಾಳುತ್ತದೆ ಸ್ವಾಮಿ ಆ ಹಣ ? ಆ ಹಣ ನಿಮ್ಮ ಸರ್ಕಾರದ ಕೈಯಲ್ಲಿ ಇರುತ್ತದೆ? ಅದು ಒಂದು ತಿಂಗಳಿನಲ್ಲಿ ಖಾಲಿಯಾಗುತ್ತದೆ. ಅಲ್ಲಿನ ಉದ್ಯಮ ಹೋಯಿತು, ಅಲ್ಲಿನ ಆಸ್ತಿಪಾಸ್ತಿ ಹೋಯಿತು ನಿಮ್ಮ ಸರ್ಕಾರದ ಖಜಾನೆ ಖಾಲಿಯಾಯಿತು. ಯಾವ ಗುರಿಸಾಧನೆಗೆ ಖಾಸಗೀಕರಣ ಮಾಡಬೇಕು? ಖಾಸಗಿಯವರ ಕೈಗೆ ಏಕೆ ಕೊಡಬೇಕು? ಇದನ್ನೆಲ್ಲಾ ನಾವು ತೀವ್ರವಾಗಿ ಯೋಚನೆ ಮಾಡಬೇಕೆಂದು ಹೇಳಬಯಸುತ್ತೇನೆ. ಇವತ್ತು ಇರುವ ಆಡಳಿತಾಧಿಕಾರಿಗಳು ಯಾರಿದ್ದಾರೆ, ನಮ್ಮ ಅಡ್ಮಿನಿಸ್ಟ್ರೇಟರ್ ಅವರಿಗೆ ಖಾಸಗೀಕರಣದ ಮೇಲೆ ನಂಬಿಕೆ ಇದೆಯೋ ಇಲ್ಲ ರಾಷ್ಟ್ರೀಕರಣದ ಮೇಲೆ ನಂಬಿಕೆ ಇದೆಯೋ ಎನ್ನುವುದನ್ನು ಗುರುತಿಸಬೇಕಾದ ಸಮಯ ಇವತ್ತು ಬಹಳ ತೀವ್ರವಾಗಿ ಬಂದಿದೆಯೆಂದು ಹೇಳುತ್ತಿದ್ದೇನೆ. ರಾಷ್ಟ್ರೀಕರಣದ ಮೇಲೆ ನಂಬಿಕೆಯಿರುವವರ ಕೈಗೆ ಜವಾಬ್ದಾರಿಯನ್ನು ಕೊಡಬೇಕು. ಖಾಸಗೀಕರಣದ ಮೇಲೆ ಯಾರಿಗೆ ನಂಬಿಕೆ ಇದೆ ಅವರನ್ನು ಇತರ ಆಡಳಿತಾಧಿಕಾರಿಗಳಾಗಿ ನಮ್ಮ ಆಡಳಿತ ಕ್ಷೇತ್ರಗಳಲ್ಲಿ ಬಿಡಬೇಕು. ಅದನ್ನು ಮಾಡದೇ ಹೋದರೆ, ನಾವು ಭವಿಷ್ಯದಲ್ಲಿ ಬಹಳ ನೋವು ತಿನ್ನುತ್ತೇವೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಹೆಚ್. ಏಕಾಂತಯ್ಯ : ಮಾನ್ಯ ಅಧ್ಯಕ್ಷರೇ, ಮಾನ್ಯ ಅನಂತಕೃಷ್ಣರವರು ಏನು ಪ್ರಸ್ತಾಪ ಮಾಡುತ್ತಿದ್ದಾರೆ, ಅದರ ಬಗ್ಗೆ, ಅವರಿಂದ ಸ್ಪಷ್ಟೀಕರಣ ಕೇಳಬಯಸುತ್ತೇನೆ. ಇವತ್ತಿನ ದಿವಸ, ಈ ಆಯವ್ಯಯ ಪತ್ರದಲ್ಲಿ, ಅವರ ಮುಖ್ಯಮಂತ್ರಿಗಳು, ಅವರ ಪಕ್ಷದ ಸರ್ಕಾರದ ಮುಖ್ಯಮಂತ್ರಿಗಳು ಏನು ಹೇಳಿದ್ದಾರೆ, ಕೇಂದ್ರಸರ್ಕಾರದ ಉದಾರವಾದ ಆರ್ಥಿಕ ನೀತಿಯಿಂದಾಗಿ, ಈ ದೇಶದಲ್ಲಿ ಖಾಸಗೀಕರಣ ಆಗಬೇಕು. ಅದಕ್ಕೆ ಹೆಚ್ಚು ಪ್ರೋತ್ಸಾಹ **4th**

ಕೊಡುವ ರೀತಿಯಲ್ಲಿ ನಮ್ಮ ನೀತಿಯನ್ನು ಮಾರ್ಪಡಿಸಬೇಕೆಂಬ ಮಾತನ್ನು ಹೇಳಿದ್ದಾರೆ. ಅವರಿಂದ ಸ್ಪಷ್ಟೀಕರಣ ಬಯಸುತ್ತೇನೆ. ಅನಂತಕೃಷ್ಣರವರು ಈ ಮಾತನ್ನು ವೈಯಕ್ತಿಕವಾಗಿ ಹೇಳುತ್ತಿದ್ದಾರೆಯೇ ಅಥವಾ ಅವರ ಪಕ್ಷದ ಆರ್ಥಿಕ ನೀತಿಯನ್ನು ಸಮರ್ಥನೆ ಮಾಡುತ್ತಿದ್ದಾರೋ ಅಥವಾ ಒಂದು ವೇಳೆ ಸಮರ್ಥನೆ ಮಾಡದಿದ್ದರೆ ಸ್ಪಷ್ಟವಾಗಿ ಹೇಳಬೇಕು. ನಾನು ಆರ್ಥಿಕ ನೀತಿಗೆ ವಿರೋಧವಾಗಿದ್ದೇನೆ, ಖಾಸಗೀಕರಣಕ್ಕೆ ವಿರೋಧವಾಗಿದ್ದೇನೆ ಎನ್ನುವ ಮಾತನ್ನು ಹೇಳಬೇಕು. ಇಲ್ಲದಿದ್ದರೆ ನಮಗೆ ಅರ್ಥವಾಗುವುದಿಲ್ಲ.

ಶ್ರೀ ಎ. ಕೆ. ಅನಂತಕೃಷ್ಣ : ನಾನು ಪ್ರಾರಂಭ ಮಾಡಿದಾಗ ತಮ್ಮ ಗಮನ ನನ್ನ ಕಡೆಗೆ ಇರಲಿಲ್ಲ. ನಾನು ಪ್ರಾರಂಭ ಮಾಡಿದಾಗಲೇ ಹೇಳಿದೆ. ಕೇಂದ್ರಸರ್ಕಾರದ ನೀತಿಯನ್ನು ಅನುಸರಿಸಿ, ನಮ್ಮ ರಾಜ್ಯದ ಮುಖ್ಯಮಂತ್ರಿಗಳು ಆಯವ್ಯಯ ಪತ್ರವನ್ನು ನಮ್ಮ ಮುಂದೆ ಇಟ್ಟಿದ್ದಾರೆ ಎಂದು ನಾನು ಪ್ರಾರಂಭದಲ್ಲೇ ಹೇಳಿದೆ.

ಶ್ರೀ ಹೆಚ್. ಏಕಾಂತಯ್ಯ : ಇದನ್ನು ತಾವು ಒಪ್ಪುತ್ತೀರಾ ಎಂದು ಕೇಳುತ್ತಿದ್ದೇನೆ. ಈ ಬಗ್ಗೆ ನಿಮ್ಮ ಅಭಿಪ್ರಾಯ ಏನು?

SRI. A. K. ANANTHA KRISHNA : I Want to pin-point. I am now addressing myself to the Chief Minister and to the Ministry.

ಶ್ರೀ ಹೆಚ್. ಏಕಾಂತಯ್ಯ : ನೀವು ಸ್ಪಷ್ಟವಾಗಿ ಹೇಳಿ. ಕೇಂದ್ರ ಸರ್ಕಾರದ ಉದಾರವಾದ ಆರ್ಥಿಕ ನೀತಿಗೆ ವಿರೋಧವಾಗಿದ್ದೇನೆ ಎನ್ನುವ ಮಾತನ್ನು ಹೇಳಿ, ಅದರಿಂದೇನೂ ತಪ್ಪಿಲ್ಲ.

ಶ್ರೀ ಎ. ಕೆ. ಅನಂತಕೃಷ್ಣ : ತಾವು ಪೂರ್ತಿ ಅರ್ಥಮಾಡಿಕೊಳ್ಳಿ, ನಾನು ಬೇಡ ಎಂದು ಹೇಳಲಿಲ್ಲ ; ಟೀಕೆ ಮಾಡಿ, ಸಮರ್ಥನೆ ಮಾಡಿ, ವಿರೋಧ ಮಾಡಿ, ಎಲ್ಲಾ ಮಾಡಿ, ನಾನು ಬೇಡ ಎಂದು ಹೇಳಲಿಲ್ಲ. ನಿಮಗೆ ಅವಕಾಶ ಇದೆ. ನಾನು ಹೇಳುವುದೇನೆಂದರೆ, ನಮ್ಮ ಪಕ್ಷದ ಸುಮಾರು 20-25 ವರ್ಷದ ಸಿದ್ಧಾಂತ ಏನಿತ್ತು, ಯಾವ ರೀತಿ ನಾವು ಮುಂದುವರಿಸಿಕೊಂಡು ಬಂದೆವು, ಇದನ್ನು ಮಾನ್ಯ ಖರ್ಗೆಯವರು ಕೂಡ ಹೇಳಿದರು. 1969-70ನೇ ಇಸವಿಯಲ್ಲಿ ನಮ್ಮ ಪಕ್ಷದಲ್ಲಿ ಕೆಲವು ಸಿದ್ಧಾಂತಗಳನ್ನು ಬದಲಾವಣೆ ಮಾಡುವಂಥ ರೀತಿಯಲ್ಲಿ, ಮೂಲಭೂತವಾಗಿ ಬದಲಾವಣೆ ಮಾಡುವುದಕ್ಕೆ ನಮ್ಮ ಪಕ್ಷದವರು ತೀವ್ರವಾಗಿ ಪ್ರಭಾವವನ್ನು ಬೀರಿ, ನಮ್ಮ ದಿವಂಗತ ಪ್ರಧಾನಿ ಹಾಗೂ ನಮ್ಮ ನಾಯಕಿ ಇಂದಿರಾಗಾಂಧಿಯವರು ಬದಲಾವಣೆ ಮಾಡಿಕೊಂಡರು. ಅದೇ ಕಾರಣದಿಂದ ಕಾಂಗ್ರೆಸ್ ಪಕ್ಷ ಎರಡು ತುಂಡಾಗಿ ಹೋಯಿತು. ನೀವು ಸ್ವಲ್ಪ ತಾಳ್ಮೆಯಿಂದ ಇರಿ, ಏಕೆ ಆತುರ ಮಾಡುತ್ತೀರಿ, ನೀವಿನ್ನೂ ಸಣ್ಣ ವಯಸ್ಸಿನವರು, ನಾನಾದರೂ ಬೇಗ ಹೋಗುವವನು. ಆ ನಮ್ಮ ಸಿದ್ಧಾಂತ ಇನ್ನೂ ಬದಲಾವಣೆಯಾಗಿಲ್ಲ. ಮೂಲಭೂತವಾದ ಸಿದ್ಧಾಂತ ಬದಲಾವಣೆಯಾಗಿಲ್ಲ. ನಾನು ಹರಿಕಥೆ ದಾಸನಾದರೆ ನೀವು ನನ್ನ ಹರಿಕಥೆಯನ್ನು ಕೇಳಬೇಡಿ. ಆರ್ಥಿಕ, ಸಾಮಾಜಿಕ ಸಿದ್ಧಾಂತದ ಆಧಾರದಮೇಲೆ ಮಾತನಾಡುತ್ತಾ ಇದ್ದರೆ, ತಾವು ಗಮನ ಕೊಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದು ಸರಿಯಲ್ಲ ಹೇಳಿ, ಹೇಳಿ ಎಂದು ಅವರೇ ಒತ್ತಾಯ ಮಾಡಿ ಹೇಳಿಸುತ್ತಾರೆ. ಆಮೇಲೆ ಹರಿಕಥೆ ಎಂದು ಹೇಳುತ್ತಾರೆ.

ಶ್ರೀ ಹೆಚ್. ಏಕಾಂತಯ್ಯ : ಮಾನ್ಯ ಖರ್ಗೆಯವರಿಗೆ ಕೇಳುತ್ತೇನೆ. ಕಳೆದ ಎರಡು

ದಶಕಗಳಿಂದ ಮೂಲಭೂತ ಬದಲಾವಣೆಯಾಗಿಲ್ಲವೆಂದು ಹೇಳಿದ್ದಾರೆ. ಆದರೆ, ಅಂತಹ ಮೂಲಭೂತವಾದ ಬದಲಾವಣೆಗಳನ್ನು ಕಳೆದ ಒಂದೂವರೆ, ಎರಡು ವರ್ಷಗಳಿಂದ ನೋಡುತ್ತಿದ್ದೇವೆ. ತಾವೂ ನೋಡುತ್ತಿದ್ದೀರಿ. ಈ ಮೂಲಭೂತ ಬದಲಾವಣೆ ಏನಿದೆ, ಆರ್ಥಿಕ ನೀತಿ ಏನಿದೆ. ಇದಕ್ಕೆ ತಮ್ಮ ಒಪ್ಪಿಗೆ ಇದೆಯೇ?

ಶ್ರೀ ಎ. ಕೆ. ಅನಂತಕೃಷ್ಣ : ನಾನು ಹೇಳುವುದನ್ನು ಕೇಳಿ. ನೀವು ಅರ್ಥಮಾಡಿ ಕೊಳ್ಳುವುದಕ್ಕಿಂತ ಹೆಚ್ಚಾಗಿ, ಈ ತಕರಾರು ತಃಖ್ತೆಯೆಂದು ಹೇಳುತ್ತಾರಲ್ಲಾ, ಆ ರೀತಿ ತಕರಾರು ಮಾಡುವವರೇ ಜಾಸ್ತಿ ಇದ್ದೀರಿ. ನಿಮಗೆ ಇದರಲ್ಲಿ ಸಂತೋಷವಾದರೆ, ಸಂತೋಷಪಡಿ, ನಾನು ಅಡ್ಡಿ ಬರುವುದಿಲ್ಲ. ಆದರೆ, ನಾನು ಏನು ಹೇಳುತ್ತಿದ್ದೇನೆಂದರೆ, ನಾನು ಮತ್ತೆ ಸಮರ್ಥನೆ ಮಾಡುತ್ತಿದ್ದೇನೆ. ನಮ್ಮ ಪಕ್ಷದ ಮೂಲಭೂತ ಸಿದ್ಧಾಂತ 1970-71 ಮತ್ತು 1972ರಲ್ಲೇ ತೀರ್ಮಾನವಾಯಿತು. ಅದಕ್ಕೆ ಒಂದು ಸ್ಥಿರತೆ ಬಂತು, ಬಹಳ ಕಾಲ ಅದನ್ನು ಅಭ್ಯಾಸ ಮಾಡಿದೆವು. ಆದರೆ, ಅದಿನ್ನೂ ಹಾಗೆಯೇ ಇದೆ. ಬದಲಾವಣೆಯಾಗಿಲ್ಲ. ನಮ್ಮ ಪಕ್ಷದ ಸಿದ್ಧಾಂತವನ್ನು ತಾವು ಓದಿ. ಆದರೆ ಇವತ್ತು ಸಮಯೋಚಿತವಾಗಿ ಕೆಲವು ಬದಲಾವಣೆಗಳನ್ನು, some deviation ಎಂದು ಹೇಳಬಹುದು.

There is some sort of deviation from the established conventions, principles, policies and programmes. I do admit, it is a deviation. But I cannot contribute to this deviation, to become a permanent factor. That is my opinion as a Partyman also. ಇರುವ ಮಾತನ್ನು ಹೇಳುವುದಕ್ಕೆ ಹಿಂಜರಿಯಬೇಕಾದ ಅವಶ್ಯಕತೆ ಇಲ್ಲ. ಆದರೆ ಈ ತಾತ್ಕಾಲಿಕವಾದ ಬದಲಾವಣೆ ಏನಾಗಿದೆ ಎಂದು ಹೇಳುತ್ತಿದ್ದೇನೆಂದು ನಾನು ಭಾವಿಸುತ್ತಿದ್ದೇನೆ. ಅದು ಯಾವ ಕಾಲಕ್ಕೂ ಆಗಬಾರದು ಅದು ಪುನರ್ ಬದಲಾವಣೆ ಆಗಬೇಕೆಂದು ನಾನು ಭಾವಿಸುತ್ತೇನೆ ಮತ್ತು ವಾಪಸ್ಸ್ ಬರಬೇಕೆಂದು ಹೇಳುತ್ತಿದ್ದೇನೆ. There is deviation from the policies and programmes of Party. ಇನ್ನು ಪವರ್ ಜನರೇಶನ್ ವಿಷಯದಲ್ಲಿ ನಾನು ಹೆಚ್ಚು ಹೇಳುವುದಿಲ್ಲ ಒಂದೇ ಒಂದು ಮಾತು ಹೇಳುತ್ತೇನೆ. ನಮ್ಮಲ್ಲಿ ಪವರ್ ಜನರೇಷನ್ ಮತ್ತು ಡಿಸ್ಟ್ರಿಬ್ಯೂಶನ್ ಏತಕ್ಕೆ ಪೆಟ್ಟುತಿನ್ನುತ್ತಿದೆ. ಜನತೆಯ ಮನಸ್ಸಿಗೆ ತೃಪ್ತಿಯಾಗುತ್ತಿಲ್ಲ, ತೃಪ್ತಿಕರವಾಗಿ ಏತಕ್ಕೆ ವಿತರಣೆಯಾಗುತ್ತಿಲ್ಲ ಎನ್ನುವುದಕ್ಕೆ ಮೂಲ ಕಾರಣ ನಮ್ಮಲ್ಲಿರುವ ಆಡಳಿತ ವರ್ಗ ಏನಿದೆ ಅವರಲ್ಲಿರುವ ಒಂದು ಅದಕ್ಷತೆ, ನಿಷ್ಠರಹಿತವಾದಂತಹ ಒಂದು ವ್ಯಕ್ತಿತ್ವ. ಸಮಾಜದ ಮೇಲೆ ಪ್ರೇಮ ಇಲ್ಲದ್ದು. ಪ್ರೇಮರಹಿತವಾದಂಥದ್ದು ರಾಷ್ಟ್ರಪ್ರೇಮ ಇಲ್ಲದೆ ಇರುವುದು ಈ ಕಾರಣಗಳಿಗಾಗಿ ಯಾವ ಒಂದು ಅಧಿಕಾರಿಯನ್ನು, ಯಾವ ಕ್ಷೇತ್ರದಲ್ಲಿ ಯಾವ ಸ್ಥಾನದಲ್ಲಿ ಯಾವ ಜವಾಬ್ದಾರಿಯನ್ನು ಕೊಟ್ಟು ಅವರಿಗೆ ಅಕೌಂಟಬಿಲಿಟಿ ಎಂದು ಏನು ಹೇಳುತ್ತೇವೆ ಅದನ್ನು ಮಾಡದೇ ಇರುವುದು, ಪೂರ್ವಿಕರು ಮಾಡಿದಂತಹ ಒಂದು ಲೋಪ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಆದ್ದರಿಂದ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳುತ್ತಿದ್ದೇನೆ, ಮೇಜರ್ ಸರ್ಜರಿ ಎಂದು ಅವರು ಏನು ಹೇಳಿದ್ದಾರೆ ಆ ಮೇಜರ್ ಸರ್ಜರಿಯಲ್ಲಿ ಒಳಪಟ್ಟಿರತಕ್ಕಂಥಾದ್ದು ಕಾರ್ಯಕ್ರಮದಲ್ಲಿ ಇದೂ ಒಂದು ಆಗಬೇಕಾಗಿದೆ.

ಅದು ಕೆ. ಎಸ್. ಆರ್. ಟಿ. ಸಿ. ಆಗಬಹುದು, ಕೆಪಿಸಿ ಆಗಬಹುದು ಕೆಇಬಿ ಆಗಬಹುದು, ಇಲ್ಲಾ ಬೇರೆ ಯಾವುದಾದರೊಂದು ಉದ್ದಿಮೆ ಆಗಿರಬಹುದು ಕಮರ್ಷಿಯಲ್ ಟ್ಯಾಕ್ಸ್ ಡಿಪಾರ್ಟ್‌ಮೆಂಟ್ ಆಗಬಹುದು ಎಕ್ಸೈಜ್ ಡಿಪಾರ್ಟ್‌ಮೆಂಟ್ ಆಗಬಹುದು, ಅಂಥ ಜಾಗದಲ್ಲಿ ಏನು ಒಂದು ಮೇಜರ್ ಸರ್ಜರಿ ಅಂತ ನಮ್ಮ ಮುಖ್ಯಮಂತ್ರಿಗಳು ಬಹಳ ವಿಶ್ವಾಸಪೂರ್ವಕವಾಗಿ ಹೇಳುತ್ತಿದ್ದಾರೆ ಅದನ್ನು ಕಾರ್ಯಗತ ಮಾಡಬೇಕು.

ಶ್ರೀ ವಾಟಾಳ್ ನಾಗರಾಜ್ : ಒಂದು ನಿಮಿಷ .

ಶ್ರೀ ಎ. ಕೆ. ಅನಂತಕೃಷ್ಣ : ನನ್ನ ಒಂದು ಸೆಂಟೆನ್ಸ್ ಮುಗಿಸಿದ ಮೇಲೆ ತಾವು ಮಾತನಾಡಿ.

ಶ್ರೀ ವಾಟಾಳ್‌ನಾಗರಾಜ್ : ನಾವು ಎಷ್ಟು ಹೊತ್ತು ಕುಳಿತಿದ್ದೇವೆ ನಿಮಗೋಸ್ಕರ.

ಶ್ರೀ ಎ. ಕೆ. ಅನಂತಕೃಷ್ಣ : ನೀವು ರಾತ್ರಿ ಎಲ್ಲಾ ಕುಳಿತುಕೊಳ್ಳಬೇಕಾಗುತ್ತದೆ. ನಮ್ಮ ಜೊತೆಯಲ್ಲಿ, ಆತುರಪಡಬೇಡಿ ನಾನು ಮುಗಿಸಿ ತಮಗೆ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಶಸ್ತ್ರ ಚಿಕಿತ್ಸೆ ಮಾಡುವುದಕ್ಕೆ ನಿಮ್ಮ ಕತ್ತರಿ ಮೊಂಡಾಗಿದೆ.

ಶ್ರೀ ಎ. ಕೆ. ಅನಂತಕೃಷ್ಣ : ಅದು ನಿಮ್ಮ ಭಾವನೆ. ಒಳ್ಳೆಯ ಕತ್ತರಿ ಎಲ್ಲಿ ಸಿಗುತ್ತದೆ ಎಂದು ನಾನು ನಮ್ಮ ಮುಖ್ಯಮಂತ್ರಿಗಳಿಗೆ ತೋರಿಸುತ್ತಿದ್ದೇನೆ.

ಶ್ರೀ ಕೆ. ಎಸ್. ಈಶ್ವರಪ್ಪ : ಶಸ್ತ್ರಚಿಕಿತ್ಸೆ ಮಾಡುವುದಕ್ಕೆ ಹೋಗಿ ಕತ್ತರಿ ಹೊಟ್ಟೆಯಲ್ಲಿ ಸಿಕ್ಕಿಕೊಂಡುಬಿಟ್ಟಿದೆ.

ಶ್ರೀ ಎ. ಕೆ. ಅನಂತಕೃಷ್ಣ : ನಿಮಗೆ ಜೈ ರಾಮ್‌ಗೆ ಏನು ಗೊತ್ತಾಗುತ್ತದೆ? ದೇವರನ್ನು ನಂಬಿಕೊಂಡವನಿಗೆ ಸಮಾಜ ಏನು ಗೊತ್ತಾಗುತ್ತೇ. ದೇವರನ್ನು ನಂಬಿದವನು ಹೋದ, ಇಡೀ ಪ್ರಪಂಚದಲ್ಲಿ ಮನಷ್ಯ ಸ್ವಂತ ಪ್ರಯತ್ನದಿಂದ ಬೆಳೆದುಕೊಂಡು ಬಂದವನೇ ಉದ್ದಾರವಾಗಿರುವುದು. ದೇವರ ಹೆಸರು ಹೇಳಿ ಭಕ್ತಿಪೂರ್ವಕವಾಗಿ ಸಾಕು. ಆದರೆ ಅದೇ ಹೆಸರಿನಲ್ಲಿ ಬೆಳೆಯುವ ಪ್ರಶ್ನೆ ಬೇಡ.

ಶ್ರೀ ವಾಟಾಳ್‌ನಾಗರಾಜ್ : ತಮ್ಮ ಹೆಸರು ಏನು?

ಶ್ರೀ ಎ. ಕೆ. ಅನಂತಕೃಷ್ಣ : ನನ್ನ ಹೆಸರು.

ಶ್ರೀ ವಾಟಾಳ್‌ನಾಗರಾಜ್ : ಅನಂತಕೃಷ್ಣ

ಶ್ರೀ ಎ. ಕೆ. ಅನಂತಕೃಷ್ಣ : ಹೌದೂ.

ಶ್ರೀ ವಾಟಾಳ್‌ನಾಗರಾಜ್ : ಅದು ಯಾವ ದೇವರು

ಶ್ರೀ ಎ. ಕೆ. ಅನಂತಕೃಷ್ಣ : ಅನಂತ ಕೃಷ್ಣ .....

ಶ್ರೀ ವಾಟಾಳ್ ನಾಗರಾಜ್ : ಕೃಷ್ಣ ಪರಮಾತ್ಮ

ಶ್ರೀ ಎ. ಕೆ. ಅನಂತಕೃಷ್ಣ : ಅಷ್ಟೇ , ಮುಕ್ಕಾಲುಭಾಗ ಸಮಯ ಅವರಿಂದ ವಿಳಂಬವಾಗಿದೆ.

ಶ್ರೀ ವಾಟಾಳ್ ನಾಗರಾಜ್ : ತಮ್ಮ ಬಗ್ಗೆ ಬಹಳ ಗೌರವ ಇಟ್ಟುಕೊಂಡಿದ್ದೆ ಆ ಪೀಠಕ್ಕೆ ಹೋದವರಿಗೆಲ್ಲಾ ಹಾಗೇನಾದರೂ ಆಗುತ್ತದೆಯೇ?

ಶ್ರೀ ಎ. ಕೆ. ಅನಂತಕೃಷ್ಣ : ಆದ್ದರಿಂದ ನಾನು ತಮ್ಮ ಮುಖ್ಯಮಂತ್ರಿಗಳಲ್ಲಿ ಪ್ರಮುಖವಾದಂತಹ ಪ್ರಭಾವಿಯುತವಾದಂತಹ ಶಕ್ತಿಶಾಲಿಯಾದಂತಹ ಶಸ್ತ್ರಚಿಕಿತ್ಸೆಯನ್ನು ಮಾಡುತ್ತೇನೆ, ಮಾಡುತ್ತಿದ್ದೇನೆ ಅಂತ ಹೇಳುತ್ತಿದ್ದಾರೆ, ಅದಕ್ಕೆ ಒಂದು ಸಮಯ ಕೂಡ ನಿಗದಿ ಮಾಡಿಟ್ಟುಕೊಂಡಿದ್ದಾರೆ ಬಹಳ ಶ್ಲಾಘನೀಯವಾದ ಒಂದು ನಿಲುವು. ಅದಕ್ಕೆ ನನ್ನ ಪೂರ್ಣ ಸಹಮತ ಇದೆ, ನನ್ನ ಸಹಕಾರ ಬೆಂಬಲ ಇದೆ, ಅವರು ಅದರಲ್ಲಿ ಯಶಸ್ವಿಯಾಗಬೇಕೆಂದು ನಾನು ಹಾರೈಸುತ್ತೇನೆ. ಅಂತಹ ಸಮಯದಲ್ಲಿ ನಾನು ಹೇಳುತ್ತೆ ನಮ್ಮ ರಾಜ್ಯ ಮಟ್ಟದಲ್ಲಿ ನಿಷ್ಠಾವಂತ ಅಧಿಕಾರಿಗಳು, ಯೋಗ್ಯ ಅಧಿಕಾರಿಗಳು, ಪ್ರಭಾವಭರಿತ ಅಧಿಕಾರಿಗಳು ಯಾರ್ಯಾರು ಇದ್ದಾರೆ ಎಂದು ಹುಡುಕಿ ಈ ಒಂದು ಕೀ ಸೆಕ್ಟರ್ಸ್ ಏನಿದೆ. ಆ ಕೀ ಸೆಕ್ಟರ್‌ನಲ್ಲಿ ಅವರಿಗೆ ಪ್ರಮುಖಸ್ಥಾನವನ್ನು ಕೊಟ್ಟು ಅವರಿಗೆ ಜವಾಬ್ದಾರಿ ಕೊಟ್ಟು ಆ ಒಂದು ಆಡಳಿತವನ್ನು ಅವರ ಕೈಗೆ ಕೊಟ್ಟು ಕೆಲಸ ಮಾಡಿ ಎಂದು ಹೇಳಿದರೆ ನಮ್ಮ ರಾಜ್ಯ ಮಟ್ಟದ ಆರ್ಥಿಕ ಪರಿಸ್ಥಿತಿ ರಾಜ್ಯ ಮಟ್ಟದ ಆಡಳಿತದ ಪರಿಸ್ಥಿತಿ ಪ್ರಗತಿ ಸಾಧಿಸುವುದರಲ್ಲಿ ಏನೂ ಹಿಂಜರಿಯಬೇಕಾಗಿಲ್ಲ ಎನ್ನುವ ಒಂದು ಮಾತನ್ನು ನಾನು ಹೇಳಬಯಸುತ್ತೇನೆ. ಯಾವ ಸಮಸ್ಯೆಯನ್ನು ಎದುರಿಸುವುದಕ್ಕೆ ಸಾಧ್ಯವಿದೆ. What is required is the will to get the job done, will to do a job on our own, political will to enforce our political approach ಅದನ್ನು ಮಾಡುವಂತಹ ಕೆಲಸವನ್ನು ನಮ್ಮ ಮಾನ್ಯ ಮುಖ್ಯಮಂತ್ರಿಗಳು ಮಾಡಬೇಕು. ನಮ್ಮ ಸದನದಲ್ಲಿ ನಮ್ಮ ಪಕ್ಕದವರಿಗೂ ನಮ್ಮ ಸದಸ್ಯರು ಅದಕ್ಕೆ ಬೆಂಬಲ ಕೊಡುತ್ತಾರೆ ಎಂದು ನಾನು ಬಹಳ ವಿಶ್ವಾಸದಿಂದ ಹೇಳುತ್ತೇನೆ. ವಿರೋಧಪಕ್ಷದವರು ಏನೇ ಟೀಕೆ ಟಿಪ್ಪಣಿ ಮಾಡಿದರೂ ಕೂಡ ಅದಕ್ಕೆ ಅಡ್ಡಿ ಬರುತ್ತಿಲ್ಲ.

(ಅಧ್ಯಕ್ಷರ ಆದೇಶದ ಮೇರೆಗೆ ತೆಗೆದುಹಾಕಲಾಗಿದೆ)

ಈ ಪವರ್ ಡಿಸ್ಟ್ರಿಬ್ಯೂಷನ್ ಬಗ್ಗೆ ನಮ್ಮ ಸ್ನೇಹಿತರು ಹೇಳಿದ್ದಾರೆ, ನಮ್ಮ ಉದ್ಯಮಗ್ಗಳು ಕೆಳಮಟ್ಟಕ್ಕೆ ಬರುವುದಕ್ಕೆ ನಷ್ಟಕ್ಕೆ ಗುರಿಯಾಗುವುದಕ್ಕೆ ಪವರ್ ಸಪ್ಲೈ ಸಾಕಷ್ಟು ಪ್ರಮಾಣದಲ್ಲಿ ಮತ್ತು ಸರಿಯಾದ ರೀತಿಯಲ್ಲಿ ಯೂನಿಫಾರಂ ಆಗಿ ಕೊಡದೇ ಇರುವುದೇ ಪ್ರಮುಖ ಕಾರಣವೆಂದು ನಮ್ಮ ಸ್ನೇಹಿತರೆಲ್ಲಾ ಹೇಳಿದ್ದಾರೆ. ನಾನೂ ಒತ್ತಾಯಪೂರ್ವಕವಾಗಿ ಮತ್ತೆ ಹೇಳುತ್ತೇನೆ, ಪವರ್ ಜನರೇಷನ್ ಸರಿಯಾಗಿ ಮಾಡದೆ ಪವರ್ ಡಿಸ್ಟ್ರಿಬ್ಯೂಷನ್ ಸರಿಯಾಗಿ ಮಾಡದೆ ಉದ್ದಿಮೆಗಳಿಗೆ ಯೂನಿಫಾರಂ ಆಗಿ ವಿದ್ಯುಚ್ಛಕ್ತಿ ಕೊಡದೆ ಮತ್ತು ಸರಿಯಾದ ಆಡಳಿತವನ್ನು ಕೊಡದೇ ಇರುವ ಕಾರಣದಿಂದ ಪಬ್ಲಿಕ್ ಸೆಕ್ಟರ್‌ನಲ್ಲೂ ಫೇಲ್ಯೂರ್ ಇದೆ, ಪ್ರೈವೇಟ್ ಸೆಕ್ಟರ್‌ನಲ್ಲೂ ಫೇಲ್ಯೂರ್ ಇದೆ ಸಾವಿರಾರು ಸಂಖ್ಯೆಯಲ್ಲಿ ಸಣ್ಣ ಪುಟ್ಟ ಕೈಗಾರಿಕೆಗಳು ಇವತ್ತು ರೋಗಪೀಡಿತವಾಗಿವೆ. ಇದನ್ನು ಅರ್ಥಮಾಡಿಕೊಂಡು ನಾವು ಸರಿ ಮಾಡಬೇಕಾಗಿದೆ. ಆಸ್ಪತ್ರೆಗಳಿಗೆ ವಿದ್ಯುಚ್ಛಕ್ತಿ ಸಪ್ಲೈ ಮಾಡುವುದರಲ್ಲೂ ಪವರ್ ಡಿಸ್ಟ್ರಿಬ್ಯೂಷನ್‌ನವರು ಸರಿಯಾಗಿ ಗಮನ ಕೊಡುತ್ತಿಲ್ಲ. ಆಸ್ಪತ್ರೆಗಳಿಗೆ ವಿದ್ಯುಚ್ಛಕ್ತಿಯನ್ನು ಇದ್ದಕಿದ್ದ ಹಾಗೆ ಶೇಕ್‌ಡೌನ್ ಮಾಡಿದರೆ ಚಿಕಿತ್ಸೆ ಪಡೆಯುವ ಸಂದರ್ಭದಲ್ಲಿ ರೋಗಿಗಳನ್ನು ಅರ್ಧಕ್ಕೇ ಕೈ ಬಿಡಬೇಕಾಗುತ್ತದೆ. ಈ ತರಹ ನನಗೇ ನಾಲ್ಕೈದು ಸಾರಿ ಅನುಭವವಾಗಿದೆ. ಆಪರೇಷನ್ ಥಿಯೇಟರ್‌ನಲ್ಲಿ ಜನರೇಟರ್ ಇಟ್ಟುಕೊಂಡಿರುತ್ತಾರೆ, ಅದು ಹೇಗೋ ನಡೆದುಕೊಂಡು ಹೋಗುತ್ತದೆ. ಆಪರೇಷನ್ ಥಿಯೇಟರ್ ಬಿಟ್ಟರೆ ಪವರ್ ಶೇಕ್‌ಡೌನ್ ಆದಾಗ ಆಸ್ಪತ್ರೆಯ ಉಳಿದ ಕೆಲಸ ಕಾರ್ಯಗಳೆಲ್ಲಾ ಸ್ಥಗಿತ ಆಗಿಹೋಗುತ್ತವೆ. ಆಸ್ಪತ್ರೆಗಳನ್ನು ಎಸೆನ್‌ಷಿಯಲ್ ಸರ್ವೀಸ್ ಎಂದು ತಿಳಿದು ಪವರ್ ಸಪ್ಲೈ ಕೊಡುವುದಕ್ಕಾಗುವುದಿಲ್ಲವೆಂದರೆ, ಆಸ್ಪತ್ರೆಗಳಿಗೆ ಬೇಕಾದಷ್ಟು ಜನರೇಟರುಗಳನ್ನು ಕೊಟ್ಟು ಆಸ್ಪತ್ರೆಯಲ್ಲಿ ಯಾವುದೇ

ತೊಂದರೆ ಆಗದ ಹಾಗೆ ಸರ್ಕಾರ ಮಾಡಬೇಕೆಂದು ಹೇಳಬಯಸುತ್ತೇನೆ. ಇನ್ನು ಪಬ್ಲಿಕ್ ವರ್ಕ್ಸ್ ಬಗ್ಗೆ ನಾನು ಹೇಳುವುದಿಲ್ಲ ಸ್ವಾಮಿ. ಮಿಲಿಟರಿ ಇಂಜಿನಿಯರಿಂಗ್ ಸರ್ವೀಸ್ ಎಂದು ಇದೆ. ಎಂ.ಇ.ಎಸ್, ನಾವು ಚಿಕ್ಕಂದಿನಲ್ಲಿ ಅದನ್ನು ಮನಿ ಈಟಿಂಗ್ ಸರ್ವೀಸ್ ಎಂದು ಕರೆಯುತ್ತಿದ್ದೆವು. ಅದರ ಮೇಲೆ ಸರಿಯಾದ ನಿಯಂತ್ರಣ ಇಡಬೇಕು. ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಹೇಳುತ್ತಿದ್ದೆವು.. ಹಳೇ ಕಲ್ಲು ಹೊಸ ಬಿಲ್ಲು ಎಂದು ಹಿಂದೆ ಹೇಳಿದ್ದೇನೆ. ಹಳೇ ಕೆಲಸಕ್ಕೆ ಹೊಸ ಎಸ್ಟಿಮೇಟ್, ಅದೂ ಜನತೆಗೆ ಸೌಕರ್ಯ ಒದಗಿಸದೇ ಇರತಕ್ಕಂಥ ಕೆಲಸ ಬಹುತೇಕ ಆಗುತ್ತಿದೆ. ಈ ಪಬ್ಲಿಕ್ ವರ್ಕ್ಸ್‌ನಲ್ಲೂ ಅದೇ ಕೂಡ ನಿಷ್ಠೆ ಮತ್ತು ದಕ್ಷತೆ ಆಗಬೇಕು ಎನ್ನುವ ಮಾತನ್ನು ಹೇಳುತ್ತಿದ್ದೇನೆ. ಮಾನ್ಯ ನಂಜುಂಡಸ್ವಾಮಿಯವರು, ನಾವು ಎಂಥಾ ಡೆಟ್ ಟ್ರ್ಯಾಕ್‌ಗೆ ಹೋಗುತ್ತಿದ್ದೇವೆಂದು ಹೇಳಿದ್ದಾರೆ. ನಾನು ಆಗಲೂ ಹೇಳಿದ್ದೇನೆ. ಈಗಲೂ ಹೇಳುತ್ತೇನೆ.

Ultimately it will be a national debt trap from which you cannot come out. ಅದು ಆಗುವುದಕ್ಕೆ ಅವಕಾಶ ಮಾಡಿಕೊಡಬಾರದು, ನಮ್ಮ ಮಾನ್ಯ ಮುಖ್ಯಮಂತ್ರಿಯವರು ಅವರ ಭಾಷಣದಲ್ಲಿ, ನಮ್ಮನ್ನೆಲ್ಲಾ ಕರೆದು ಚರ್ಚೆ ಮಾಡಿ ಅಭಿಪ್ರಾಯಗಳನ್ನು ಕ್ರೋಢೀಕರಿಸಿ ಕೇಂದ್ರ ಸರ್ಕಾರಕ್ಕೆ ತಿಳಿಸುತ್ತೇವೆಂದು ಹೇಳಿದ್ದಾರೆ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಯವರು ಈ ಡಂಕಲ್ ಡ್ರಾಫ್ಟನ್ನು ಯಾವುದೇ ಕಾರಣಕ್ಕೂ ಡಂಕಲ್ ಮೂಡ್‌ನಲ್ಲಿ ಆಗಲೀ, ಅಥವಾ ಇನ್ನಾವುದೇ ಮೂಡ್‌ನಲ್ಲಿಯಾಗಲೀ ಅಥವಾ ಡ್ರೀಮ್ ಮೂಡ್‌ನಲ್ಲಾಗಲೀ ಇದಕ್ಕೆ ಆದ್ಯತೆಯನ್ನು ಕೊಡಬಾರದು. ಸಮರ್ಥನೆಯನ್ನೂ ಕೊಡಬಾರದು. ನಮ್ಮ ರಾಷ್ಟ್ರದ ಶಕ್ತಿ ಏನಿದೆ? ಇಂಡಿಜೀನಸ್ ಸ್ಟ್ರೆಂಗ್ ಏನಿದೆ? ಅದರ ಮೇಲೆ ವಿಶ್ವಾಸ ನಂಬಿಕೆ ಇಟ್ಟು ನಮಗೆ ಎಷ್ಟೇ ಕಷ್ಟ ಬಂದರೂ ನಮ್ಮ ಕಾಲ ಮೇಲೆ ನಾವು ನಿಲ್ಲುವಂಥ ಕೆಲಸವನ್ನು ಮಾಡಬೇಕೆಂದು ನಾನು ಹೇಳುತ್ತಿದ್ದೇನೆ.

ಹಾರ್ಟಿಕಲ್ಚರ್ ಬಗ್ಗೆ ನಾನು ಹೆಚ್ಚು ಹೇಳುವುದಿಲ್ಲ. ನಾನು ಸಾಕಷ್ಟು ಸಲ ಪರ ರಾಷ್ಟ್ರಗಳಿಗೆ ಹೋಗಿದ್ದೇನೆ. ನಾನು ಹೋದ ವರ್ಷ ಎರಡು ಸಲ ಯೂರೋಪ್‌ನಲ್ಲಿ ಪ್ರವಾಸ ಮಾಡಿದೆ. ನಾನು ನೆದರ್ ಲ್ಯಾಂಡ್‌ಗೆ ಹೋಗಿದ್ದೆ. ನೆದರ್‌ಲ್ಯಾಂಡ್‌ಗೆ ಹೋಗಿದ್ದವರು ಇಲ್ಲಿ ಯಾರಾದರು ಇದ್ದರೆ ಅವರಿಗೆ ಗೊತ್ತಿರುತ್ತದೆ. ಫ್ಲವರ್ ಡೆವಲಪ್‌ಮೆಂಟನ್ನು ಮನುಷ್ಯ ಮನುಷ್ಯನಿಗಿಂತ ಹೆಚ್ಚಾಗಿ ಪ್ರೀತಿಯಿಂದ ಬೆಳೆಸುತ್ತಾರೆ. ಆ ಬೆಳವಣಿಗೆ ಎಷ್ಟರಮಟ್ಟಿಗೆ ಇದೆ ಎಂದರೆ ಮೈಲಿಗಳ ಉದ್ದ ಒಂದು ಕಾರ್ಪೆಟ್ ಇದ್ದ ಹಾಗೆ ಬೆಳೆಸಿರುತ್ತಾರೆ. ಕೆಂಪು ಕಾರ್ಪೆಟ್, ಹಳದಿ ಕಾರ್ಪೆಟ್ , ಹಸಿರು ಕಾರ್ಪೆಟ್, ಬ್ಲೂ ಕಾರ್ಪೆಟ್ ಈ ರೀತಿಯಲ್ಲಿ ಬೆಳೆಸುತ್ತಾರೆ . ನಮ್ಮಲ್ಲೂ ಸಾಕಷ್ಟು ಜಮೀನಿದೆ ಹಾಗೂ ಅವಕಾಶಗಳೂ ಇವೆ. ಹೊರ ರಾಷ್ಟ್ರಗಳಿಗೆ ಎಕ್ಸ್‌ಪೋರ್ಟ್ ಮಾಡುವಷ್ಟು ಶಕ್ತಿ ಇದೆ. ಅದರ ವಿಷಯವಾಗಿ ತೀವ್ರವಾಗಿ ಯೋಚನೆ ಮಾಡಬೇಕು. ನಮ್ಮ ರಾಜ್ಯದಲ್ಲಿ ಲಾಲ್‌ಬಾಗ್‌ನಲ್ಲಿ 50 ವರ್ಷಗಳಿಂದ ಫ್ಲವರ್ ಶೋ ಮಾಡುತ್ತಿದ್ದೇವೆ. ಇದು ಹಳೆ ಪದ್ಧತಿ. ಅದನ್ನು ಬಿಟ್ಟರೆ ಬೇರೆ ಮಾಡುತ್ತಿಲ್ಲ. ಇದನ್ನು ಕ್ರಾಂತಿಕಾರಕವಾಗಿ ಬದಲಾವಣೆ ಮಾಡುವುದಕ್ಕೆ ಯೋಜನೆಗಳನ್ನು ಹಾಕಬೇಕಾದುದು ಅತ್ಯವಶ್ಯಕವಾಗಿದೆ. ಫ್ಲವರ್ ಶೋ ಅಟ್ರಾಕ್ಟ್ ಮಾಡುವುದಕ್ಕೆ ಫ್ಲವರ್ ಪೆರೇಡ್ ಅಂತ ಮಾಡಬೇಕು. ನಾನಾ ರೀತಿಯ ಅಲಂಕಾರಗಳನ್ನು ಮಾಡಿ, ವಾಹನಗಳಲ್ಲಿ ದೊಡ್ಡ ದೊಡ್ಡ ರಹದಾರಿಗಳಲ್ಲಿ ಹೋಗುವ ಹಾಗೆ ವರ್ಷದಲ್ಲಿ ಒಂದೆರಡು ಸಲ ಮಾಡಿದರೆ ಅದನ್ನು ನೋಡುವುದಕ್ಕೆ ಬೇರೆ ರಾಜ್ಯಗಳಿಂದ ಸಾಕಷ್ಟು ಸಂಖ್ಯೆಯಲ್ಲಿ ಟೂರಿಸ್ಟ್ಸ್ ಬರುವುದಕ್ಕೆ ಅನುಕೂಲವಾಗುತ್ತದೆ. ನಮ್ಮ ಆರ್ಥಿಕ ಪರಿಸ್ಥಿತಿಯೂ ಬೆಳವಣಿಗೆಯಾಗುತ್ತದೆ. ಅಂಥ ಕೆಲಸವನ್ನು ಮಾಡಬೇಕೆಂದು ಹೇಳುತ್ತೇನೆ. ಇನ್ನು ಕೋ-ಆಪರೇಷನ್ ವಿಷಯ, ನನ್ನ

ಅದೃಷ್ಟಕ್ಕೆ ಕೋ-ಆಪರೇಷನ್ ಇಲಾಖೆ ಮಂತ್ರಿಗಳು ಇದ್ದಾರೆ. ಸ್ವಾಮಿ ತಮ್ಮ ಡಿಪಾರ್ಟ್‌ಮೆಂಟ್ ಯಾರಿಗೆ ಕೋ-ಆಪರೇಷನ್, ಯಾರ ಅನುಕೂಲಕ್ಕಾಗಿ ಇದೆ ಎಂಬುದನ್ನು ನಾವು ತೀವ್ರವಾಗಿಯೋಚನೆ ಮಾಡಬೇಕು. It has become the monopoly of vested interests, ಕೊ-ಆಪರೇಟಿವ್ ಮೂವ್‌ಮೆಂಟ್ ಹೋಗಿಬಿಟ್ಟು, ಕೋ-ಆಪರೇಟಿವ್ ಹೆಸರಿನಲ್ಲಿ ಒಂದು ಬಂಡವಾಳಶಾಹಿ ಪದ್ಧತಿ, ಆರ್ಥಿಕವಾಗಿ ಶೋಷಣೆ ಮಾಡುವಂಥ ಪದ್ಧತಿ ಬೆಳೆದುಕೊಂಡು ಬರುತ್ತಿದೆ. ಅದರಿಂದ ಕೆಲವರು ಬೆಳೆದುಕೊಂಡು ಬರುತ್ತಿದ್ದಾರೆ, ಕೆಲವರು ರಾಜಕೀಯವಾಗಿ ಅದನ್ನು ದುರುಪಯೋಗ ಮಾಡಿಕೊಂಡು ಬರುತ್ತಿದ್ದಾರೆ. ರಾಜಕೀಯ ಕಾರಣಗಳಿಗೆ ದುರುಪಯೋಗ ಮಾಡಿಕೊಳ್ಳುವವರು ಕೆಲವರು ಆಗಿದ್ದರೆ, ಮತ್ತೆ ಕೆಲವರು ಆರ್ಥಿಕ ಬೆಳವಣಿಗೆಯೆಂದು ಹೇಳಿ, ರಾಜಕಾರಣಿಗಳನ್ನು, ನಮ್ಮ ರಾಜ್ಯ ಆಡಳಿತವನ್ನು ಮತ್ತು ನಮ್ಮ ಜಡಿಷಿಯರಿಯನ್ನು ಮತ್ತು ಪ್ರತಿ ಆಡಳಿತ ವಿಭಾಗಗಳನ್ನು ಮತ್ತು ಸರ್ಕಾರವನ್ನೂ ಸಹ ಅವರು ಕೈ-ಗೊಂಬೆಯನ್ನಾಗಿ ಮಾಡಿಕೊಳ್ಳುವಂಥ ಪದ್ಧತಿ ಬೆಳೆದುಕೊಂಡು ಬರುತ್ತಿದೆ. ಇದನ್ನು ತೀವ್ರವಾಗಿ ಯೋಚನೆ ಮಾಡಬೇಕಾಗುತ್ತದೆ. ಇದನ್ನು ಸಾಕಷ್ಟು ಸಲ ನಾನು ಹೇಳಿದ್ದೇನೆ. ಕೋ-ಆಪರೇಟಿವ್ ಸೊಸೈಟಿ ಎಂದರೆ, ಲ್ಯಾಂಡ್ ಗ್ರ್ಯಾಬಿಂಗ್, ರಿಯಲ್ ಎಸ್ಟೇಟ್, ಮನಿ ಸ್ಪಿನ್ನಿಂಗ್ ಇದು ಜಾಸ್ತಿಯಾಗಿದೆ. ಇದಕ್ಕೆ ಉದಾಹರಣೆ, ಕೃಷ್ಣಭಟ್ಟ ಎನ್ನುವವರ ಗಿರಿನಗರ ಸೊಸೈಟಿ ಏನಿದೆ? ಅದು ಇದರ ಬಗ್ಗೆ ನಾನು ಬಹಳಷ್ಟು ಸಲ ಹೇಳಿದ್ದೇನೆ. ಅವರದೇ ಒಂದು ರಾಜ್ಯ. ಅವರದೇ ಒಂದು ಅಧಿಪತ್ಯ. ಬಿಡಿಎಅನ್ನು ಲೆಕ್ಕಕ್ಕೆ ತೆಗೆದುಕೊಳ್ಳುವುದಿಲ್ಲ, ರಾಜ್ಯ ಸರ್ಕಾರವನ್ನು ಲೆಕ್ಕಕ್ಕೆ ತೆಗೆದುಕೊಳ್ಳುವುದಿಲ್ಲ, ಕೋ-ಆಪರೇಟಿವ್ ಡಿಪಾರ್ಟ್‌ಮೆಂಟ್ ಅಂತೂ ಅವರ ಕೈ ಗೊಂಬೆಯೇ ಜುಡಿಷಿಯರಿಯಲ್ಲಿ ಅವರು ಹೇಗೆ ಬೇಕಾದರೂ ಇನ್‌ಫ್ಲೂಯೆನ್ಸ್ ಮಾಡುವ

ದುಡ್ಡು ಕೊಟ್ಟಿದ್ದೇನೆ, ಯಾವ ಮಂತ್ರಿಗೆ ಎಷ್ಟು ದುಡ್ಡು ಕೊಟ್ಟಿದ್ದೇನೆ? ಯಾವ ಎಂ.ಎಲ್.ಎ ಮತ್ತು ಎಂ.ಪಿಗೆ ಕೊಟ್ಟಿದ್ದೇನೆಂದು ಬುಕ್‌ಲೆಟ್ ಪ್ರಿಂಟ್ ಮಾಡಿದ್ದಾರೆ. ಅದನ್ನು ನಾವು ನೋಡಿಕೊಂಡು ಅವರ ಮೇಲೆ ಯಾವ ಕ್ರಮವನ್ನೂ ನಾವು ತೆಗೆದುಕೊಳ್ಳುತ್ತಿಲ್ಲ. ನಾವಂತೂ ಎಲ್ಲಾದಕ್ಕೂ ರೀ-ಕನ್‌ಸೈಲ್ ಆಗುತ್ತೇವೆ, ಕಾಂಪ್ರಮೈಸ್ ಆಗುತ್ತೇವೆ, ಮಾಡಿಕೊಂಡು ಹೋಗುವವರು ಮಾಡಿಕೊಂಡು ಹೋಗಲಿ ನಮ್ಮ ಪಾಡಿಗೆ ನಾವು ಇರುತ್ತೇವೆಂದು. ಆ ಏರಿಯಾದಲ್ಲಿ ಇರುವಂಥ ನಾಗರೀಕರದು ಸಹಿಸಲಾರದಂಥ ಗೋಳು ಸ್ವಾಮಿ. ಅವರಿಗೆ ನೀರಿಗೆ ತೊಂದರೆ ಕೊಡುತ್ತಾರೆ, ಲೈಟ್‌ಗೆ ತೊಂದರೆ ಕೊಡುತ್ತಾರೆ, ಟ್ಯಾಕ್ಸ್‌ಗೆ ತೊಂದರೆ ಕೊಡುತ್ತಾರೆ, ಕೊಡಬಾರದಷ್ಟು ಕಷ್ಟ ಕೊಡುತ್ತಾರೆ. ಅದರ ಬಗ್ಗೆ ಯಾರೂ ಕೇಳುವವರೇ ಇಲ್ಲ. ಅದಕ್ಕಿಂತ ಹೆಚ್ಚಿಗೆ ಏನು ಮಾಡುತ್ತಿದ್ದಾರೆಂದರೆ, ನಮ್ಮಲ್ಲಿ ಸಿವಿಲ್ ರೈಟ್ಸ್ ಸೆಲ್ ಅಂಥಾ ಇದೆ. ಅದು ಕೇವಲ ಹರಿಜನರ ಮೇಲೆ ಹಲ್ಲೆ ಮಾಡಿದಾಗ, ಅತ್ಯಾಚಾರ ಮಾಡಿದಾಗ ಅವರಿಗೆ ರಕ್ಷಣೆ ಕೊಡುವುದಕ್ಕೆ ಎಂದು ಅದು ಇರುವುದು. ಅದನ್ನೂ ದುರುಪಯೋಗ ಮಾಡಿಕೊಂಡು ಕೆಲವು ಹರಿಜನ ಮಾಫಿಯಾ ಗ್ಯಾಂಗ್ ಇಟ್ಟುಕೊಂಡು ಗೌರವಯುತ ಅಮಾಯಕ ನಾಗರೀಕರ ಮೇಲೆ ಹಲ್ಲೆ ಮಾಡಿಸಿ ತೊಂದರೆ ಕೊಟ್ಟು ಅವರ ಮೇಲೆ ಅಪಪ್ರಚಾರ ಮಾಡಿಸಿ, ಅವರು ಹರಿಜನರ ಮೇಲೆ ಹಲ್ಲೆ ಮಾಡಿದರೆಂದು ಕೇಸ್‌ಗಳನ್ನು ಹಾಕಿಸಿದ್ದಾರೆ.

ಕೇಸ್‌ಗಳನ್ನು ಹಾಕಿ ಆ ಜನಕ್ಕೆ ತೊಂದರೆ ಕೊಡುತ್ತಿರಬೇಕಾಗಿದ್ದರೆ ನಮ್ಮ ರಾಜ್ಯಸರ್ಕಾರದಲ್ಲಿ ಅವರನ್ನು ಕೇಳುವವರು ಯಾರೂ ಇಲ್ಲವೇ ಇಲ್ಲ. ಇದನ್ನು ಸಹಕಾರ ಇಲಾಖೆ ತೀವ್ರವಾಗಿ ನೋಡಬೇಕು. ಮಾನ್ಯ ರಂಗನಾಥ್‌ರವರು ಹಿಂದೆ ಸಹಕಾರ ಸಚಿವರಾಗಿದ್ದಾಗ ಕೃಷ್ಣಭಟ್ಟನ್ನ ಜೈಲಿನಲ್ಲಿ ಹಾಕಿದ್ದರು. ಆ ಕೃಷ್ಣಭಟ್ಟನ್ನ ಇವತ್ತು ಮುಟ್ಟೋದಿಕ್ಕೆ ಯಾರಿಗೂ ಶಕ್ತಿ ಇಲ್ಲವಲ್ಲ. ನಮ್ಮಲ್ಲಿ ಬಹಳ ಪ್ರಭಾವಶಾಲಿಗಳಾದ

ಖರ್ಗೆಯವರು ಬಂದಿದ್ದಾರೆ ದಯಮಾಡಿ ತಮ್ಮ ಪ್ರಭಾವವನ್ನೆಲ್ಲಾ ತಮ್ಮ ಇಲಾಖೆ ಮೂಲಕ ಉಪಯೋಗಿಸಿ ಆ ಕೃಷ್ಣಭಟ್ಟನ್ನ ಎಲ್ಲಿರಬೇಕೋ ಅಲ್ಲಿಟ್ಟು ಜನಗಳನ್ನು ಅವನ ಹೋಲ್ಡ್‌ನಿಂದ ವಿಮುಕ್ತರನ್ನಾಗಿ ಮಾಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಟೂರಿಸಂ ಬಗ್ಗೆ ಒಂದು ಸಲಹೆ, ಇಲ್ಲಿ ಟೂರಿಸಂ ಮಿನಿಸ್ಟರ್ ಇಲ್ಲ. ನಮ್ಮ ಸೆಕ್ರೆಟರಿಗಳು ಕೂಡ ಬಹಳ ಸಕ್ರೀಯವಾಗಿ ಭಾಗವಹಿಸಬೇಕೆಂದು ಕಾಗದ ಬರೆದ್ದಾರೆ.

ಅಧ್ಯಕ್ಷರು : ನೀವು ಒಂದು ಗಂಟೆ 45 ನಿಮಿಷ ಮಾತಾಡಿದ್ದೀರಿ, ಸಾಕು.

ಶ್ರೀ ವಾಟಾಳ್ ನಾಗರಾಜ್ : ಕ್ರಿಯಾಶೀಲರಾಗಿ ಶಾಸನಸಭೆಯಲ್ಲಿ ಭಾಗವಹಿಸ ಬೇಕೆಂದು ಪತ್ರ ಬರೆದಿದ್ದಾರೆ ಅದಕ್ಕೆ ಗೌರವ ಕೊಟ್ಟು 4 ಜನ ಕುಳಿತಿದ್ದಾರೆ. ಅದರಲ್ಲಿ ಇವರೊಬ್ಬರು ಭಾಷಣ ಮಾಡುತ್ತಿರುವುದು ಒಂದೂ ಮುಕ್ಕಾಲು ಗಂಟೆಯಿಂದ.

ಶ್ರೀ ಎ. ಕೆ. ಅನಂತಕೃಷ್ಣ : ನಾನು ಹೇಳಿದ್ದು ಇರ್‍ರೆಲೆವೆಂಟಾದರೆ ನಾನು ನಿಲ್ಲಿಸುತ್ತೇನೆ. ಈ ಟೂರಿಸಂ ಬಗ್ಗೆ ಒಂದೇ ಸಲಹೆ. ನಾನು ದೆನ್‌ಹೆಡ್, ನೆದರ್‌ಲ್ಯಾಂಡ್‌ಲ್ಲಿ ನೋಡಿ ಬಂದದ್ದು ಬಹಳ ಒಳ್ಳೆಯ ಯೋಜನೆ. ನಮ್ಮ ರಾಜ್ಯಮಟ್ಟಕ್ಕೆ ಕರ್ನಾಟಕ ದರ್ಶನ ಅಂತ ಒಂದೇ ಒಂದು ಜಾಗದಲ್ಲಿ ಇಡೀ ಕರ್ನಾಟಕದ ಲ್ಯಾಂಡ್‌ಮಾರ್ಕ್ಸ್ ಏನೇನಿದೆ ಆರ್ಥಿಕ ಸಾಮಾಜಿಕ ಬೆಳವಣಿಗೆಗಳನ್ನೆಲ್ಲ ಒಂದೇ ಕಡೆ ಪ್ರದರ್ಶನ ಮಾಡುವ ರೀತಿಯಲ್ಲಿ ಸೆಲ್ಫ್ ಫೈನಾನ್ಸಿಂಗ್ ಪ್ರಾಜೆಕ್ಟ್ ಎಂದು ವರ್ಕೌಟ್ ಮಾಡಿದರೆ ಅನುಕೂಲವಾಗುತ್ತದೆ. ಮಂತ್ರಿಗಳು ಸಲಹೆ ನನ್ನ ಕೇಳುವುದಾದರೆ ನಾನು ಸಲಹೆ ಕೊಡುವುದಕ್ಕೆ ಆ ಪ್ರಾಜೆಕ್ಟ್ ವರ್ಕ್‌ಔಟ್ ಮಾಡುವುದಕ್ಕೆ ತಯಾರಾಗಿದ್ದೇನೆ. ಅದು ಇಂಟರ್ ನ್ಯಾಷನಲ್ ಟೂರಿಸ್ಟ್ ಸೆಂಟರಾಗುತ್ತದೆ. ನಮಗೆ ಟೂರಿಸಂ ಡೆವಲಪ್ ಆಗುವುದಕ್ಕೆ ಸಾಕಷ್ಟು ಪ್ರಮಾಣದಲ್ಲಿ ಅನುಕೂಲವಾಗುತ್ತದೆ. It will be live demonstration centre. ಇನ್ನು ವಿದ್ಯಾಭ್ಯಾಸ ಇದು ಬಹಳ ದೊಡ್ಡ ವಿಷಯ . ಮ್ಯಾಸೀವಾಗಿ ನಾವು ಕಂಟಿನ್ಯೂನಟಿ ಇರೋ ರೀತಿಯಲ್ಲಿ ಶಿಕ್ಷಣ ಕೊಟ್ಟರೆ ನಿಷ್ಠೆನಿಂದ ಕೊಟ್ಟರೆ ಅವರು ವಿದ್ಯಾಭ್ಯಾಸ ಮಾಡಬೇಕೆನ್ನುವುದಾದರೆ ನಾವು ಸರಿಯಾದ ಶಿಕ್ಷಕರನ್ನು ಕೊಡಬೇಕು. ಶಿಕ್ಷಕರ ಮೇಲೆ ನಮ್ಮ ನಿಯಂತ್ರಣ ಇರಬೇಕು, ಅದು ಇಲ್ಲ ಅವರ ನಿಯಂತ್ರಣ ನಮ್ಮ ಮೇಲಿದೆ. ಶಾಲೆಯ ಮುಖ್ಯೋಪಾಧ್ಯಾಯರು ಶಿಕ್ಷಕರ ಗುಲಾಮಮರಾಗಿದ್ದಾರೆ, ಅವರ ನಿಯಂತ್ರಣ ಅಲ್ಲಿಲ್ಲ. ಇವತ್ತು ವಿಭಾಗಗಳಿವೆಯಲ್ಲ ಎಇಒ, ಡಿಇಒ ಇವೆಲ್ಲ ಶೂನ್ಯ, ಯಾರ ನಿಯಂತ್ರಣ ಯಾರ ಮೇಲೂ ಇಲ್ಲ. ಎಲ್ಲಾರೂ ದುಡ್ಡು ಮಾಡುವುದರಲ್ಲಿ ಇದ್ದಾರೆ. ಕಬಳಿಸಿಕೊಳ್ಳುವುದರಲ್ಲಿ ಒಂದೇ ಒಂದು ಸಣ್ಣ ಉದಾಹರಣೆ ಹೇಳುತ್ತೇನೆ. ಹೆಚ್ಚಾಗಿ ಹೆಣ್ಣು ಮಕ್ಕಳ ಶಾಲೆ ಇದೆ ನೋಡಿ, ಆ ಹೆಣ್ಣುಮಕ್ಕಳ ಶಾಲೆಗೆ ಎಲ್ಲಾ ಗಂಡಸರ ಪ್ರಭಾವ ಈ ಎಇಒ ಡಿಇಒಗಳದು. ಆ ಶಾಲೆಗಳಲ್ಲಿ ಅವರು ಮಾಡಬಾರದ ಕೆಲಸ ಮಾಡುತ್ತಾರೆ ಬಹಳ ದುಃಖದಿಂದ ಹೇಳುತ್ತಾ ಇದ್ದೇನೆ. ಆ ಹೆಣ್ಣು ಮಕ್ಕಳದು ಒಂದು ಟ್ರಾನ್ಸ್‌ಫರ್ ಲಿಸ್ಟ್ ಮಾಡಿ ಮೊದಲು ಕಳಿಸಿಬಿಡುತ್ತಾರೆ, ಅಯ್ಯೋ ಟ್ರಾನ್ಸ್‌ಫರಾಗಿ ಬಿಟ್ಟು ನನ್ನ ಗತಿಯೇನು ಅಂತ ಅವರು ಓಡಿಹೋಗುತ್ತಾರೆ, ಇಷ್ಟು ದುಡ್ಡು ಕೊಟ್ಟರೆ ನಿಮ್ಮ ಟ್ರಾನ್ಸ್‌ಫರ್ ಕ್ಯಾನ್ಸಲ್ ಮಾಡುತ್ತೇನೆ ಎನ್ನುತ್ತಾರೆ. ನನ್ನ ಜೊತೇಲಿ ಬನ್ನಿ ತೋರಿಸುತ್ತೇನೆ ನಿಮಗೆ ಗೊತ್ತಿಲ್ಲದೆ ಇದ್ದರೆ. 1500 ಜನ ಶಿಕ್ಷಕರಿಲ್ಲ ಅಂದರೆ ನೀವು ಎಷ್ಟು ಶಾಲೆಗಳನ್ನು ನೋಡಿರಬೇಕು. ಮೊನ್ನೆ ಶಿಕ್ಷಕರು 5000 ಜನ ಅಂತ ಹೇಳಿದಿರಿ. ಒಂದು ಶಾಲೆಯಲ್ಲಿ, ಆ ಹೆಣ್ಣುಮಕ್ಕಳ ಶಾಲೆ, ಅವರನ್ನು ಟ್ರಾನ್ಸ್‌ಫರ್ ಮಾಡುವ ಬೆದರಿಕೆ ಹಾಕಿ, ಅವರ ಮೇಲೆ ಶಿಸ್ತು ಕ್ರಮ ಮಾಡುತ್ತೇನೆ ಎಂದು ಹೇಳಿದ್ದಾರೆ ದಯವಿಟ್ಟು ಇದನ್ನು ಗಮನಿಸಬೇಕು. ಬಹಳ ತೀವ್ರವಾದ ವಿಷಯವನ್ನು

ಹೇಳುತ್ತಿದ್ದೇನೆ. ಇದು ಒಂದು ಕೆಟ್ಟ ಸಂಪ್ರದಾಯ. ಮಾಂಸದ ತಿಂಡಿ ಆ ಸ್ಕೂಲುಗಳಲ್ಲಿ ಮಾಡುವುದಿಲ್ಲ. ಆ ಹೆಣ್ಣುಮಕ್ಕಳ ಹತ್ತಿರ, ಅಲ್ಲಿನ ಎ.ಇ.ಓ. ಸಂಬಂಧಪಟ್ಟ ಅಧಿಕಾರಿಗಳು, ಇನ್ಸ್‌ಪೆಕ್ಟರ್‌ಗಳು ಹೋಗಿ ಮಾಂಸದ ತಿಂಡಿಯನ್ನು ಆ ಹೆಣ್ಣುಮಕ್ಕಳೇ ತೆಗೆದುಕೊಂಡು ಬಂದು, ಆ ಅಧಿಕಾರಿಗಳಿಗೆ ಬಡಿಸಬೇಕು, ಅದನ್ನು ಮಾಡಿಸಿದ್ದಾರೆ. ಅದರ ಜೊತೆಗೆ ನಾವು ಪಾನನಿರೋಧ ಪಾನ ನಿಷೇಧದ ಬಗ್ಗೆ ಮಾತನಾಡುತ್ತೇವೆ. ಮದ್ಯಪಾನವನ್ನು ತರಿಸಿಕೊಡಬೇಕು ಎಂದು ಹೇಳಿ ಅಲ್ಲಿ ಮಾಡಿಕೊಂಡು ಬಂದಿದ್ದಾರೆ. ಹೆಸರು ಹೇಳುತ್ತೇನೆ, ಸಂಪಂಗಿ ರಾಮನಗರದಲ್ಲಿ ಶ್ರೀ ಹೈಯರ್ ಪ್ರೈಮರಿ ಸ್ಕೂಲ್ ಎಂದು ಇದೆ, ಅದಕ್ಕೆ ಕಲ್ಯಾಣಿಸ್ಕೂಲ್ ಎಂದು ಹೆಸರು. ಆ ಶಾಲೆಯಲ್ಲಿ ಈ ಕೆಲಸ ನಡೆದುಹೋಗಿದೆ. ಆ ಒಂದು

ಎ.ಇ.ಓ. ಗಳು ಆ ಹೆಡ್ ಮಿಸ್ಟ್ರೆಸ್‌ಗೂ ಮತ್ತು ಟೀಚರ್‌ಗಳಿಗೂ ಒಬ್ಬರಿಗೊಬ್ಬರಿಗೆ ಜಗಳ ತಂದಿದ್ದಾರೆ. ಸಾವಿರ ಸಂಖ್ಯೆಯಲ್ಲಿದ್ದಂಥ 1200 ಸಂಖ್ಯೆಯಲ್ಲಿದ್ದಂಥ ವಿದ್ಯಾರ್ಥಿಗಳು ಈಗ 800ಕ್ಕೆ ಇಳಿದಿದ್ದಾರೆ. ವಿದ್ಯಾಭ್ಯಾಸ ಸರಿಯಾಗಿ ನಡೆಯುತ್ತಿಲ್ಲ. ಶಾಲೆ ನಿರ್ನಾಮವಾಗುತ್ತಿದೆ. ಇಂಥ ಶಾಲೆಗಳು ಊರು ತುಂಬ ಬೇಕಾದಷ್ಟು ಇರಬೇಕು. ಅದರಲ್ಲೂ , ಉರ್ದು ಪ್ರೈಮರಿ ಸ್ಕೂಲ್ ಎನ್ನುವ ಜಾಗಗಳಲ್ಲಿಯಂತೂ ಕೊಡಬಾರದ ಕಷ್ಟಗಳನ್ನು ಕೊಡುತ್ತಾರೆ. ಆದ್ದರಿಂದ ನಮ್ಮ ಶಿಕ್ಷಣ ಸಚಿವರು ಇಲ್ಲಿ ಇಲ್ಲ. ಶಿಕ್ಷಣ ಸಚಿವರುಗಳಿಗೆ ತಮ್ಮ ಮೂಲಕ ನಾನು ತಿಳಿಯಬಯಸುತ್ತಿದ್ದೇನೆ. ಈ ಒಂದುಕೆಟ್ಟ ಪದ್ಧತಿ ಏನು ನಡೆಯುತ್ತಿದೆ ಅಭ್ಯಾಸ, ಅದನ್ನು ನಿಲ್ಲಿಸುವಂಥ ಕೆಲಸ ಮಾಡಿದರೆ ಆ ಬಡ ಮಕ್ಕಳು ನಮ್ಮ ಶಾಲೆಗಳಲ್ಲಿ ಬರುವವರೆಲ್ಲಾ ಬಡಮಕ್ಕಳು. ಅವರು ಅಭಿವೃದ್ಧಿ ಹೊಂದುವುದಕ್ಕೆ ಅನುಕೂಲವಾಗುತ್ತದೆ ಎಂದು ಹೇಳುತ್ತಿದ್ದೇನೆ.

ಛೇರ್ಮನ್ : ಎರಡು ಗಂಟೆಯಾಯಿತು. ಇಲಾಖೆಯ ಬಗ್ಗೆ ಮಾತನಾಡುವಾಗ ಅದಕ್ಕೆ ಸ್ವಲ್ಪ ರಿಸರ್ವ್ ಇಡಿ.

ಶ್ರೀ ಎ. ಕೆ. ಅನಂತಕೃಷ್ಣ : ಇನ್ನೇನು ಮುಗಿಸಿಬಿಡುತ್ತೇನೆ ಸ್ವಾಮಿ. ಇಷ್ಟೇ ತಡೆದು ಕೊಂಡಿದ್ದೀರಿ. ಇನ್ನು ಸ್ವಲ್ಪ ಹೊತ್ತು. ಅರ್ಬನ್ ಡೆವಲಪ್‌ಮೆಂಟ್ ಮಂತ್ರಿಗಳು ಅವರಿಗೆ ಒಂದು ಕಿವಿ ಮಾತನ್ನು ಹೇಳಬೇಕು. ಸ್ವಾಮಿ, ಮಾನ್ಯ ಮುಖ್ಯಮಂತ್ರಿಗಳು ಒಂದು ಹೇಳಿದ್ದಾರೆ. Training of personnel to carry out research in urban development in the Institute for Human Settlement and Urban Management. ಯಾರ ಸಹಾಯದಿಂದ? ಕೆ.ಇ.ಬಿ., ಬಿ.ಡಿ.ಎ., ವಾಟರ್ ಬೋರ್ಡ್, ಬಿಸಿಸಿ, ಎಬಿಸಿಡಿ ಎಕ್ಸ್‌ವೈಜಡ್ ಎಂದು. ಇವೆಲ್ಲಾ ಅಧೋಗತಿಯಲ್ಲಿರುವವು . ಇವರಿಗೆ ತರಬೇತಿ ಕೊಡಬೇಕಾಗಿದೆ. Entire lot of blind people to lead other blind people. ಇವರಿಂದ ಯಾವ ಒಂದು ಪ್ರಗತಿ ಸಾಧನೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಹೆಚ್‌ಯುಡಿ ಡಿಪಾರ್ಟ್‌ಮೆಂಟಿನಲ್ಲಿ ಯಾವ ಮ್ಯಾನೇಜ್‌ಮೆಂಟ್ ಯಾವ ರೀತಿ ಇದೆ ಎಂದು ತಮಗೆ ಗೊತ್ತಿದೆ. ಲಂಚ ರುಷುವತ್ತು, ಅದ್ಯಕ್ಷತೆ, ಸಾಮೂಹಿಕವಾಗಿ ಸಮಾಜ ನಿರ್ನಾಮ ಮಾಡುವಂಥ ಕೆಲಸಗಳನ್ನು ಮಾಡುವಂಥವರು. ಅವರು ಮೇಲೆ ಯಾವ ನಿಯಂತ್ರಣವೂ ಇಲ್ಲ. ಯಾವ ಸೂಕ್ತವಾದ ಪದ್ಧತಿಯೂ ಸರಿಯಾಗಿಲ್ಲ. ಅವರಿಂದ ನೀವು ತರಬೇತಿ ಅಲ್ಲಿರುವವರಿಗೆ ಕೊಡಬೇಕು ಎಂದರೆ ಇದೇನಾದರೂ ಪರಿಣಾಮಕಾರಿಯಾಗಿ ಕೆಲಸ ವಾಗುತ್ತದೆಯೇ? ಆದ್ದರಿಂದ ನೀವು ನಿಜವಾಗಿಯೂ ತರಬೇತಿಯನ್ನು ಕೊಡಬೇಕಾಗಿದ್ದರೆ ಮೊದಲು ಆ ಒಂದು ಕೆ.ಇ.ಬಿ., ಬಿಡಿಎ, ವಾಟರ್ ಬೋರ್ಡ್, ಬಿಸಿಸಿ ಇವೆಲ್ಲಾ ಏನಿದೆ, ಅವರಲ್ಲಿರುವ ಜನಕ್ಕೆ ದಕ್ಷತೆ, ನಿಷ್ಠೆ , ಉದ್ಭವವಾಗುವ ರೀತಿಯಲ್ಲಿ ತಾವು ಕೆಲಸ ಮಾಡಬೇಕು. ತಮ್ಮ ಆಡಳಿತದ ಒಂದು ನಿಯಂತ್ರಣ ತೀವ್ರವಾಗಿ ಅವರ ಮೇಲೆ ಇರಬೇಕು.

ಅದು ಒಂದು ಮಾಡಿದರೆ ಸ್ವಯಂಪ್ರೇರಿತರಾಗಿ ತರಬೇತಿ ಸ್ವಯಂ ತೆಗೆದುಕೊಳ್ಳುತ್ತಾರೆ. ಅವರೇ ಸ್ವಯಂ ಆಚಾರ್ಯಪುರುಷರಾಗುತ್ತಾರೆ. ಆ ಕೆಲಸವನ್ನು ಮಾಡಬೇಕು. ಪ್ರಾಮಾಣಿಕತೆ ಇಲ್ಲದಿದ್ದಾಗ ಮೇಲಿಂದ ಕೆಳಗಿನವರೆಗೂ ಯಾವ ಅಪ್ರಮಾಣಿಕತೆಯ ತರಬೇತಿಯನ್ನು ನಾವು ಕೊಡುವುದಾಗುತ್ತದೆ ಹೇಳಿ. ಆದ್ದರಿಂದ ಈ ಕೆಲಸವನ್ನು ನಮ್ಮಲ್ಲಿ ಆಕ್ಟ್ ಏನು ಇದೆ , ಕೆ.ಇ.ಬಿ.ಆಕ್ಟ್ ಆಗಿರಲಿ, ಕಾರ್ಪೋರೇಷನ್ ಆಕ್ಟ್ ಆಗಿರಲಿ, ಮಾನ್ಯ ಮಂತ್ರಿಗಳು ನಮ್ಮ ಕಡೆ ಗಮನ ಕೊಡುವುದಾದರೆ ನಾನು ಮುಂದುವರೆಸುತ್ತೇನೆ. ಆಕ್ಟ್ ಏನು ಇದೆ, ಆ ಆಕ್ಟನ್ನು ಜಾರಿಮಾಡಿ. ಕಾನೂನನ್ನು ಜಾರಿ ಮಾಡಿ. ಆ ಕಾನೂನನ್ನು ಜಾರಿ ಮಾಡದೇ ಹೋದರೆ ನೀವು ಯಾವ ತರಬೇತಿ ಕೊಟ್ಟರೂ ಏನೂ ಮಾಡುವುದಿಲ್ಲ. ಇದನ್ನು ಬಿಟ್ಟು ನ್ಯಾಷನಲ್ ಮತ್ತು ಇಂಟರ್‌ನ್ಯಾಷನಲ್ ಲೆವಲ್ ಆರ್ಗನೈಜೇಷನ್‌ನ ತರಬೇತಿ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೀರಿ. ನಮ್ಮಲ್ಲಿ ತರಬೇತಿ ತೆಗೆದುಕೊಂಡವರು ಸಾಕಷ್ಟು ಜನರು ಇದ್ದಾರೆ. ಅವರು ಅನುಭವ ಇಟ್ಟುಕೊಂಡಂಥವರು ಇದ್ದಾರೆ ಅಭಿಮಾನಿ ಪೂರಕವಾಗಿರುವವರು ಇದ್ದಾರೆ. ನಿಷಾತವಂತರು ಇದ್ದಾರೆ. ಅವರನ್ನು ಮೊದಲು ಉಪಯೋಗಿಸಿ. ಇನ್ನು ಸ್ಯಾಟಲೈಟ್ ಟೌನ್ ಡೆವಲಪ್‌ಮೆಂಟ್ ಬಗ್ಗೆ ಹೇಳುತ್ತೇನೆ. ಬಹಳ ಒಳ್ಳೆಯದು. ನಾನು ಒಂದು ಮಾತು ಹೇಳುತ್ತೇನೆ. ಈ ಅಥಾರಿಟೀಸ್ ಮಾಡಬೇಕೆಂದು ತಾವು ಹೊರಟಿದ್ದೀರಿ, ಈ ಅಥಾರಿಟೀಸ್ ಮಾಡಬೇಕಾಗಿದ್ದರೆ ಮತ್ತೆ ಇದು ಬ್ಯೂರೋಕ್ರಾಟ್ಸ್ ಕಮಿಟಿಗಳು ಆಗಬಾರದು. ಬ್ಯೂರೋಕ್ರಾಟ್ಸ್‌ನಿಂದ ಇವತ್ತು ನಮಗೆ ಏನು ಅನ್ಯಾಯ ಆಗಿದೆ? ನಮ್ಮ ಆಡಳಿತದಲ್ಲಿ ಎಷ್ಟು ಅದಕ್ಷತೆ ಬಂದಿದೆ? ಮೌಲ್ಯ ಎಷ್ಟು ಕೆಳಗೆ ಇಳಿದು ಹೋಗಿದೆ ಅಂದರೆ ಮತ್ತೆ ಮತ್ತೆ ಇವತ್ತು ಇಲ್ಲಿದ್ದು ನಾಳೆ ಬೇರೆ ಕಡೆ ಹೋಗುವಂತಹ ಬ್ಯೂರೋಕ್ರಾಟ್ಸ್‌ನ್ನು ಇಟ್ಟುಕೊಂಡು ಕಮಿಟಿ ಮಾಡಿ, ಅದನ್ನೇ ಹೈಪವರ್ ಕಮಿಟಿ ಎಂದು ಹೇಳಿ ಸಾರ್ವಜನಿಕರ ಮೇಲೆ, ಅವರ ತಲೆಯ ಮೇಲೆ ಹೊಡೆಯುವ ರೀತಿಯಲ್ಲಿ ಅವರನ್ನು ಹೈಪವರ್ ಮಾಡುತ್ತೀರಿ. ಮಾಡಿ ಅವರು ಹೈಯೆಸ್ಟ್ ಲೆವಲ್‌ನಿಂದ ಮನೆಯಲ್ಲಿ ಕುಳಿತುಕೊಂಡು ಏರ್‌ಕೂಲ್ ಛೇಂಬರ್‌ನಲ್ಲಿ ಕುಳಿತುಕೊಂಡು ತೀರ್ಮಾನ ಮಾಡಿದ್ದುದು. ಅದೇ ಒಂದು ಯೋಜನೆ ಎಂದು ಹೇಳಿ ಜನಗಳ ಮೇಲೆ ಹೇರುವುದಾದರೆ ಅದು ಕಾರ್ಯಗತ ಆಗುವುದಿಲ್ಲ. ಇದುವರೆಗೆ ಬಹಳ ಕಾರ್ಯಗತ ಆಗಿಲ್ಲ, ಇನ್ನು ಆಗುವುದಕ್ಕೆ ಸಾಧ್ಯವೂ ಇಲ್ಲ. ಆದ್ದರಿಂದ ಯಾರು ಒಂದು ದಕ್ಷತೆಯಿಂದ, ನಿಷ್ಠೆಯಿಂದ ಸಮಾಜದ ಮೇಲೆ ಪ್ರೇಮ ಇಟ್ಟುಕೊಂಡಿದ್ದಾರೆ, ನಾಗರೀರ ಮೇಲೆ ಪ್ರೇಮ ವಿಶ್ವಾಸ ಇಟ್ಟುಕೊಂಡಿದ್ದಾರೆ, ಅಂತಹವರಲ್ಲಿ ಕೆಲವರನ್ನು ಆರಿಸಿ ಅವರನ್ನೂ ಸೇರಿಸಿ ನಿಮ್ಮ ಅಧಿಕಾರಿಗಳ ಜೊತೆಯಲ್ಲಿ ಒಂದು ಸರಿಯಾದಂತಹ ಸಮಿತಿಯನ್ನು ಮಾಡಿದರೆ, ಮಾತ್ರ ಯೋಜನೆ ಪರಿಪೂರ್ಣವಾಗಿ ಮಾಡುವುದಕ್ಕೆ ಅನುಕೂಲವಾಗುತ್ತದೆ ಮತ್ತು ಪ್ರಭಾವವಂತವಾಗಿ ಯೋಜನೆ ಆಗುತ್ತದೆ. ಆದ್ದರಿಂದ ನೀವು ಪೀಪಲ್ಸ್ ಇನ್‌ವಾಲ್ವ್‌ಮೆಂಟ್ ಎಂದು ಏನು ಹೇಳುತ್ತೀರಿ ಡೆಮಾಕ್ರಾಟಿಕ್ ಕಾನ್‌ಸೆಪ್ಟ್‌ನಲ್ಲಿ..........

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು ಈಗಾಗಲೇ ಎರಡು ತಾಸಿನಿಂದ ಮಾತನಾಡುತ್ತಿದ್ದಾರೆ. ಒಳ್ಳೆಯ ಮಾತನಾಡುತ್ತಾರೆ. ಆದರೆ ಡಿಮ್ಯಾಂಡ್ ಮೇಲೆ ಬೇರೆ ವಿಷಯ ಮಾತನಾಡಬಹುದು.

ಛೇರ್ಮನ್ : ತಾವು ಎರಡೂವರೆ ತಾಸಿನಿಂದ ಮಾತನಾಡುತ್ತಿದ್ದೀರಿ. ಇನ್ನೂ ಎಷ್ಟು ಮಂದಿ ಇದ್ದಾರೆ ನೋಡಿ.

ಛೇರ್ಮನ್ : ತಾವು ಎರಡೂವರೆ ತಾಸಿನಿಂದ ಮಾತನಾಡುತ್ತಿದ್ದೀರಿ. ಇನ್ನೂ ಎಷ್ಟು ಮಂದಿ ಇದ್ದಾರೆ ನೋಡಿ.

ಶ್ರೀ ಎ. ಕೆ. ಅನಂತಕೃಷ್ಣ : ಮುಗಿಸಿಬಿಡುತ್ತೇನೆ.

ಛೇರ್ಮನ್ : ನಾಳೆ ಡಿಪಾರ್ಟ್‌ಮೆಂಟ್ ಮೇಲೆ ಮಾತನಾಡಿ.
ಶ್ರೀ ಎ. ಕೆ. ಅನಂತಕೃಷ್ಣ : ಮುಗಿಸಿಬಿಡುತ್ತೇನೆ.

ಛೇರ್ಮನ್ : ನಾಳೆ ಡಿಪಾರ್ಟ್‌ಮೆಂಟ್ ಮೇಲೆ ಮಾತನಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅರ್ಬನ್ ಡೆವಲಪ್‌ಮೆಂಟ್ ಇದೆ, ಅವರು ಮಾತನಾಡಲಿ. ಈಗಾಗಲೇ ಎರಡು ತಾಸಿನಿಂದ ಮಾತನಾಡುತ್ತಿದ್ದಾರೆ.

ಶ್ರೀ ಎ. ಕೆ. ಅನಂತಕೃಷ್ಣ : ರ್‍ಯಾಪಿಡ್ ಟ್ರಾನ್ಸಿಟ್ ಸಿಸ್ಟಂಗೆ ಬಂದಿದ್ದೇನೆ.

ಛೇರ್ಮನ್ : ನಾಳೆ ಡಿಪಾರ್ಟ್‌ಮೆಂಟ್ ಮೇಲೆ ಮಾತನಾಡಿ. ಮಾನ್ಯ ಪಿ. ಜಿ. ಆರ್. ಸಿಂಧ್ಯ ಹಾಗೂ ವಾಟಾಳ್ ನಾಗರಾಜ್ ಅವರು ಆಡಿದ ಮಾತುಗಳನ್ನು ಕಡತದಿಂದ ತೆಗೆದು ಹಾಕಲಾಗಿದೆ.

ಶ್ರೀ ಎ. ಕೆ. ಅನಂತಕೃಷ್ಣ : ಈಗ ಸ್ಲಮ್ ವಿಷಯದಲ್ಲಿ ಒಂದೇ ಒಂದು ಮಾತು ಹೇಳುತ್ತೇನೆ.

ಛೇರ್ಮನ್ : ಈಗ ಸಭೆಯನ್ನು ಮುಂದೂಡಿ, ನಾಳೆ ಬೆಳಿಗ್ಗೆ 9.30ಕ್ಕೆ ಪುನಃ ಸಮಾವೇಶಗೊಳ್ಳುತ್ತದೆ.

(ಸದನವು ರಾತ್ರಿ 7.02ಕ್ಕೆ ಮುಕ್ತಾಯವಾಗಿ ದಿನಾಂಕ 5.3.93ರ ಬೆಳಿಗ್ಗೆ 9.30ಕ್ಕೆ ಸಮಾವೇಶಗೊಳ್ಳಲು ನಿಶ್ಚಯಿಸಿತು)

(* ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತಾರೆ.)